

# “ಧರ್ಮ ಹಾಗೂ ಯೋಗ ಇವುಗಳ ನಡುವಿನ ಭಿನ್ನತೆ”

ಅಖಿಲ ಭಾರತ ಪತ್ರಿಕೆ

ಜುಲೈ – 2013



*“Not by Reason was creation made and not by Reason can the Truth be seen...”*

**- Sri Aurobindo**

# ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

**ಬೆಲೆ : 15/–**


## ಪರಿವಿಡಿ

### "ಧರ್ಮ ಹಾಗೂ ಯೋಗ ಇವುಗಳ ನಡುವಿನ ಭಿನ್ನತೆ"

**ಶ್ರೀ ಮಾತೆಯವರ ನುಡಿಗಳು**


**ಅನು : ಡಾ. ಕೆ.ಎಸ್. ಆಮೂರ**
ಧರ್ಮ ಹಾಗೂ ಯೋಗ ಇವುಗಳ ನಡುವಿನ ಭಿನ್ನತೆ 3
ಧರ್ಮದ ಸ್ವರೂಪ 4
ಆಧ್ಯಾತ್ಮಿಕ ಜೀವನಕ್ಕೆ ಧರ್ಮ ಅಡೆತಡೆಯಾಗಿದೆಯೆ? 6
ಧರ್ಮಗಳಲ್ಲಿರುವ ಮೂಲಭೂತ ದೋಷ 9
ಆಧ್ಯಾತ್ಮಿಕ ಜೀವನಕ್ಕಾಗಿ ಒಂದು ನಿಬಂಧನೆ 11

**ಅನು : ಶ್ರೀ ಪುರುಷೋತ್ತಮ ಗಲಗಲಿ**
ಯೋಗದ ಸ್ವರೂಪ 13

**ಅನು : ಡಾ. ಕೆ.ಎಸ್. ಆಮೂರ**
ಸ್ವಾತಂತ್ರ್ಯ ಮತ್ತು ವಿಧಿ ಪ್ರಾಬಲ್ಯ, ಯೋಗದ ಗುರಿ 15
ಚಿಕ್ಕ ಹಡಗಿನ ಮೇಲಿದ್ದ ಇಬ್ಬರು ಪಾದ್ರಿಗಳ ಕತೆ 18

**ಅನು : ಡಾ. (ಶ್ರೀಮತಿ) ಪಾರ್ವತಿ ನಾರಾಯಣರಾವ**
ಧಾರ್ಮಿಕ ಸ್ಮಾರಕಗಳಲ್ಲಿರುವ ವಾತಾವರಣ 22

**ಅನು : ಡಾ. (ಶ್ರೀಮತಿ) ಮಧುಮತಿ ಕುಲಕರ್ಣಿ**
ಧರ್ಮಗಳು ಸೃಷ್ಟಿಸಿದ ಸ್ವರ್ಗ ಹಾಗೂ ನರಕ 24
ಧರ್ಮಗಳಲ್ಲಿ ಸನ್ಯಾಸ ಹಾಗೂ ನಿರ್ವಾಣಗಳ ಕಲ್ಪನೆ 29

**ಅನು : ಡಾ. (ಶ್ರೀಮತಿ) ಪಾರ್ವತಿ ನಾರಾಯಣರಾವ**
ನೈತಿಕತೆ ಮತ್ತು ಆಧ್ಯಾತ್ಮಿಕತೆ ಇವುಗಳ ನಡುವಿನ ಭಿನ್ನತೆ 32

**ಅನು : ಡಾ. ಕೆ.ಎಸ್. ಆಮೂರ**
ಶ್ರೀ ಅರವಿಂದರ ಬೋಧನೆ ಹೊಸ ಧರ್ಮವಾಗಿದೆಯೆ? 35
ಭವಿಷ್ಯತ್ತಿನಲ್ಲಿ ಧರ್ಮ 37


**ಶ್ರೀ ಅರವಿಂದರ ನುಡಿಗಳು**


**ಅನು : ಡಾ. ಕೆ.ಎಸ್. ಆಮೂರ**
ಆಧ್ಯಾತ್ಮಿಕತೆ ಎಂದರೇನು? 39
ಸಾಮಾನ್ಯ ಜೀವನ, ಧಾರ್ಮಿಕ ಜೀವನ, ಆಧ್ಯಾತ್ಮಿಕ ಜೀವನ 40
ಧರ್ಮವೆಂದರೇನು? 44
ಪ್ರಶ್ನೋತ್ತರಗಳು 47
ಧಾರ್ಮಿಕ ಮತಾಂಧತೆ 50

**ವಾರ್ತಾಪತ್ರ** 52



* ಅ.ಭಾ.ಪ. ದ ಈ ಸಂಚಿಕೆಯೊಳಗಿನ ಹಲವಾರು ಲೇಖನಗಳು ನವ್ಹೆಂಬರ 2001 ರ ಅ.ಭಾ.ಪ. ದ ಸಂಚಿಕೆಯಲ್ಲಿ ಪ್ರಕಟವಾಗಿದ್ದವು ಅನುವಾದ ಕಾರ್ಯದಲ್ಲಿ ಆಗ ನಮಗೆ ಸಲ್ಲಿಸಿದ ಸಹಾಯಕ್ಕಾಗಿ ಅಂದಿನ ಅನುವಾದಕರೆಲ್ಲರಿಗೂ ಕೃತಜ್ಞತೆಗಳು ಸಲ್ಲುತ್ತವೆ.

(ಸಂ)


*

**ಧರ್ಮ ಹಾಗೂ ಯೋಗ ಇವುಗಳ ನಡುವಿನ ಭಿನ್ನತೆ**

ಆಧ್ಯಾತ್ಮಿಕ ಜೀವನ, ಧಾರ್ಮಿಕ ಜೀವನ ಮತ್ತು ನೈತಿಕತೆ ಒಂದು ಭಾಗವಾಗಿರುವ ಸಾಮಾನ್ಯ ಮಾನವ ಜೀವನ ಇವು ಮೂರು ಭಿನ್ನ ವಿಷಯಗಳು ಮತ್ತು ಮನುಷ್ಯ ತಾನು ಯಾವುದನ್ನು ಇಷ್ಟಪಡುತ್ತಾನೆ ಎಂಬುದನ್ನು ತಿಳಿದುಕೊಂಡಿರಬೇಕು. ಆ ಮೂರನ್ನೂ ಒಟ್ಟಿಗಿರಿಸಿ ಗೊಂದಲಕ್ಕೀಡಾಗಬಾರದು.

**(22/137)** – ಶ್ರೀ ಅರವಿಂದರು

*

ಶ್ರೀಮಾತೆಯವರ ಮಾತುಕತೆಗಳು ಹಾಗೂ ಬರಹಗಳು ಮತ್ತು ಶ್ರೀ ಅರವಿಂದರ ಬರಹಗಳು ಇವುಗಳಿಂದ ಆಯ್ದುಕೊಂಡ ನುಡಿಗಳ ಸಂಕಲನ.

*

## ಧರ್ಮ ಹಾಗೂ ಯೋಗ ಇವುಗಳ ನಡುವಿನ ಭಿನ್ನತೆ

**ಪ್ರಶ್ನೆ :** *ಮಧುರ ಮಾತೆಯವರೆ, ಧರ್ಮ ಹಾಗೂ ಯೋಗ ಇವುಗಳ ನಡುವಿರುವ ಭಿನ್ನತೆ ಏನು?*

**ಶ್ರೀಮಾತೆ :** ಅಹಾ, ನನ್ನ ಮಗು, ಇದು ನಾಯಿ ಹಾಗೂ ಬೆಕ್ಕು ಇವುಗಳ ನಡುವಿರುವ ವ್ಯತ್ಯಾಸವನ್ನು ವಿವರಿಸು ಎಂಬಂತಿದೆ.

(ದೀರ್ಘ ಮೌನ)

ಒಬ್ಬ ವ್ಯಕ್ತಿಯನ್ನು ಕಲ್ಪನೆಗೆ ತಂದುಕೋ, ಅವನು ಒಂದಿಲ್ಲೊಂದು ಬಗೆಯಿಂದ ಭಗವಂತ ಎಂದು ಕರೆಸಿಕೊಳ್ಳುವವನು ಒಬ್ಬನಿದ್ದಾನೆಂದು ಕೇಳಿದ್ದಾನೆ ಇಲ್ಲವೆ ವೈಯಕ್ತಿಕವಾಗಿ ಅವನಿಗೆ ಭಗವಂತನ ಅಸ್ತಿತ್ವದ ಬಗ್ಗೆ ಭಾವನೆ ಉಂಟಾಗಿದೆ. ಅವನು ಈ ಭಗವಂತನನ್ನು ಅರಸಲು ಎಲ್ಲ ಬಗೆಯ – ಸಂಕಲ್ಪದ, ಶಿಸ್ತುಪಾಲನೆಯ, ಏಕಾಗ್ರತೆಯ – ಪ್ರಯತ್ನಗಳನ್ನು ಮಾಡುತ್ತಾನೆ. ಭಗವಂತ ಯಾರೆಂದು ತಿಳಿದುಕೊಳ್ಳಲು, ಅವನ ಪರಿಚಯ ಮಾಡಿಕೊಳ್ಳಲು, ಅವನೊಂದಿಗೆ ಏಕತೆ ಪಡೆಯಲು ಪ್ರಯತ್ನ ಮಾಡುತ್ತಾನೆ. ಇಂತಹ ವ್ಯಕ್ತಿ ಯೋಗವನ್ನು ಆಚರಿಸುತ್ತಿದ್ದಾನೆಂದು ಹೇಳಬಹುದು.

ಇನ್ನು ಈ ವ್ಯಕ್ತಿ, ತಾನು ಉಪಯೋಗಿಸಿದ ಎಲ್ಲ ವಿಧಾನಗಳನ್ನು ಗಮನಿಸಿ ಒಂದು ನಿಶ್ಚಿತ ಪದ್ಧತಿಯನ್ನು ರಚಿಸುತ್ತಾನೆ ಮತ್ತು ತಾನು ಕಂಡುಕೊಂಡದ್ದೆಲ್ಲ ಅಪ್ಪಟ ನಿಯಮಗಳೆಂದು ಪ್ರತಿಪಾದಿಸುತ್ತಾನೆ ಮತ್ತು: "ಭಗವಂತನು ಹೀಗಿದ್ದಾನೆ, ಅವನನ್ನು ಕಾಣಲು ನೀವು ಹೀಗೆ ಮಾಡಬೇಕು, ಇಂತಹ ಸಂಜ್ಞೆ ಮಾಡಬೇಕು, ಈ ಮನೋಭಾವ ಹೊಂದಿರಬೇಕು, ಈ ವ್ರತಾಚರಣೆ ಮಾಡಬೇಕು ಮತ್ತು ನೀವು ಇದೇ ಸತ್ಯವೆಂದು ಒಪ್ಪಿಕೊಳ್ಳಬೇಕು" ಎಂದು ಹೇಳುತ್ತಾನೆ. ನೀನು ಹೇಳಬೇಕು: "ನಾನು ಇದೇ ಸತ್ಯವೆಂದು ತಿಳಿದು ಅದಕ್ಕೆ ಅಂಟಿಕೊಂಡಿರುತ್ತೇನೆ. ನೀವು ಹೇಳಿದ ವಿಧಾನವೊಂದೇ ಸರಿಯಾದದ್ದು, ಅದಷ್ಟೇ ಅಸ್ತಿತ್ವದಲ್ಲಿದೆ." ಇದೆಲ್ಲವನ್ನೂ ಬರೆದಿಟ್ಟು, ಸಂಘಟಿಸಿ, ನಿಶ್ಚಿತ ನಿಯಮಗಳನ್ನು, ಆಚರಣೆಯ ವಿಧಾನಗಳನ್ನು ವ್ಯವಸ್ಥಿತಗೊಳಿಸಿದ್ದಾದರೆ ಅದು 'ಧರ್ಮ'ವಾಗುತ್ತದೆ.

**(8/147)** **– ಶ್ರೀಮಾತೆ**

*



## ಧರ್ಮದ ಸ್ವರೂಪ

**ಪ್ರಶ್ನೆ :** *ಧರ್ಮದ ಸ್ವರೂಪ ನಿಖರವಾಗಿ ಎಂತಹದಿದೆ? ಆಧ್ಯಾತ್ಮಿಕ ಜೀವನದ ಮಾರ್ಗಕ್ಕೆ ಅದರಿಂದ ಅಡೆತಡೆ ಉಂಟಾಗುತ್ತದೆಯೆ?*

**ಶ್ರೀಮಾತೆ :** ಧರ್ಮವು ಮಾನವತೆಯ ಉಚ್ಚತರ ಮನಸ್ಸಿಗೆ ಸೇರಿದುದಾಗಿದೆ. ಮನುಷ್ಯನ ಉಚ್ಚತರ ಮನಸ್ಸು, ತನ್ನ ಸಾಮರ್ಥ್ಯಕ್ಕೆ ಸಾಧ್ಯವಿದ್ದಷ್ಟು ತನ್ನನ್ನು ಮೀರಿದ್ದನ್ನು ಸಮೀಪಿಸಲು ಪ್ರಯತ್ನಿಸುತ್ತದೆ. ಮನುಷ್ಯನ ಮನಸ್ಸನ್ನು ಮೀರಿದ ಇದಕ್ಕೆ ಮಾನವತೆ ದೇವರು, ಆತ್ಮ, ಸತ್ಯ, ಶ್ರದ್ಧೆ, ಜ್ಞಾನ, ಅನಂತ ಇಲ್ಲವೆ ಒಂದು ಬಗೆಯ ಪರಿಪೂರ್ಣತೆ ಇತ್ಯಾದಿ ಹೆಸರುಗಳನ್ನು ಕೊಡುತ್ತದೆ. ಇದನ್ನು ಮಾನವತೆ ತಲುಪಲಾಗದಿದ್ದರೂ, ತಲುಪಲು ಪ್ರಯತ್ನಿಸುತ್ತದೆ. ಧರ್ಮವು ಅದರ ಮೂಲದಲ್ಲಿ ದೈವಿಕವಾಗಿರಬಹುದು, ಆದರೆ ಅದರ ನಿಜವಾದ ಸ್ವರೂಪದಲ್ಲಿ ದೈವಿಕವಾಗಿರದೆ ಮಾನವಸಹಜವಾಗಿರುತ್ತದೆ. ನಿಜವಾಗಿ ನಾವು 'ಧರ್ಮ'ದ ಬಗ್ಗೆ ಮಾತನಾಡುವುದಕ್ಕಿಂತಲೂ ಹೆಚ್ಚಾಗಿ ಧರ್ಮಗಳ ಬಗ್ಗೆ ಮಾತನಾಡಬೇಕು. ಏಕೆಂದರೆ ಮಾನವ ನಿರ್ಮಿತ ಧರ್ಮಗಳು ಹಲವಾರಿವೆ. ಬೇರೆ, ಬೇರೆಯಾದ ಈ ಧರ್ಮಗಳ ಮೂಲ ಒಂದೇ ಇರದೆ ಹೋದರೂ, ಇವೆಲ್ಲವೂ ರಚನೆಗೊಂಡ ರೀತಿ ಒಂದೇ ಆಗಿದೆ.

ಕ್ರಿಶ್ಚಿಯನ್ ಧರ್ಮ ಹೇಗೆ ಅಸ್ತಿತ್ವದಲ್ಲಿ ಬಂದಿತೆಂಬುದು ನಮಗೆ ತಿಳಿದಿದೆ. ನಿಶ್ಚಿತವಾಗಿ ಕ್ರಿಶ್ಚಿಯನ್ ಧರ್ಮ ಎಂಬುದನ್ನು ಜೀಸಸ್ ಸ್ಥಾಪಿಸಲಿಲ್ಲ, ಆದರೆ ಪಂಡಿತರಾದ ಕೆಲವರು, ಚತುರರಾದ ಹಲವಾರು ಜನರು ಕೂಡಿಕೊಂಡು ಅದು ಇಂದು ಕಂಡುಬರುವ ರೀತಿಯಲ್ಲಿ ನಿರ್ಮಾಣ ಮಾಡಿದರು. ಅದು ರೂಪಗೊಂಡ ರೀತಿಯಲ್ಲಿ ದೈವಿಕವಾದುದೇನೂ ಇರಲಿಲ್ಲ. ಅದು ಕಾರ್ಯ ಮಾಡುವ ರೀತಿಯಲ್ಲಿಯೂ ಕೂಡ ದೈವಿಕವಾದುದು ಏನೂ ಇಲ್ಲ. ಆದರೂ ಅದರ ನಿರ್ಮಾಣಕ್ಕಾಗಿ ನೆಪ ಅಥವಾ ಸಂದರ್ಭ ನಿಸ್ಸಂಶಯವಾಗಿ ದೈವೀಪುರುಷನೆಂದು ಕರೆಯಬಹುದಾದ ವ್ಯಕ್ತಿಯ ದಿವ್ಯದರ್ಶನದ್ದಾಗಿತ್ತು. ಈ ವ್ಯಕ್ತಿಯು ತನ್ನೊಡನೆ ಪೃಥ್ವಿಯ ಸಲುವಾಗಿ ಜ್ಞಾನ, ಹಾಗೂ ಸತ್ಯಗಳನ್ನು ಉನ್ನತ ಸ್ತರಗಳಿಂದ ತೆಗೆದುಕೊಂಡು ಎಲ್ಲಿಂದಲೋ ಬಂದಿದ್ದನು. ಅವನು ಬಂದು ಸಾರಿದ ಸತ್ಯಕ್ಕಾಗಿ ನೋವನ್ನು ಅನುಭವಿಸಿದನು. ಆದರೆ ಅವನು ಹೇಳಿದ್ದನ್ನು ಅತಿ ಕಡಿಮೆ ಜನ ಅರ್ಥಮಾಡಿಕೊಂಡರು. ಅವನು ಯಾವ ಸತ್ಯದ ಸ್ಥಾಪನೆಗಾಗಿ ನೋವನ್ನು ಅನುಭವಿಸಿದ್ದನೋ ಅದನ್ನು ಕಂಡುಕೊಂಡು ಅದಕ್ಕೆ ಅಂಟಿಕೊಳ್ಳಲು ಆಸಕ್ತಿ

ತೋರಿಸಿದ ಜನ ಅತಿ ಕಡಿಮೆ.

ಭಗವಾನ್ ಬುದ್ಧ ಪ್ರಾಪಂಚಿಕ ಜೀವನದಿಂದ ನಿವೃತ್ತನಾಗಿ ಧ್ಯಾನದಲ್ಲಿ ಕುಳಿತುಕೊಂಡನು. ಪೃಥ್ವಿಯ ಮೇಲಿರುವ ನೋವು, ದುಃಖ, ರೋಗ ರುಜಿನಗಳು, ಸಾವು, ಆಸೆ, ಪಾಪ, ಹಸಿವೆ ಇವುಗಳಿಂದಾಗುವ ತಾಪದ ಶಮನಕ್ಕೆ ಮಾರ್ಗವೊಂದನ್ನು ಕಂಡುಕೊಂಡನು. ಅದನ್ನು ಅಭಿವ್ಯಕ್ತಗೊಳಿಸಲು ಹಾಗೂ ಶಿಷ್ಯರಿಗೆ, ತನ್ನ ಸುತ್ತ ನೆರೆದ ಜನರಿಗೆ ತಿಳಿಸಿಕೊಡಲು ಪ್ರಯತ್ನಿಸಿದನು. ಆದರೆ ಬುದ್ಧ ನಿರ್ವಾಣ ಪಡೆಯುವ ಮೊದಲೇ ಅವನ ಉಪದೇಶ ತಿರುಚುವಿಕೆಗೆ, ವಿರೂಪಗೊಳ್ಳುವುದಕ್ಕೆ ಒಳಗಾಗಲು ಪ್ರಾರಂಭಿಸಿತ್ತು. ಬುದ್ಧನ ನಿರ್ವಾಣದ ನಂತರ ಬೌದ್ಧಮತವು ಪೂರ್ಣ ಸ್ವರೂಪದ ಒಂದು ಧರ್ಮವಾಗಿ ತಲೆಯೆತ್ತಿತು. ಬುದ್ಧನು ಹೇಳಿದ್ದನೆಂದು ತಿಳಿಯಲಾದ ವಚನಗಳ ಆಧಾರ ಹಾಗೂ ಈ ರೀತಿ ವರದಿಯಾದ ವಚನಗಳ ಪ್ರಾಮುಖ್ಯತೆ ಏನೆಂಬುದನ್ನು ತಿಳಿದುಕೊಂಡುದುದರ ಆಧಾರ ಈ ಧರ್ಮಕ್ಕೆ ತಳಪಾಯ ಒದಗಿಸಿದವು. ಮುಂದೆ ಸ್ವಲ್ಪ ಸಮಯದಲ್ಲಿಯೇ ಬುದ್ಧನ ಶಿಷ್ಯಂದಿರು ಹಾಗೂ ಶಿಷ್ಯಂದಿರ ಶಿಷ್ಯಂದಿರು ಗುರುವಿನ ಬೋಧನೆಯನ್ನು ಒಂದೇ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಸಮರ್ಥರಾಗದೆ ಅವರಲ್ಲಿ ಭಿನ್ನಾಭಿಪ್ರಾಯ ಉಂಟಾಗಿ ಹಲವಾರು ಉಪಪಂಥಗಳು ಮೂಲ ಬೌದ್ಧ ಮತದಿಂದ ಹುಟ್ಟಿಕೊಂಡವು. ದಕ್ಷಿಣಪಥ, ಉತ್ತರಪಥ, ದೂರ ಪ್ರಾಚ್ಯದ ಮತ, ಹೀಗೆ ಬೇರೆ, ಬೇರೆಯಾಗಿ ಪ್ರತಿಯೊಂದು ಪಥವು ತಾನೇ ಮೂಲ ಬೌದ್ಧ ಮತವನ್ನು ಪ್ರತಿನಿಧಿಸುವ ಬುದ್ಧನ ಅಪವಿತ್ರಗೊಳ್ಳದ ಸಿದ್ಧಾಂತವನ್ನು ಪ್ರತಿಪಾದಿಸುತ್ತದೆ ಎಂದು ಸಾಧಿಸತೊಡಗಿತು.

ಕ್ರಿಸ್ತನ ಬೋಧನೆಯ ಹಣೆಬರಹ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ಅದೂ ಕೂಡ ಒಂದು ನಿರ್ಧಾರಿತ ಹಾಗೂ ಸಂಘಟಿತ ಧರ್ಮವಾಗಿ ರೂಪುಗೊಂಡಿತು. ಒಂದು ಹೇಳಿಕೆಯ ಪ್ರಕಾರ ಜೀಸಸ್ ಮರಳಿ ಬಂದುದಾದರೆ ತಾನು ಬೋಧಿಸಿದ್ದನ್ನು, ಅದರ ಮೇಲೆ ಹೇರಿರುವ ರೂಪಗಳಲ್ಲಿ, ಗುರುತಿಸಲು ಸಮರ್ಥನಾಗದೆ ಹೋಗಬಹುದು. ಹಾಗೆಯೆ ಬುದ್ಧ ಮರಳಿ ಬಂದರೆ ತಾನು ಬೋಧಿಸಿದ್ದನ್ನು ಏನು ಮಾಡಲಾಗಿದೆ ಎಂಬುದನ್ನು ತಿಳಿದು ಅಧೈರ್ಯಗೊಂಡು ಕೂಡಲೆ ನಿರ್ವಾಣಕ್ಕೆ ಮರಳಿ ಹೋಗಬಹುದು! ಎಲ್ಲ ಧರ್ಮಗಳೂ ಹೇಳುವ ಕತೆ ಒಂದೇ ಆಗಿದೆ. ಧರ್ಮ ಹುಟ್ಟಿಕೊಳ್ಳುವ ಸಂದರ್ಭ ಜಗತ್ತಿಗೆ ಶ್ರೇಷ್ಠ ಗುರು ಎನಿಸಿಕೊಳ್ಳುವವನ ಆಗಮನದ್ದಾಗಿರುತ್ತದೆ. ಅವನು ಬರುತ್ತಾನೆ, ದಿವ್ಯ



ದರ್ಶನವೊಂದನ್ನು ಮಾಡಿಸುತ್ತಾನೆ, ಅವನು ದೈವೀಸತ್ಯದ ಅವತಾರವಾಗಿರುತ್ತಾನೆ. ಆದರೆ ಮನುಷ್ಯ ಅದನ್ನು ಕಬಳಿಸಿ, ಅದಕ್ಕೊಂದು ವ್ಯವಹಾರದ ಸ್ವರೂಪ ಕೊಡುತ್ತಾನೆ, ಹೆಚ್ಚು ಕಡಿಮೆ ಅದಕ್ಕೊಂದು ರಾಜಕೀಯ ಸಂಸ್ಥೆಯ ಸ್ವರೂಪ ಕೊಡುತ್ತಾನೆ. ಇಂತಹ ಮನುಷ್ಯರಿಂದ ಧರ್ಮಕ್ಕೆ ಒಂದು ಸರಕಾರ, ಕಾರ್ಯನೀತಿ, ಪಂಥಗಳು, ಧರ್ಮಾಂಧತೆ, ನಿಯಮಗಳು, ಕಟ್ಟಳೆಗಳು, ಅದರ ವ್ರತಗಳು, ಸಮಾರಂಭಗಳು ಇವೆಲ್ಲ ಹುಟ್ಟಿಕೊಂಡು ಧರ್ಮಾನುಯಾಯಿಗಳನ್ನು ಕಟ್ಟಿ ಹಾಕುತ್ತವೆ, ಇವು ನಿರಂಕುಶ ಹಾಗೂ ಅಲಂಘನೀಯವಾಗಿರುತ್ತವೆ. ರಾಜ್ಯ ಸರಕಾರದ ಹಾಗೆ ಧರ್ಮ ಕೂಡ ಆಡಳಿತ ನಡೆಸುತ್ತದೆ, ಸ್ವಾಮಿನಿಷ್ಠರಾದವರಿಗೆ ಬಹುಮಾನ ನೀಡುತ್ತದೆ, ಬಂಡಾಯವೇಳುವವರಿಗೆ, ಅಡ್ಡದಾರಿ ಹಿಡಿಯುವವರಿಗೆ, ಪಾಷಂಡಿ (ಸಂಪ್ರದಾಯದ ವಿರುದ್ಧ ಹೋಗುವವರು) ಗಳಿಗೆ, ಧರ್ಮ ಭ್ರಷ್ಟರಿಗೆ ಶಿಕ್ಷೆಯನ್ನು ವಿಧಿಸುತ್ತದೆ.

**(3/76–79)** **– ಶ್ರೀಮಾತೆ**

*

## ಆಧ್ಯಾತ್ಮಿಕ ಜೀವನಕ್ಕೆ ಧರ್ಮ ಅಡೆತಡೆಯಾಗಿದೆಯೆ?

ಈ ಸ್ಥಾಪಿತಗೊಂಡ ಹಾಗೂ ಔಪಚಾರಿಕ ಧರ್ಮಗಳ ಮೊದಲ ಹಾಗೂ ಪ್ರಮುಖ ವಿಷಯ ಯಾವಾಗಲೂ "ನನ್ನದು ಪರಮ ಶ್ರೇಷ್ಠವಾದದ್ದು, ಏಕಮಾತ್ರ ಸತ್ಯ, ಉಳಿದೆಲ್ಲವೂ ಮಿಥ್ಯೆಯಲ್ಲಿವೆ ಇಲ್ಲವೆ ಕೆಳಮಟ್ಟದಲ್ಲಿವೆ" ಎಂಬುದಾಗಿರುತ್ತದೆ. ಈ ಮೂಲಭೂತ ಮತಾಂಧತೆಯಿಲ್ಲದೆ, ಸ್ಥಾಪಿತಗೊಂಡ ಮತ–ಸಿದ್ಧಾಂತದ ಧರ್ಮಗಳು ಅಸ್ತಿತ್ವದಲ್ಲಿರುವುದು ಸಾಧ್ಯವಾಗುತ್ತಿರಲಿಲ್ಲ. ನೀವು ಮಾತ್ರ ಏಕೈಕ ಇಲ್ಲವೆ ಅತ್ಯುಚ್ಚ ಸತ್ಯವನ್ನು ವಶಪಡಿಸಿಕೊಂಡಿದ್ದೀರಿ ಎಂದು ನಂಬಿ, ಸಾರಿಹೇಳದಿದ್ದರೆ, ಜನರ ಮೇಲೆ ಪ್ರಭಾವ ಬೀರಲು ಮತ್ತು ಅವರು ನಿಮ್ಮ ಸುತ್ತ ನೆರೆಯುವಂತೆ ಮಾಡಲು ಶಕ್ತರಾಗುತ್ತಿರಲಿಲ್ಲ.

ಈ ಮನೋಭಾವ ಧಾರ್ಮಿಕ ಮನಸ್ಸಿಗೆ ಸ್ವಾಭಾವಿಕವಾದದ್ದು, ಆದರೆ ಆ ಮನೋಭಾವದಿಂದಾಗಿಯೇ ಆಧ್ಯಾತ್ಮಿಕ ಜೀವನದಲ್ಲಿ ಧರ್ಮ ಅಡ್ಡ ಬರುವಂತೆ ಮಾಡುತ್ತದೆ.

ಒಂದು ಧರ್ಮದ ಸಿದ್ಧಾಂತಗಳು ಹಾಗೂ ಮತತತ್ವಗಳು ಮನಸ್ಸಿನಿಂದ ರಚಿತವಾಗಿರುತ್ತವೆ ಮತ್ತು ನೀವು ಅವುಗಳಿಗೆ ಅಂಟಿಕೊಂಡರೆ, ನಿಮಗಾಗಿ ಮಾಡಿದ

ಜೀವನದ ನಿಯಮಾವಳಿಗಳಲ್ಲಿ ನಿಮ್ಮನ್ನು ಮುಚ್ಚಿಹಾಕಿಕೊಂಡರೆ, ದಿವ್ಯಾತ್ಮದ ಸತ್ಯ ನಿಮಗೆ ತಿಳಿದಿರುವುದಿಲ್ಲ ಮತ್ತು ಅದನ್ನು ನೀವು ತಿಳಿದುಕೊಳ್ಳಲಾರಿರಿ. ಆ ಸತ್ಯ ಎಲ್ಲ ನಿಯಮಾವಳಿಗಳು ಹಾಗೂ ಮತತತ್ವಗಳಾಚೆಗಿರುತ್ತದೆ, ಅದು ವಿಸ್ತಾರವಾದದ್ದು, ಭವ್ಯವಾದದ್ದು ಹಾಗೂ ಮುಕ್ತವಾದದ್ದು ಆಗಿರುತ್ತದೆ. ನೀವು ಧಾರ್ಮಿಕ ಪಂಥವೊಂದರತ್ತ ನಿಂತುಬಿಟ್ಟರೆ ಮತ್ತು ಅದರಲ್ಲಿ ನಿಮ್ಮನ್ನು ಕಟ್ಟಿಹಾಕಿಕೊಂಡರೆ, ಜಗತ್ತಿನಲ್ಲಿ ಅದೇ ಏಕೈಕ ಸತ್ಯವೆಂದು ಗ್ರಹಿಸಿದರೆ, ನಿಮ್ಮ ಆಂತರಿಕ ಆತ್ಮದ ಪ್ರಗತಿಯನ್ನು, ವಿಸ್ತರಣೆಯನ್ನು ನಿಲ್ಲಿಸಿಬಿಡುತ್ತೀರಿ.

ಆದರೆ ನೀವು ಧರ್ಮವನ್ನು ಮತ್ತೊಂದು ದೃಷ್ಟಿಕೋನದಿಂದ ನೋಡಿದರೆ ಅದು ಎಲ್ಲ ಮನುಷ್ಯರಿಗೂ ಅಡೆತಡೆಯಾಗಬೇಕಿಲ್ಲ ಎಂಬುದು ಕಂಡುಬರುವುದು. ಅದು ಮಾನವತೆಯ ಉನ್ನತ ಮಟ್ಟದ ಚಟುವಟಿಕೆಗಳಲ್ಲೊಂದು ಎಂದು ಪರಿಗಣಿಸಿದರೆ, ಮನುಷ್ಯ–ನಿರ್ಮಿತವಾದ ಅದರಲ್ಲಿರುವ ಅಪರಿಪೂರ್ಣತೆಗಳನ್ನು ನಿರ್ಲಕ್ಷಿಸದೆ ಮನುಷ್ಯ ತನ್ನ ಅಭೀಪ್ಸೆಯನ್ನು ಕಂಡುಕೊಂಡರೆ, ಆಧ್ಯಾತ್ಮಿಕ ಜೀವನವನ್ನು ನಡೆಸುವುದಕ್ಕೆ ಅದು ಒಂದು ಬಗೆಯ ಸಹಾಯ ನೀಡುವುದು. ಅದನ್ನು ಗಂಭೀರವಾಗಿ, ಹಾಗೂ ಮನಃಪೂರ್ವಕವಾದ ಉತ್ಸಾಹದಿಂದ ಸ್ವೀಕರಿಸಿ ಅದರಲ್ಲಿರುವ ಸತ್ಯವೇನು, ಅದರಲ್ಲಿ ಯಾವ ಅಭೀಪ್ಸೆ ಅಡಗಿದೆ, ಮಾನವ ಮನಸ್ಸಿನಿಂದ ಹಾಗೂ ಮಾನವ ಸಂಘಟನೆಯಿಂದ ಯಾವ ದೈವೀಸ್ಫೂರ್ತಿಯು ಇಲ್ಲಿ ರೂಪಾಂತರಗೊಂಡಿದೆ ಹಾಗೂ ವಿರೂಪಗೊಂಡಿದೆ ಎಂಬುದನ್ನು ಕಂಡುಹಿಡಿಯಲು ನೀವು ಪ್ರಯತ್ನಿಸಬೇಕು. ಮತ್ತು ಸರಿಯಾದ ಮಾನಸಿಕ ನಿಲುವಿನಿಂದ, ಧರ್ಮವು ಅದು ಇದ್ದ ಹಾಗೆ, ನಿಮ್ಮ ಮಾರ್ಗದಲ್ಲಿ ಸ್ವಲ್ಪ ಬೆಳಕು ಚೆಲ್ಲಲು, ನಿಮ್ಮ ಆಧ್ಯಾತ್ಮಿಕ ಸಾಹಸಕ್ಕೆ ಸ್ವಲ್ಪ ಆಧಾರ ನೀಡಲು ಉಪಯುಕ್ತವಾಗಬಹುದಾಗಿದೆ.

ಎಲ್ಲ ಧರ್ಮಗಳಲ್ಲಿ ಬಹಳ ಭಾವನಾತ್ಮಕ ಕ್ಷಮತೆಯನ್ನು ಹೊಂದಿದ ಹಾಗೂ ನಿಜವಾದ ಹಾಗೂ ಉತ್ಸಾಹದಿಂದ ಕೂಡಿದ ಅಭೀಪ್ಸೆಯುಳ್ಳ ಜನರು ಕಂಡುಬರುತ್ತಾರೆ, ಆದರೆ ಅವರು ಸರಳ ಮನಸ್ಸಿನ ಜನರಾಗಿರುತ್ತಾರೆ ಹಾಗೂ ಭಗವಂತನನ್ನು ಜ್ಞಾನದ ಮೂಲಕ ಕಂಡುಕೊಳ್ಳುವ ಆವಶ್ಯಕತೆ ಅವರಿಗಿರುವುದಿಲ್ಲ. ಇಂತಹ ಸ್ವಭಾವವಿರುವ ಜನರಿಗೆ ಧರ್ಮದ ಉಪಯೋಗವಿದೆ, ಅದು ಅವರಿಗೆ ಅವಶ್ಯವಾಗಿರುತ್ತದೆ. ಏಕೆಂದರೆ ಚರ್ಚಿನ ಸಮಾರಂಭಗಳಂತಹ ಬಾಹ್ಯ ರೂಪಗಳ ಮೂಲಕ ಅದು ಅವರಿಗೆ ಆಧಾರ ನೀಡುತ್ತದೆ ಹಾಗೂ ಅವರ ಆಂತರಿಕ ಆಧ್ಯಾತ್ಮಿಕ



ಅಭೀಪ್ಸೆಗೆ ಸಹಾಯ ಮಾಡುತ್ತದೆ. ಪ್ರತಿಯೊಂದು ಧರ್ಮದಲ್ಲಿ ಉನ್ನತ ಆಧ್ಯಾತ್ಮಿಕ ಜೀವನವನ್ನು ಬೆಳೆಸಿಕೊಂಡಂತಹರು ಕೆಲವರಿರುತ್ತಾರೆ. ಆದರೆ ಅವರ ಧರ್ಮ ಅವರಿಗೆ ಆಧ್ಯಾತ್ಮವನ್ನು ಕೊಟ್ಟಿರುವುದಿಲ್ಲ, ಅವರೇ ಧರ್ಮದಲ್ಲಿ ಆಧ್ಯಾತ್ಮಿಕತೆಯನ್ನು ಇರಿಸಿರುತ್ತಾರೆ. ಅವರನ್ನು ಬೇರೆಡೆ ಎಲ್ಲಿಯಾದರೂ, ಯಾವುದೇ ಪಂಥದಲ್ಲಿ ಇರಿಸಿದರೆ ಅವರು ಅದರಲ್ಲಿ ಅದೇ ಆಧ್ಯಾತ್ಮಿಕತೆಯನ್ನು ಕಂಡುಕೊಂಡು ಅದರ ಪ್ರಕಾರ ಅವರು ಜೀವಿಸುವರು. ಅದು ಅವರದೇ ಕ್ಷಮತೆ, ಅವರ ಆಂತರಿಕ ಸತ್ತೆಯ ಒಂದು ಬಗೆಯ ಸಾಮರ್ಥ್ಯ, ಆದರೆ ಅವರು ಬಹಿರಂಗವಾಗಿ ಪ್ರತಿಪಾದಿಸುವ ಧರ್ಮವು ಅವರನ್ನು ಹಾಗಿರುವಂತೆ ಮಾಡಿರುವುದಿಲ್ಲ. ಅವರ ಸ್ವಭಾವದಲ್ಲಿರುವ ಸಾಮರ್ಥ್ಯದಿಂದಾಗಿ ಅವರು ಬಂಧನಕ್ಕಾಗಲಿ, ಗುಲಾಮಗಿರಿಗಾಗಲಿ ಒಳಗಾಗುವುದಿಲ್ಲ. ಅವರಿಗೆ ದೃಢವಾದ, ಸ್ಪಷ್ಟವಾದ ಹಾಗೂ ಕ್ರಿಯಾಶೀಲವಾದ ಮನಸ್ಸು ಇಲ್ಲದೆ ಇರುವುದರಿಂದ ಈ ಪಂಥ ಇಲ್ಲವೆ ಆ ಪಂಥದಲ್ಲಿ, ಅದೇ ಪೂರ್ಣ ಸತ್ಯವೆಂದು ನಂಬಿಕೆಯಿರಿಸುವ ಆವಶ್ಯಕತೆ ಮತ್ತು ಕ್ಷೋಭೆಗೊಳಿಸುವ ಯಾವ ಪ್ರಶ್ನೆ, ಶಂಕೆ ಇಲ್ಲದೆ ಅದಕ್ಕೆ ತಮ್ಮನ್ನು ಸಮರ್ಪಿಸಿಕೊಳ್ಳುವ ಆವಶ್ಯಕತೆ ಇರುತ್ತದೆ. ಈ ಬಗೆಯ ಜನರನ್ನು ನಾನು ಎಲ್ಲ ಧರ್ಮಗಳಲ್ಲಿ ಕಂಡಿದ್ದೇನೆ ಮತ್ತು ಅವರ ನಂಬಿಕೆಯನ್ನು ಕದಲಿಸುವುದು ಅಪರಾಧವಾಗುವುದು. ಅವರಿಗೆ ಧರ್ಮ ಅಡೆತಡೆಯಾಗಿರುವುದಿಲ್ಲ. ಬಹಳ ದೂರ ಸಾಗುವವರಿಗೆ ಧರ್ಮ ಅಡೆತಡೆಯಾಗುತ್ತದೆ. ಹಾಗೆ ದೂರ ಸಾಗಲು ಅಸಮರ್ಥರಾದವರಿಗೆ ದಿವ್ಯಾತ್ಮನತ್ತ ಸಾಗುವ ದಾರಿಯಲ್ಲಿ ಸ್ವಲ್ಪ ದೂರ ಸಾಗಿ ಹೋಗಲು ಅದು ಸಹಾಯಕವಾಗುತ್ತದೆ.

ಧರ್ಮವು ಅತಿ ಕೆಟ್ಟ ಹಾಗೆಯೇ ಅತಿ ಒಳ್ಳೆಯ ಕಾರ್ಯಗಳಿಗೆ ಪ್ರೇರಣೆ ನೀಡುತ್ತ ಬಂದಿದೆ. ಅತಿ ಭೀಕರವಾದ ಯುದ್ಧಗಳು ಹಾಗೂ ಅಸಹ್ಯಕರ ಹಿಂಸೆ ಧರ್ಮದ ಹೆಸರಿನಲ್ಲಿ ನಡೆದಿವೆ. ಧರ್ಮ ತನ್ನ ಉದ್ದೇಶಕ್ಕಾಗಿ ಪರಮ ಶೌರ್ಯವನ್ನು, ಆತ್ಮ ತ್ಯಾಗವನ್ನು ಪ್ರಚೋದಿಸಿದೆ. ಮಾನವ ಮನಸ್ಸು ತನ್ನ ಅತ್ಯುಚ್ಚ ಚಟುವಟಿಕೆಗಳ ಮೂಲಕ ತತ್ವಜ್ಞಾನವನ್ನು ರೂಪಿಸುವುದರೊಂದಿಗೆ ತನ್ನ ಮಿತಿಯನ್ನು ತಲುಪಿದೆ. ಅದರ ಬಾಹ್ಯ ರೂಪಕ್ಕೆ ನೀವು ಗುಲಾಮರಾದರೆ ಅದೊಂದು ದೊಡ್ಡ ಅಡಚಣೆ ಹಾಗೂ ಬಂಧನವಾಗುತ್ತದೆ, ಅದನ್ನು ಆಂತರಿಕ ದ್ರವ್ಯಕ್ಕಾಗಿ ಬಳಸಿಕೊಳ್ಳುವುದನ್ನು ಕಲಿತುಕೊಂಡರೆ ಅದು ದಿವ್ಯಾತ್ಮದ ಕ್ಷೇತ್ರದಲ್ಲಿ ಜಿಗಿದು ಹೋಗಲು ಸಹಾಯಕವಾಗುವ ಜಿಗಿತದ ಮಣೆಯಂತಾಗುತ್ತದೆ.

**(3/76–79)** **– ಶ್ರೀಮಾತೆ**

*

## ಧರ್ಮಗಳಲ್ಲಿರುವ ಮೂಲಭೂತ ದೋಷ

ಆ ಕಾರಣದಿಂದಾಗಿ, ಧರ್ಮಗಳ ಬಗ್ಗೆ ಯಾವಾಗಲೂ ತಪ್ಪು ತಿಳಿವಳಿಕೆ ಉಂಟಾಗುತ್ತದೆ – ಯಾವಾಗಲೂ – ಏಕೆಂದರೆ ಅವು ಅನುಭವವೊಂದರ ಅಭಿವ್ಯಕ್ತಿಯನ್ನು ಪ್ರಮಾಣಾನುಸಾರಿಯಾಗಿಸುತ್ತವೆ ಮತ್ತು ಅದು ವಿವಾದಾತೀತ ಸತ್ಯವೆಂದು ಭಾವಿಸಿ ಅದನ್ನು ಎಲ್ಲರ ಮೇಲೆ ಹೇರಲು ಪ್ರಯತ್ನಿಸುತ್ತವೆ. ಆ ಅನುಭವ ಸತ್ಯವಾದದ್ದೇ ಆಗಿತ್ತು, ತನ್ನಲ್ಲೇ ಪರಿಪೂರ್ಣವಾಗಿತ್ತು, ಮನವರಿಕೆ ಮಾಡಿಕೊಡುವಂತಹದಾಗಿತ್ತು – ಅದು ಅನುಭವ ಪಡೆದವನಿಗೆ, ಅವನು ಸೂತ್ರಬದ್ಧಗೊಳಿಸಿದ್ದು ಅತಿ ಉತ್ಕೃಷ್ಟವಾದ್ದೇ ಆಗಿತ್ತು – ಅದು ಅವನಿಗಾಗಿ ಮಾತ್ರ. ಆದರೆ ಅದನ್ನು ಬೇರೆಯವರ ಮೇಲೆ ಹೇರುವುದು ಮೂಲಭೂತ ತಪ್ಪು. ಈ ತಪ್ಪಿನಿಂದಾಗಿಯೇ ಒಟ್ಟಿನಲ್ಲಿ ದುರದೃಷ್ಟಕರ ಪರಿಣಾಮಗಳುಂಟಾಗುತ್ತವೆ. ಅದು ಯಾವಾಗಲೂ ಆಗುವಂತಹದು, ಅದು ದೈವೀಸತ್ಯದಿಂದ ಬಹಳ ದೂರ ಕರೆದೊಯ್ಯುತ್ತದೆ.

ಅದರಿಂದಾಗಿಯೆ ಎಲ್ಲ ಧರ್ಮಗಳು, ಅವು ಎಷ್ಟೇ ಸುಂದರವಾಗಿರಲಿ, ಯಾವಾಗಲೂ ಮನುಷ್ಯನನ್ನು ಅತಿ ಕೆಟ್ಟ ಅತಿರೇಕಗಳತ್ತ ಕರೆದೊಯ್ದಿವೆ. ಧರ್ಮದ ಹೆಸರಿನಲ್ಲಿ ನಡೆದ ಎಲ್ಲ ಅಪರಾಧಗಳು, ಪ್ರಮಾದಗಳು ಮಾನವ ಇತಿಹಾಸದಲ್ಲಿ ಕಂಡುಬರುವ ಅತ್ಯಂತ ತಪ್ಪು ಕಲೆಗಳಲ್ಲಿ ಸಮಾವೇಶಗೊಂಡಿವೆ ಮತ್ತು ಸರಳವಾಗಿ ಏಕೆಂದರೆ ಮೊದಲು ಎಸಲಾಗದ ಈ ಚಿಕ್ಕ ದೋಷದಿಂದಾಗಿ ಇದೆಲ್ಲವೂ ನಡೆದಿದೆ: ಒಬ್ಬ ವ್ಯಕ್ತಿಗೆ ಸತ್ಯವೆಂದು ಕಂಡುಬಂದದ್ದು ಜನ ಸಮೂಹಕ್ಕೆ ಸತ್ಯವೆಂದು ಕಂಡುಬರಲಿ ಎಂದು ಬಯಸಿದ್ದಕ್ಕಾಗಿ.

(ಮೌನ)

ಮಾರ್ಗವನ್ನು ತೋರಿಸಬೇಕಾಗಿದೆ, ದ್ವಾರಗಳನ್ನು ತೆರೆದಿರಿಸಬೇಕಾಗಿದೆ. ಆದರೆ ಪ್ರತಿಯೊಬ್ಬನೂ ತನ್ನದೇ ಮಾರ್ಗವನ್ನು ಅನುಸರಿಸಬೇಕು, ದ್ವಾರಗಳ ಮೂಲಕ ಸಾಗಿ ಹೋಗಬೇಕು, ತನ್ನ ವೈಯಕ್ತಿಕ ಸಿದ್ಧಿಯತ್ತ ಸಾಗಬೇಕು.

ಮನುಷ್ಯ ಸ್ವೀಕರಿಸಲು ಸಾಧ್ಯವಿರುವ ಮತ್ತು ಸ್ವೀಕರಿಸಲೇಬೇಕಾದ ಏಕೈಕ ಸಹಾಯ ದೈವೀ ಕೃಪೆಯದಾಗಿದೆ, ಅದು ಪ್ರತಿಯೊಬ್ಬನಲ್ಲಿ, ಅವನ ಆವಶ್ಯಕತೆಗನುಗುಣವಾಗಿ ಸೂತ್ರರೂಪ ಪಡೆಯುತ್ತದೆ.

*



ನೀವು ದೈವೀಸತ್ಯವನ್ನು ಸುನಿರ್ದಿಷ್ಟ, ಸರಿಯಾಗಿ ವರ್ಗೀಕರಣಗೊಂಡ ಹಾಗೂ ಸ್ಥಾಪಿತವಾದ ವಿಷಯವೆಂದು ತಿಳಿದುಕೊಳ್ಳಲು ಬಯಸುತ್ತೀರಿ, ನಂತರ ನೀವು ವಿಶ್ರಾಂತಿ ಸ್ಥಿತಿಯಲ್ಲಿ ಉಳಿದುಕೊಳ್ಳುತ್ತೀರಿ, ಹೆಚ್ಚಿನದನ್ನು ಅರಸುವ ಆವಶ್ಯಕತೆ ಇನ್ನು ಮುಂದೆ ಉಳಿದಿರುವುದಿಲ್ಲ. ನೀವದನ್ನು ಕೈಗೆತ್ತಿಕೊಂಡು "ಇಲ್ಲಿ, ದೈವೀಸತ್ಯ ಇಲ್ಲಿದೆ" ಎಂದು ಹೇಳುತ್ತೀರಿ, ನಂತರ ಅದು ಸ್ಥಿರವಾಗಿ ಬಿಡುತ್ತದೆ. ಇದನ್ನೇ ಎಲ್ಲ ಧರ್ಮಗಳು ಮಾಡಿವೆ. ತಮ್ಮ ಸತ್ಯವನ್ನು ಮತತತ್ವವನ್ನಾಗಿ ಸ್ಥಾಪಿಸಿವೆ. ಆದರೆ ಅದು ಈಗ ಸತ್ಯವಾಗಿ ಉಳಿದುಕೊಂಡಿಲ್ಲ.

*

". . . ಈ ವಿಷಯಗಳು ಹೆಚ್ಚು ಮಹತ್ವದವಾಗಿವೆ ಎಂದು ನನಗನಿಸುವುದಿಲ್ಲ. ನಾನು ಯಾವ ಧರ್ಮಕ್ಕೂ ಅಂಟಿಕೊಂಡಿಲ್ಲ, ಮನುಷ್ಯನಿಗೆ ಅಂಟಿಕೊಂಡಿರುವಿಕೆ ಇಲ್ಲದೆ ಇದ್ದಾಗ ಜುಗುಪ್ಸೆಯೂ ಇರುವುದಿಲ್ಲ. ನನ್ನ ಮಟ್ಟಿಗೆ ಧರ್ಮಗಳು ಆಧ್ಯಾತ್ಮಿಕ ಜೀವನವನ್ನು ಕುರಿತು ಮಾನವ ನಿರ್ಮಿತ ರೂಪಗಳಾಗಿವೆ. ಅವುಗಳಲ್ಲಿ ಪ್ರತಿಯೊಂದೂ ಏಕೈಕ ಸನಾತನ ದೈವೀಸತ್ಯದ ಒಂದು ಮುಖವನ್ನು ಅಭಿವ್ಯಕ್ತಗೊಳಿಸುತ್ತದೆ. ಹಾಗೆ ಉಳಿದೆಲ್ಲ ಮುಖಗಳನ್ನು ಹೊರತುಪಡಿಸಿ ಅಭಿವ್ಯಕ್ತಗೊಂಡ ಅದು ಆ ದೈವೀಸತ್ಯವನ್ನು ವಿರೂಪಗೊಳಿಸುತ್ತದೆ, ಕುಗ್ಗಿಸುತ್ತದೆ. ಅವುಗಳಲ್ಲಿ ಯಾವುದಕ್ಕೂ ತನ್ನದು ಮಾತ್ರ ಏಕೈಕ ಸತ್ಯವೆಂದು ಹಕ್ಕು ಸಾಧಿಸಲಾಗುವುದಿಲ್ಲ, ಹಾಗೆಯೇ ಇತರ ಧರ್ಮಗಳು ಒಳಗೊಂಡಿರುವ ಸತ್ಯವನ್ನು ನಿರಾಕರಿಸಲಾಗುವುದಿಲ್ಲ. ಪ್ರತಿಯೊಬ್ಬನಲ್ಲಿ ಪರಮೋಚ್ಚ ದೈವೀಸತ್ಯವಿದ್ದಾಗಲೂ ಕೂಡ, ಆ ಎಲ್ಲ ಧರ್ಮಗಳು ಒಟ್ಟುಗೂಡಿ ಪ್ರಯತ್ನಿಸಿದಾಗ್ಯೂ ಕೂಡ ಆ ಸತ್ಯವನ್ನು ಅಭಿವ್ಯಕ್ತಪಡಿಸಲು ಸಾಧ್ಯವಾಗುವುದಿಲ್ಲ, ಅದು ಎಲ್ಲ ಅಭಿವ್ಯಕ್ತಿಗಳಾಚೆಗಿದೆ."

*

ಆರಾಧನೆ, ಭಕ್ತಿ ಮತ್ತು ಮುಡಿಪಾಗಿರಿಸುವಿಕೆ ಇವುಗಳ ಬಗೆಗಿರುವ ಧಾರ್ಮಿಕ ಭಾವನೆ ಆಧ್ಯಾತ್ಮಿಕ ಮನೋಭಾವಕ್ಕೆ ವಿರುದ್ಧವಾಗಿರುವುದಿಲ್ಲ. ಧರ್ಮಗಳಲ್ಲಿ ತಪ್ಪಾಗಿರುವುದೇನೆಂದರೆ ಒಂದು ಸೂತ್ರ ಪ್ರತ್ಯೇಕವಾಗಿ ಸತ್ಯವಾದದ್ದೆಂದು ಅದಕ್ಕೆ ಅಂಟಿಕೊಳ್ಳುವುದರಲ್ಲಿರುವ ಮನಸ್ಸಿನ ಸ್ಥಿರತೆಯಾಗಿದೆ. ಸೂತ್ರಗಳು ಸತ್ಯವನ್ನು ಕುರಿತು ಮಾನಸಿಕ ಅಭಿವ್ಯಕ್ತಿಗಳಾಗಿರುತ್ತವೆ ಮತ್ತು ಈ ಸತ್ಯವನ್ನು ಇನ್ನಿತರ ಹಲವಾರು ರೀತಿಗಳಲ್ಲಿ ಅಭಿವ್ಯಕ್ತಪಡಿಸಬಹುದು ಎಂಬುದನ್ನು ಮನುಷ್ಯ ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು.

*

**ಧರ್ಮಗಳನ್ನು ಕುರಿತು ಹೊಂದಿರಬೇಕಾದ ಮನೋಭಾವ:**

ಪೂಜಾದಿಗಳನ್ನು ಕೈಕೊಳ್ಳುವವರನ್ನು ಕುರಿತು ಒಳ್ಳೆಯದನ್ನು ಬಯಸುವ ಸದಾಶಯ.

ಎಲ್ಲ ಧರ್ಮಗಳತ್ತ ಜ್ಞಾನೋದಯ ಪಡೆದ ಉದಾಸೀನತೆ.

ಎಲ್ಲ ಧರ್ಮಗಳು, ಅವೆಲ್ಲವುಗಳ ಮೇಲೆ ಬಹಳ ದೂರದಲ್ಲಿರುವ ಏಕೈಕ ದೈವೀಸತ್ಯಕ್ಕೆ ಭಾಗಶಃ ಸಮೀಪದಲ್ಲಿವೆ ಎಂದು ತಿಳಿದುಕೊಂಡಿರುವುದು.

**(9/407–08, 15/417, 27–28)** **– ಶ್ರೀಮಾತೆ**

*

## ಆಧ್ಯಾತ್ಮಿಕ ಜೀವನಕ್ಕಾಗಿ ಒಂದು ನಿಬಂಧನೆ

ನಾವು ನಮ್ಮೊಳಗೆ ಸ್ವಲ್ಪ ದೂರ ಇಳಿದು ಹೋದರೆ, ನಮ್ಮಲ್ಲಿ ಪ್ರತಿಯೊಬ್ಬರಲ್ಲಿ ಒಂದು ಪ್ರಜ್ಞೆ ಇರುವುದನ್ನು ಶೋಧಿಸುತ್ತೇವೆ. ಆ ಪ್ರಜ್ಞೆ ಯುಗಗಳ ಕಾಲದಲ್ಲಿ ಜೀವಿಸುತ್ತ ಬಂದಿದೆ, ಅನೇಕಾನೇಕ ರೂಪಗಳಲ್ಲಿ ಪ್ರಕಟಗೊಂಡಿದೆ. ನಮ್ಮಲ್ಲಿ ಪ್ರತಿಯೊಬ್ಬರೂ ಅನೇಕ ಭಿನ್ನ ದೇಶಗಳಲ್ಲಿ ಜನಿಸಿ ಬಂದವರಾಗಿದ್ದೇವೆ, ಹಲವಾರು ಭಿನ್ನ ರಾಷ್ಟ್ರಗಳಿಗೆ ಸೇರಿದವರಾಗಿದ್ದೇವೆ, ಬಹಳಷ್ಟು ಭಿನ್ನ ಧರ್ಮಗಳನ್ನು ಅನುಸರಿಸಿದ್ದೇವೆ. ಕೊನೆಯದನ್ನೇ ಅತ್ಯಂತ ಒಳ್ಳೆಯದು ಎಂದು ನಾವು ಏಕೆ ಸ್ವೀಕರಿಸಬೇಕು? ಅನೇಕ ಭಿನ್ನ ದೇಶಗಳಲ್ಲಿ, ಭಿನ್ನ ಧರ್ಮಗಳಲ್ಲಿ ಇದ್ದ ಜೀವಿತ ಕಾಲಗಳಲ್ಲಿ ಒಟ್ಟುಗೂಡಿಸಿಕೊಂಡ ಅನುಭವಗಳು ನಮ್ಮ ಪ್ರಜ್ಞೆಯ ಆಂತರಿಕ ಮುಂದುವರಿಕೆಯಲ್ಲಿ ಸಂಗ್ರಹವಾಗಿರುತ್ತವೆ ಮತ್ತು ಆ ಪ್ರಜ್ಞೆ ಎಲ್ಲ ಜನ್ಮಗಳಾದ್ಯಂತ ಪಟ್ಟು ಹಿಡಿದು ಉಳಿದುಕೊಂಡು ಬರುತ್ತದೆ. ಗತಕಾಲದ ಈ ಅನುಭವಗಳು ಸೃಷ್ಟಿಸಿದ ಅನೇಕ ವ್ಯಕ್ತಿವಿಶಿಷ್ಟತೆಗಳಿರುತ್ತವೆ ಮತ್ತು ನಮ್ಮಲ್ಲಿರುವ ಈ ಅನೇಕತೆಯ ಬಗ್ಗೆ ನಮಗೆ ಅರಿವುಂಟಾದಾಗ ಸತ್ಯದ ಒಂದು ರೂಪ ಮಾತ್ರ ಏಕೈಕವಾದದ್ದು, ಒಂದು ದೇಶ ಮಾತ್ರ ನಮ್ಮ ದೇಶ, ಒಂದು ಧರ್ಮ ಮಾತ್ರ ನಮ್ಮ ನಿಜವಾದ ಧರ್ಮ ಎಂದು ಹೇಳುವುದು ಅಸಾಧ್ಯವಾಗುತ್ತದೆ. ಹುಟ್ಟಿದ್ದು ಒಂದು ದೇಶದಲ್ಲಿಯಾಗಿದ್ದರೂ ತಮ್ಮ ಪ್ರಜ್ಞೆಯಲ್ಲಿ ಮುನ್ನಡೆಸಿಕೊಂಡು ಹೋಗುವ ಅಂಶಗಳು ಸ್ಪಷ್ಟವಾಗಿ ಬೇರೆ ದೇಶಕ್ಕೆ ಸೇರಿರುವಂತಹ ಜನರಿರುತ್ತಾರೆ. ಯುರೋಪಿನಲ್ಲಿ ಹುಟ್ಟಿ ಭಾರತೀಯರ ಸ್ವಭಾವ ಹೊಂದಿದ್ದ ಜನರನ್ನು, ಹಾಗೆಯೇ ಭಾರತದಲ್ಲಿ ಹುಟ್ಟಿ ಯುರೋಪಿಯನ್‌ರ ಸ್ವಭಾವ ಹೊಂದಿದ್ದ ಜನರನ್ನು ನಾನು ಭೇಟಿ ಮಾಡಿದ್ದೇನೆ.



ನಿಮ್ಮ ಗುರಿ ದಿವ್ಯಾತ್ಮನ ಸ್ವಾತಂತ್ರ್ಯದಲ್ಲಿ ಮುಕ್ತರಾಗುವುದಾಗಿದ್ದರೆ ನಿಮ್ಮ ಸತ್ತೆಯ ಆಂತರಿಕ ಸತ್ಯಕ್ಕೆ ಸೇರಿರದ, ಆದರೆ ಅವಚೇತನದ ರೂಢಿಗಳಿಂದ ಬರುವ ಎಲ್ಲ ಬಂಧನಗಳನ್ನು ತೊಡೆದು ಹಾಕಬೇಕು. ನೀವು ಭಗವಂತನಿಗೆ ಇಡಿಯಾಗಿ, ಪರಿಪೂರ್ಣವಾಗಿ ಮತ್ತು ಉಳಿದದ್ದನ್ನೆಲ್ಲ ಬಿಟ್ಟುಕೊಟ್ಟು ಮುಡಿಪಾಗಿರಿಸಿಕೊಳ್ಳಲು ಬಯಸಿದರೆ ಅದನ್ನು ಎಲ್ಲ ಪೂರ್ಣತೆಯಲ್ಲಿ ಕೈಕೊಳ್ಳಬೇಕು, ನಿಮ್ಮದೇ ಸಣ್ಣ ಭಾಗಗಳು ಅಲ್ಲಿ ಇಲ್ಲಿ ಬಂಧನಕ್ಕೆ ಒಳಗಾಗಲು ಬಿಟ್ಟುಕೊಡಬಾರದು. ಮನುಷ್ಯ ತನ್ನನ್ನು ಸ್ಥಾಯಿಯಾಗಿ ಕಟ್ಟಿ ಹಾಕಿ ನಿಲ್ಲಿಸುವ ಆಧಾರಗಳನ್ನು ಕಡಿದುಕೊಂಡು ಹೋಗುವುದು ಸುಲಭವಲ್ಲವೆಂದು ನೀವು ತಕರಾರು ಮಾಡಬಹುದು. ಆದರೆ ಕಳೆದ ಕೆಲವು ವರ್ಷಗಳಲ್ಲಿ ನಿಮ್ಮಲ್ಲಿ ಸಂಭವಿಸಿದ ಬದಲಾವಣೆಗಳತ್ತ ಎಂದಿಗೂ ಹಿಂದಿರುಗಿ ನೋಡಿಲ್ಲವೆ? ನೀವದನ್ನು ಕೈಕೊಂಡಾಗ ಬಹುಮಟ್ಟಿಗೆ ಯಾವಾಗಲೂ ನೀವು ತಂದುಕೊಂಡ ಭಾವನೆಯನ್ನು ತಂದುಕೊಳ್ಳಲು, ಕೈಕೊಂಡ ಕಾರ್ಯವನ್ನು ಮಾಡಲು ಹೇಗೆ ಸಾಧ್ಯವಾಯಿತು ಎಂಬುದನ್ನು ಕುರಿತು ನಿಮ್ಮನ್ನು ನೀವೇ ಕೇಳುತ್ತೀರಿ. ಕೆಲವೊಮ್ಮೆ ನೀವು ಕೇವಲ ಹತ್ತು ವರ್ಷಗಳ ಹಿಂದೆ ಆಗಿದ್ದ ವ್ಯಕ್ತಿಯನ್ನು ನಿಮಗೆ ಗುರುತಿಸುವುದು ಕೂಡ ಸಾಧ್ಯವಾಗುವುದಿಲ್ಲ. ಅದು ಹಾಗಿರುವಾಗ, ಹಿಂದೆ ಇದ್ದುದಕ್ಕೆ, ಸದ್ಯ ಇರುವುದಕ್ಕೆ ನಿಮ್ಮನ್ನು ಹೇಗೆ ಕಟ್ಟಿಹಾಕಿಕೊಳ್ಳಬಲ್ಲಿರಿ ಇಲ್ಲವೆ ಭವಿಷ್ಯತ್ತಿನಲ್ಲಿ ಏನಿರಬಹುದು, ಏನಿರಲಿಕ್ಕಿಲ್ಲ ಎಂಬುದನ್ನು ಕುರಿತು, ನೀವು ಹೇಗೆ ಸ್ಥಿರಗೊಳಿಸಬಲ್ಲಿರಿ?

ನಿಮ್ಮ ಎಲ್ಲ ಸಂಬಂಧಗಳು ಆಯ್ಕೆಯ ಆಂತರಿಕ ಸ್ವಾತಂತ್ರ್ಯದ ಆಧಾರದ ಮೇಲೆ ನಿರ್ಮಾಣಗೊಳ್ಳಬೇಕು. ನೀವು ಜೀವಿಸುತ್ತಿರುವ ಇಲ್ಲವೆ ಬೆಳೆದು ಬಂದ ಸಂಪ್ರದಾಯಗಳನ್ನು ಪರಿಸರದ ಒತ್ತಡದ ಮೂಲಕ ಇಲ್ಲವೆ ಸರ್ವಸಾಧಾರಣ ಮನೋವೃತ್ತಿಯಿಂದ ಇಲ್ಲವೆ ಇತರರ ಆಯ್ಕೆಯ ಮೂಲಕ ನಿಮ್ಮ ಮೇಲೆ ಹೇರಲಾಗಿರುತ್ತದೆ. ನಿಮ್ಮ ಮೌನ ಸಮ್ಮತಿಗೆ ಒತ್ತಾಯ ತರುವ ಒಂದು ಅಂಶವಿರುತ್ತದೆ. ಸ್ವತಃ ಧರ್ಮವನ್ನೇ ಜನರ ಮೇಲೆ ಹೇರಲಾಗಿದೆ. ಅದಕ್ಕೆ ಆಧಾರವಾಗಿ ಧಾರ್ಮಿಕ ಭಯದ ಇಲ್ಲವೆ ಕೆಲವೊಂದು ಆಧ್ಯಾತ್ಮಿಕ ಇಲ್ಲವೆ ಇತರ ಪೀಡೆಯ ಸೂಚನೆಯಿರುತ್ತದೆ. ಭಗವಂತನೊಡನಿರುವ ಸಂಬಂಧದಲ್ಲಿ ಇಂತಹ ಹೇರಿಕೆ ಇರುವುದು ಸಾಧ್ಯವಿಲ್ಲ. ಅದು ಮುಕ್ತವಾಗಿರಬೇಕು, ನಿಮ್ಮದೇ ಮನಸ್ಸಿನ, ಹೃದಯದ ಆಯ್ಕೆಯಾಗಿರಬೇಕು, ಉತ್ಸಾಹ ಹಾಗೂ ಸಂತೋಷದಿಂದ ಕೈಗೆತ್ತಿಕೊಂಡದ್ದಾಗಿರಬೇಕು.

ಯೋಗದ ಆಚರಣೆಯತ್ತ ನೀವು ಬಂದಾಗ ನಿಮ್ಮ ಎಲ್ಲ ಮಾನಸಿಕ

ರಚನೆಗಳನ್ನು ಮತ್ತು ನಿಮ್ಮ ಎಲ್ಲ ಪ್ರಾಣಿಕ ಕಲ್ಪನೆಗಳ ಹಂದರಗಳನ್ನು ಚೂರು ಚೂರು ಮಾಡಲು ನೀವು ಸಿದ್ಧರಾಗಿರಬೇಕು. ನಿಮ್ಮ ನಂಬಿಕೆಯ ಆಧಾರದ ಹೊರತಾಗಿ ಬೇರೆ ಯಾವ ಆಧಾರವಿಲ್ಲದೆ ಗಾಳಿಯಲ್ಲಿ ತೂಗಾಡುವುದಕ್ಕೆ ನೀವು ತಯಾರಾಗಿರಬೇಕು. ನಿಮ್ಮ ಗತಕಾಲವನ್ನು ಮತ್ತು ಅದಕ್ಕೆ ಅಂಟಿಕೊಂಡುದುದೆಲ್ಲವನ್ನು ಒಟ್ಟಿನಲ್ಲಿ ನೀವು ಮರೆತುಬಿಡಬೇಕಾಗುತ್ತದೆ, ಅದನ್ನು ನಿಮ್ಮ ಪ್ರಜ್ಞೆಯಿಂದ ಕಿತ್ತು ಹಾಕಬೇಕಾಗುತ್ತದೆ ಮತ್ತು ಹೊಸ ಜನ್ಮ ತಾಳಬೇಕಾಗುತ್ತದೆ, ಎಲ್ಲ ಬಗೆಯ ಬಂಧನಗಳಿಂದ ಮುಕ್ತರಾಗಬೇಕಾಗುತ್ತದೆ. ನೀವು ಏನಾಗಿದ್ದಿರಿ ಎಂಬುದನ್ನು ಕುರಿತು ಯೋಚಿಸುವುದು ಬೇಡ, ಆದರೆ ನೀವಾಗಬೇಕಾದುದರ ಬಗೆಗಿನ ಅಭೀಪ್ಸೆಯನ್ನು ಕುರಿತು ಯೋಚನೆ ಮಾಡಿರಿ, ಒಟ್ಟಿನಲ್ಲಿ ನೀವು ಸಿದ್ಧಿಸಿಕೊಳ್ಳಬೇಕಾದುದರಲ್ಲಿ ಇದ್ದುಬಿಡಿರಿ. ನಿಮ್ಮ ಮೃತ ಗತಕಾಲದಿಂದ ಹೊರಳಿ ನೇರವಾಗಿ ಭಗವಂತನತ್ತ ನೋಡಿರಿ. ನಿಮ್ಮ ಧರ್ಮ, ದೇಶ, ಕುಟುಂಬ ಇವೆಲ್ಲ ಅಲ್ಲಿವೆ, ಅದು ಭಗವಂತ!

**(3/81–84)** **– ಶ್ರೀಮಾತೆ**

*

## ಯೋಗದ ಸ್ವರೂಪ

**ಪ್ರಶ್ನೆ :** *ಯೋಗದ ಬಗ್ಗೆ ಒಂದಿಷ್ಟು ವಿವರಿಸುವಿರಾ?*

**ಶ್ರೀಮಾತೆ :** ಯೋಗ ಕೈಕೊಳ್ಳುವುದನ್ನು ನೀವು ಏತಕ್ಕಾಗಿ ಬಯಸುವಿರಿ? ಸಾಮರ್ಥ್ಯ ಪಡೆಯುವುದಕ್ಕೋ? ಶಾಂತಿ ಸ್ಥಿರತೆಗಳನ್ನು ಪಡೆಯುವುದಕ್ಕೋ? ಮಾನವಕೋಟಿಯ ಸೇವೆ ಮಾಡುವುದಕ್ಕೋ?

ಈ ಉದ್ದೇಶಗಳಲ್ಲಿ ಯಾವುದೂ ನಿಮ್ಮನ್ನು ಯೋಗಕ್ಕೆ ಅರ್ಹರನ್ನಾಗಿ ಮಾಡುವುದಕ್ಕೆ ಸಾಕಾಗಲಾರದು.

ನೀವು ಉತ್ತರ ನೀಡಬೇಕಾದ ಪ್ರಶ್ನೆ ಇದು: ಭಗವಂತನಿಗಾಗಿ ನಿಮಗೆ ಯೋಗ ಬೇಕಾಗಿದೆಯೇ? ಅವನ ಹೊರತಾಗಿ ಜೀವನ ಅಸಾಧ್ಯವೆನಿಸುವಷ್ಟು ಭಗವಂತ ನಿಮಗೆ ಪರಮೋಚ್ಚ ವಾಸ್ತವತೆಯಾಗಿದ್ದಾನೆಯೆ? ಭಗವಂತನೇ ನಿಮ್ಮ ಅಸ್ತಿತ್ವಕ್ಕೆ ಮೂಲ ಕಾರಣ, ಅವನ ಹೊರತಾಗಿ ನಿಮ್ಮ ಅಸ್ತಿತ್ವದಲ್ಲಿ ಅರ್ಥವೇ ಇಲ್ಲ ಎಂಬ ಭಾವನೆ ಬರುತ್ತಿದೆಯೆ? ಹಾಗಿದ್ದರೆ ಮಾತ್ರ ನಿಮಗೆ ಯೋಗಕ್ಕಾಗಿ ಕರೆ ಬಂದಿದೆ ಎಂದು ಹೇಳಬಹುದು.



ಭಗವಂತನಿಗಾಗಿ ಅಭೀಪ್ಸೆ – ಇದು ಅವಶ್ಯವಾದ ಮೊದಲ ವಿಷಯ.

ನಂತರ ಅವಶ್ಯವಾಗಿರುವ ವಿಷಯವೆಂದರೆ ನೀವು ಅಭೀಪ್ಸೆಯನ್ನು ಕಾಪಾಡಿಕೊಂಡು ಬರಬೇಕು, ಅದು ಯಾವಾಗಲೂ ಜಾಗ್ರತವಾಗಿರುವಂತೆ, ಎಚ್ಚರದಿಂದಿರುವಂತೆ ಮತ್ತು ಜೀವಂತವಿರುವಂತೆ ನೋಡಿಕೊಳ್ಳಬೇಕು. ಮತ್ತು ಅದಕ್ಕಾಗಿ ಅವಶ್ಯವಾದುದೆಂದರೆ ಭಗವಂತನ ಸಂಕಲ್ಪ ಹಾಗೂ ಉದ್ದೇಶಗಳಿಗಾಗಿ ಸಮಗ್ರ ಹಾಗೂ ಪರಿಪೂರ್ಣ ಮುಡಿಪಾಗಿರಿಸುವಿಕೆಯನ್ನು ಮಾಡಿಕೊಳ್ಳಲು ಶಕ್ಯವಾಗುವಂತೆ ಏಕಾಗ್ರತೆಯಲ್ಲಿರುವುದಾಗಿದೆ.

ಹೃದಯ ಕೇಂದ್ರದಲ್ಲಿ ಏಕಾಗ್ರತೆ ಸಾಧಿಸಿರಿ, ಅದರೊಳಗೆ ಪ್ರವೇಶಿಸಿ, ಆಳಾತಿ ಆಳದಲ್ಲಿ ನಿಮಗೆ ಸಾಧ್ಯವಿದ್ದಷ್ಟು ದೂರ ಇಳಿದು ಹೋಗಿರಿ. ಸುತ್ತಲೂ ಚದುರಿದ ನಿಮ್ಮ ಪ್ರಜ್ಞೆಯ ಎಳೆಗಳನ್ನು ಒಂದುಗೂಡಿಸಿರಿ, ಅವುಗಳನ್ನೆಲ್ಲ ಸುತ್ತಿಟ್ಟುಕೊಂಡು ಮುಳುಗಿರಿ, ತಳದವರೆಗೆ ಇಳಿದು ಹೋಗಿರಿ.

ಅಲ್ಲಿ ಹೃದಯದ ಅಚಂಚಲತೆಯಲ್ಲಿ ಜ್ಯೋತಿಯೊಂದು ಪ್ರಜ್ವಲಿಸುತ್ತಿದೆ, ಅದು ನಿಮ್ಮೊಳಗಿರುವ ದೈವತ್ವ – ನಿಮ್ಮ ನಿಜವಾದ ಸತ್ತೆ. ಅದರ ವಾಣಿಯನ್ನು ಕೇಳಿರಿ, ಅದರ ಆದೇಶವನ್ನು ಅನುಸರಿಸಿರಿ.

ಏಕಾಗ್ರತೆಗಾಗಿ ಇತರ ಕೇಂದ್ರಗಳಿವೆ, ಉದಾಹರಣೆಗೆ ಒಂದು ತಲೆಯ ಮೇಲಿರುವ ಕೇಂದ್ರ, ಮತ್ತೊಂದು ಹುಬ್ಬುಗಳ ಮಧ್ಯದಲ್ಲಿರುವ ಕೇಂದ್ರ. ಪ್ರತಿಯೊಂದಕ್ಕೂ ಅದರದರ ಪರಿಣಾಮಕಾರಿತ್ವ ಇದೆ, ಅದು ನಿಮಗೆ ವಿಶಿಷ್ಟ ಪರಿಣಾಮ ಕೊಡುತ್ತದೆ. ಆದರೆ ಕೇಂದ್ರಸತ್ತೆ ಹೃದಯದಲ್ಲಿದೆ ಮತ್ತು ಹೃದಯದಿಂದ ಎಲ್ಲ ಚೈತನ್ಯ, ಪರಿವರ್ತನೆಗಾಗಿ ಪ್ರಚೋದನೆ ಮತ್ತು ಸಿದ್ಧಿಗಾಗಿ ಸಾಮರ್ಥ್ಯ ಎಂಬ ಕೇಂದ್ರ ಚಲನೆಗಳು ಮುಂದುವರಿದುಕೊಂಡು ಹೋಗುತ್ತವೆ.

*

**ಪ್ರಶ್ನೆ :** *ಯೋಗಕ್ಕಾಗಿ ಮನುಷ್ಯ ತನ್ನನ್ನು ಸಿದ್ಧಗೊಳಿಸಲು ಏನು ಮಾಡಬೇಕು?*

**ಶ್ರೀಮಾತೆ :** ಮೊಟ್ಟಮೊದಲಿಗೆ ಅವನು ಅರಿವುಳ್ಳವನಾಗಬೇಕು. ನಮ್ಮ ಸತ್ತೆಯ ಅಲ್ಪ ಅಂಶದ ಬಗ್ಗೆ ನಾವು ಅರಿವುಳ್ಳವರಾಗಿದ್ದೇವೆ, ಹೆಚ್ಚಿನ ಭಾಗದ ಬಗ್ಗೆ ನಮಗರಿವಿಲ್ಲ. ಈ ಅರಿವಿಲ್ಲದಿರುವಿಕೆಯೇ ನಮ್ಮನ್ನು ಆತ್ಮೋನ್ನತಿ ಸಾಧಿಸದ ಸ್ವಭಾವದ ವಶದಲ್ಲಿರಿಸುವುದು ಮತ್ತು ಅದರಲ್ಲಿ ಬದಲಾವಣೆ ಹಾಗೂ ಪರಿವರ್ತನೆ ಬರುವುದನ್ನು ತಡೆಯುವುದು. ಈ ಅರಿವಿಲ್ಲದಿರುವಿಕೆಯ ಅಥವಾ ಅಪ್ರಜ್ಞೆಯ

ಮೂಲಕ ಅದೈವೀ ಶಕ್ತಿಗಳು ನಮ್ಮಲ್ಲಿ ಪ್ರವೇಶಿಸಿ ನಮ್ಮನ್ನು ತಮ್ಮ ದಾಸರನ್ನಾಗಿ ಮಾಡಿಕೊಳ್ಳುತ್ತವೆ. ನಿಮ್ಮ ಬಗೆಗೆ ನೀವು ಅರಿವುಳ್ಳವರಾಗಬೇಕು, ನಿಮ್ಮ ಸ್ವಭಾವ ಹಾಗೂ ಚಲನೆಗಳನ್ನು ಕುರಿತು ಜಾಗ್ರತರಾಗಬೇಕು. ನೀವು ಕಾರ್ಯಗಳನ್ನು ಏಕೆ ಮತ್ತು ಹೇಗೆ ಕೈಕೊಳ್ಳುವಿರಿ ಮತ್ತು ಅವುಗಳ ಬಗೆಗೆ ಇರುವ ನಿಮ್ಮ ಭಾವನೆ, ಯೋಚನೆ ಏನು ಎಂಬುದನ್ನು ತಿಳಿದುಕೊಳ್ಳಬೇಕು. ನಿಮ್ಮ ಉದ್ದೇಶಗಳನ್ನು, ಪ್ರೇರಣೆಗಳನ್ನು, ನಿಮ್ಮನ್ನು ಕಾರ್ಯ ಕೈಕೊಳ್ಳುವಂತೆ ಮಾಡುವ ಗುಪ್ತ ಅಥವಾ ತೋರಿಕೆಯ ಶಕ್ತಿಗಳನ್ನು ಅರ್ಥಮಾಡಿಕೊಳ್ಳಬೇಕು. ವಾಸ್ತವದಲ್ಲಿ ನಿಮ್ಮ ಸತ್ತೆಯ ಅಂಗೋಪಾಂಗಗಳನ್ನೆಲ್ಲ ಬಿಚ್ಚಿ ನೋಡತಕ್ಕದ್ದು. ಇವೆಲ್ಲವುಗಳ ಬಗ್ಗೆ ನಿಮಗೆ ಅರಿವುಂಟಾಯಿತೆಂದರೆ ಅದರರ್ಥ ನೀವು ವಿಷಯಗಳನ್ನು ವಿವೇಚಿಸಿ ನೋಡಲು, ಅವುಗಳ ಸ್ಥಾನಗಳಲ್ಲಿ ಸೂಕ್ತ ಬದಲಾವಣೆ ಮಾಡಲು ಶಕ್ತರಾಗುವಿರಿ ಮತ್ತು ಯಾವ ಶಕ್ತಿಗಳು ನಿಮ್ಮನ್ನು ಕೆಳಗೆಳೆಯುತ್ತಿವೆ, ಯಾವ ಶಕ್ತಿಗಳು ನಿಮಗೆ ಸಹಾಯಕವಾಗಿವೆ ಎಂಬುದನ್ನು ಕಂಡುಕೊಳ್ಳುವಿರಿ. ಸರಿ–ತಪ್ಪು, ಸತ್ಯ–ಅಸತ್ಯ, ದೈವಿಕ–ಅದೈವಿಕ ಇವುಗಳ ನಡುವಿನ ಭೇದವನ್ನು ತಿಳಿದುಕೊಂಡ ನಂತರ ಆ ನಿಮ್ಮ ಜ್ಞಾನದ ಪ್ರಕಾರ ಕಾರ್ಯ ಕೈಕೊಳ್ಳತಕ್ಕದ್ದು, ಎಂದರೆ ನಿಷ್ಠುರವಾಗಿ ಒಂದನ್ನು ನಿರಾಕರಿಸಿ ಇನ್ನೊಂದನ್ನು ಸ್ವೀಕರಿಸಬೇಕು. ಈ ದ್ವಂದ್ವ ಪ್ರತಿಯೊಂದು ಹೆಜ್ಜೆಯಲ್ಲಿ ಎದುರಾಗುತ್ತದೆ ಮತ್ತು ಪ್ರತಿಯೊಂದು ಹೆಜ್ಜೆಯಲ್ಲಿ ಆಯ್ಕೆಮಾಡಿಕೊಳ್ಳಬೇಕಾಗುತ್ತದೆ. ನಿಮ್ಮಲ್ಲಿ ತಾಳ್ಮೆ, ಪಟ್ಟುಹಿಡಿದು ಕೆಲಸ ಮಾಡುವ ಸ್ವಭಾವ, ಜಾಗರೂಕತೆ ಇರಬೇಕು – ಜ್ಞಾನಿಗಳು ಹೇಳುವಂತೆ 'ನಿದ್ರಾರಹಿತ'ರಾಗಬೇಕು. ದೈವಿಕವಾದ ವಿಷಯಗಳ ವಿರುದ್ಧ ಅದೈವಿಕವಾದವುಗಳಿಗೆ ಅವಕಾಶ ಕೊಡುವುದನ್ನು ನೀವು ಸದಾ ನಿರಾಕರಿಸಬೇಕು.

**(3/1–2)** **– ಶ್ರೀಮಾತೆ**

*

## ಸ್ವಾತಂತ್ರ್ಯ ಮತ್ತು ವಿಧಿ ಪ್ರಾಬಲ್ಯ, ಯೋಗದ ಗುರಿ

**ಪ್ರಶ್ನೆ :** *ನಿಜವಾದ ಸ್ವಾತಂತ್ರ್ಯ ಎಂಬುದಿಲ್ಲವೆ? ನಿಮ್ಮ ಸ್ವಾತಂತ್ರ್ಯವನ್ನು ಮೊದಲುಗೊಂಡು ಪ್ರತಿಯೊಂದನ್ನು ಪರಿಪೂರ್ಣವಾಗಿ ನಿರ್ಧರಿಸಲಾಗಿ–ರುತ್ತದೆಯೆ? ಮತ್ತು ವಿಧಿ ಪ್ರಾಬಲ್ಯವೇ ಉಚ್ಚತರ ರಹಸ್ಯವಾಗಿರುತ್ತದೆಯೆ?*

**ಶ್ರೀಮಾತೆ :** ಸ್ವಾತಂತ್ರ್ಯ ಮತ್ತು ವಿಧಿ ಪ್ರಾಬಲ್ಯ, ಮುಕ್ತಿ ಹಾಗೂ ನಿಯತಿವಾದ (determinism) ಇವು ಪ್ರಜ್ಞೆಯ ಬೇರೆ, ಬೇರೆ ಸ್ತರಗಳ ಮೇಲೆ ಸತ್ಯಗಳಾಗಿ



ಬಳಕೆಯಲ್ಲಿವೆ. ಪ್ರಜ್ಞೆ ಎಂಬುದು ಏಕಪ್ರಕಾರದ್ದಾದ ನೈಜತೆಯಲ್ಲ. ಅದು ಸಂಕೀರ್ಣವಾಗಿರುತ್ತದೆ, ಅದು ಸಮತಲದ ವಿಸ್ತಾರದಂತಹದೇನೋ ಆಗಿರುವುದಿಲ್ಲ, ಅದಕ್ಕೆ ಹಲವಾರು ಆಯಾಮಗಳಿರುತ್ತವೆ. ಅತ್ಯುಚ್ಚ ಶಿಖರದಲ್ಲಿ ಪರಮೋಚ್ಚವಾದದ್ದಿದೆ, ಅತ್ಯಂತ ಕನಿಷ್ಠಮಟ್ಟದ ಆಳದಲ್ಲಿ ಭೌತದ್ರವ್ಯವಿದೆ. ಕನಿಷ್ಠಮಟ್ಟದ ಆಳ ಹಾಗೂ ಅತ್ಯುಚ್ಚ ಶಿಖರ ಇವುಗಳ ಮಧ್ಯೆ ಸ್ತರಗಳ ಅನಂತ ಶ್ರೇಣಿಯೇ ಇದೆ.

ಭೌತದ್ರವ್ಯದ ಸ್ತರದಲ್ಲಿ ಹಾಗೂ ಸಾಮಾನ್ಯ ಪ್ರಜ್ಞೆಯ ಮಟ್ಟದಲ್ಲಿ ನಿಮ್ಮ ಕೈಕಾಲುಗಳನ್ನು ಕಟ್ಟಿಹಾಕಲಾಗಿರುತ್ತದೆ. ಪ್ರಕೃತಿಯ ಯಾಂತ್ರಿಕತೆಯ ದಾಸರಾದ ನಿಮ್ಮನ್ನು ಕರ್ಮದ ಸಂಕೋಲೆ ಕಟ್ಟಿಹಾಕಿದೆ, ಆ ಸಂಕೋಲೆಯಲ್ಲಿ ಸಂಭವಿಸುವುದೆಲ್ಲ ಮೊದಲು ಮಾಡಿದ ಕರ್ಮದ ಫಲವೇ ಆಗಿರುತ್ತದೆ. ನಿಮಗೆ ಸ್ವತಂತ್ರ ಚಲನೆಯ ಭ್ರಮೆ ಇರುತ್ತದೆ, ಆದರೆ ನೀವು ಇತರರನ್ನು ಅನುಕರಿಸುತ್ತಿರುವುದು ವಾಸ್ತವತೆಯಾಗಿರುತ್ತದೆ. ನೀವು ಪ್ರಕೃತಿಯ ವಿಶ್ವದ ಚಲನೆಗಳನ್ನು ಪ್ರತಿಧ್ವನಿಸುತ್ತೀರಿ. ಪ್ರಕೃತಿಯ ವಿಶ್ವವ್ಯಾಪಕ ಜಜ್ಜಿ ಹಾಕುವ ಯಂತ್ರದ ಚಕ್ರದೊಂದಿಗೆ ಅಸಹಾಯಕರಾಗಿ ಉರುಳುತ್ತೀರಿ.

ಆದರೆ ಅದು ಹಾಗಿರಬೇಕಾಗಿಲ್ಲ. ನೀವು ಸಂಕಲ್ಪ ಮಾಡಿದರೆ ನಿಮ್ಮ ನೆಲೆಯನ್ನು ಬದಲಾಯಿಸಿಕೊಳ್ಳಬಹುದು. ತಳದಲ್ಲಿ ಉಳಿಯುವುದರ ಬದಲಾಗಿ, ಯಂತ್ರದಲ್ಲಿ ಸಿಕ್ಕಿಹಾಕಿಕೊಂಡು ಜರ್ಜರಿತವಾಗುವುದರ ಬದಲಾಗಿ ಇಲ್ಲವೆ ಗೊಂಬೆಯಂತೆ ಚಲನೆಗೊಳಗಾಗುವುದರ ಬದಲಾಗಿ ನೀವು ಮೇಲೇಳಬಹುದು ಮತ್ತು ಮೇಲಿನಿಂದ ಅವಲೋಕಿಸಬಹುದು ಮತ್ತು ಪ್ರಜ್ಞೆಯಲ್ಲಿ ಬದಲಾವಣೆ ತಂದುಕೊಂಡು ತೋರಿಕೆಗೆ ಅನಿವಾರ್ಯವೆನಿಸುವ ಪರಿಸ್ಥಿತಿಗಳನ್ನು ನಿರ್ವಹಿಸಲು ಸಾಧನವೊಂದನ್ನು ನೀವು ದೊರಕಿಸಬಹುದು ಮತ್ತು ಸ್ಥಿರಗೊಂಡ ಪರಿಸ್ಥಿತಿಗಳನ್ನು ಬದಲಾಯಿಸಬಹುದು. ಒಮ್ಮೆ ಈ ತಿರುಗಣೆಯಿಂದ ನಿಮ್ಮನ್ನು ಹೊರಗೆಳೆದುಕೊಂಡು ಬಂದಿರಾದರೆ ಮತ್ತು ಎತ್ತರದಲ್ಲಿ ನಿಂತುಕೊಂಡಿರಾದರೆ ನೀವು ಸ್ವತಂತ್ರರಾಗಿರುವುದನ್ನು ಕಂಡುಕೊಳ್ಳಬಹುದು. ಎಲ್ಲ ಒತ್ತಡಗಳಿಂದ ಸ್ವತಂತ್ರರಾಗಿ ನೀವು ನಂತರ ನಿಷ್ಕ್ರಿಯ ಉಪಕರಣವಾಗಿ ಉಳಿಯದೆ ಸಕ್ರಿಯ ಪ್ರತಿನಿಧಿಯಾಗುವಿರಿ. ನಿಮ್ಮ ಕ್ರಿಯೆಯ ಪರಿಣಾಮಗಳಿಂದ ನೀವು ಬಂಧನಕ್ಕೊಳಗಾಗಿರುವುದಿಲ್ಲ ಅಷ್ಟೇ ಅಲ್ಲ, ಆದರೆ ಪರಿಣಾಮಗಳನ್ನು ಬದಲು ಮಾಡಲು ಕೂಡ ನೀವು ಶಕ್ತರಾಗುವಿರಿ. ಒಮ್ಮೆ ನಿಮ್ಮನ್ನು ಶಕ್ತಿಗಳ ಮೂಲವಿರುವ ಪ್ರಜ್ಞೆಯ ಸ್ತರಕ್ಕೆ ಮೇಲಕ್ಕೆತ್ತಿಕೊಂಡು ಹೋದ ನಂತರ ಮತ್ತು ನಿಮ್ಮನ್ನು ಈ

ಕ್ರಿಯಾಶೀಲ ಮೂಲಗಳೊಂದಿಗೆ ಗುರುತಿಸಿಕೊಂಡಾಗ, ಇನ್ನು ಮುಂದೆ ನೀವು ಚಲಿಸುವಂತೆ ಮಾಡಲಾಗಿರುವುದಕ್ಕೆ ಸೇರಿರುವುದಿಲ್ಲ, ಆದರೆ ಯಾವುದು ಚಾಲನೆ ಮಾಡುವುದೋ ಅದಕ್ಕೆ ಸೇರಿರುತ್ತೀರಿ.

ಕರ್ಮದ ಚಕ್ರದಿಂದ ಹೊರಗೆ ಬಂದು ದೈವೀ ಚಲನೆಯಲ್ಲಿ ಸೇರ್ಪಡೆಗೊಳ್ಳುವುದೇ ಯೋಗದ ಖಚಿತವಾದ ಉದ್ದೇಶವಾಗಿರುತ್ತದೆ. ಪ್ರಕೃತಿಯ ಯಾಂತ್ರಿಕ ಸುತ್ತು ಹೊಡೆಯುವಿಕೆಯಲ್ಲಿ ನೀವು ಅಜ್ಞಾನಿ ದಾಸರಾಗಿರುವಿರಿ, ಅಸಹಾಯಕ ಮತ್ತು ದುಃಖಾರ್ತ ಸಲಕರಣೆಯಾಗಿರುವಿರಿ. ಯೋಗದ ಮೂಲಕ ಆ ಯಾಂತ್ರಿಕ ಸುತ್ತಿನಿಂದ ಹೊರಬಂದು ಇನ್ನೊಂದು ಸ್ತರದಲ್ಲಿ ಮೇಲ್ಗಡೆ ಸಾಗುವಿರಿ, ಅಲ್ಲಿ ನೀವು ಉಚ್ಚತರ ಅದೃಷ್ಟವನ್ನು ಕಾರ್ಯಗತ ಮಾಡುವುದರಲ್ಲಿ ಸಹಭಾಗಿಗಳಾಗಬಹುದು ಮತ್ತು ಕ್ರಿಯಾಶೀಲ ಪ್ರತಿನಿಧಿಯಾಗಬಹುದು. ಪ್ರಜ್ಞೆಯ ಈ ಚಲನೆಗೆ ಎರಡು ದಾರಿಗಳಿವೆ. ಮೊಟ್ಟಮೊದಲು ಆರೋಹಣದ ಕ್ರಮವಿದೆ, ನೀವು ಭೌತಿಕ ಪ್ರಜ್ಞೆಯ ಸ್ತರದಿಂದ ನಿಮ್ಮನ್ನು ಉಚ್ಚ ಸ್ತರಗಳಲ್ಲಿ ಮೇಲಕ್ಕೆತ್ತುವಿರಿ. ಆದರೆ ನಿಮ್ನಸ್ತರಗಳಿಂದ ಊರ್ಧ್ವಸ್ತರಗಳತ್ತ ಕೈಕೊಳ್ಳುವ ಆರೋಹಣವು ಊರ್ಧ್ವಸ್ತರದಿಂದ ನಿಮ್ನಸ್ತರಕ್ಕೆ ಅವರೋಹಣವನ್ನು ಆಹ್ವಾನಿಸುವುದು. ಪೃಥ್ವಿಯ ಸ್ತರದಿಂದ ನೀವು ಮೇಲಕ್ಕೇರಿ ಹೋದಾಗ ಅಲ್ಲಿಂದ ಏನನ್ನಾದರೂ ಪೃಥ್ವಿಯತ್ತ ತೆಗೆದುಕೊಂಡು ಬರುವಿರಿ – ಅದು ಹಳೆಯ ಸ್ವಭಾವವನ್ನು ಪರಿವರ್ತಿಸುವ ಇಲ್ಲವೆ ಅದನ್ನು ಪರಿವರ್ತಿಸಲು ಪ್ರವೃತ್ತಿ ಹೊಂದಿರುವ ಸ್ವಲ್ಪ ಮಟ್ಟಿಗಿನ ಪ್ರಕಾಶ ಮತ್ತು ಸಾಮರ್ಥ್ಯವಾಗಿರಬಹುದು. ನಂತರ ವಿಭಿನ್ನ, ಒಂದರಿಂದ ಇನ್ನೊಂದು ಸಂಬಂಧ ಕಡಿದುಕೊಂಡ ಅಸಮವಾದ ಈ ವಿಷಯಗಳು – ನಿಮ್ಮಲ್ಲಿರುವ ಉಚ್ಚತರವಾದ ಹಾಗೂ ನಿಮ್ನತರವಾದ ವಿಷಯಗಳು, ನಿಮ್ಮ ಸತ್ತೆಯ ಹಾಗೂ ಪ್ರಜ್ಞೆಯ ಆಂತರಿಕ ಹಾಗೂ ಬಾಹ್ಯ ಸ್ತರಗಳು – ಒಟ್ಟಿಗೆ ಸೇರಿ ಸಾವಕಾಶವಾಗಿ ಒಂದುಗೂಡುವವು ಮತ್ತು ಕ್ರಮೇಣ ಏಕಮೇವ ಸತ್ಯವಾಗಿ, ಸಾಮರಸ್ಯವಾಗಿ ಒಂದರೊಳಗೊಂದು ಸೇರಿಕೊಳ್ಳುವವು.

ಪವಾಡಗಳೆಂದು ಕರೆಯಲಾದವುಗಳು ಸಂಭವಿಸುವುದು ಈ ರೀತಿಯಲ್ಲಿಯೆ. ಜಗತ್ತಿನಲ್ಲಿ ಅಸಂಖ್ಯಾತ ಸ್ತರಗಳಿವೆ ಮತ್ತು ಪ್ರತಿಯೊಂದಕ್ಕೆ ಅದರದೇ ವಿಭಿನ್ನ ನಿಯಮಗಳಿವೆ. ಒಂದು ಸ್ತರದ ನಿಯಮಗಳು ಇನ್ನೊಂದು ಸ್ತರಕ್ಕೆ ಅನ್ವಯವಾಗುವುದಿಲ್ಲ. ಪವಾಡವೆಂದರೆ ಭೌತದ್ರವ್ಯವಿರುವ ಈ ಸ್ತರದಲ್ಲಿ ಇನ್ನೊಂದು ಪ್ರಜ್ಞೆ ಒಮ್ಮೆಲೆ ಅವರೋಹಣ ಮಾಡುವುದಾಗಿರುತ್ತದೆ, ಇದ್ದಕ್ಕಿದ್ದಂತೆ



ಪ್ರವೇಶಮಾಡುವುದಾಗಿರುತ್ತದೆ – ಬಹುಮಟ್ಟಿಗೆ ಅದು ಪ್ರಾಣಿಕದ ಸಾಮರ್ಥ್ಯಗಳದಾಗಿರುತ್ತದೆ.

**(3/29–31)** **– ಶ್ರೀಮಾತೆ**

*

## ಚಿಕ್ಕ ಹಡಗಿನ ಮೇಲಿದ್ದ ಇಬ್ಬರು ಪಾದ್ರಿಗಳ ಕತೆ

**ಪ್ರಶ್ನೆ :** *ಮಧುರ ಮಾತೆಯವರೆ, ಇಂದಿನ ಜಗತ್ತಿನಲ್ಲಿ ಬಹಳಷ್ಟು ಜನರು ಒಂದಿಲ್ಲೊಂದು ರೀತಿಯ ಧರ್ಮವನ್ನು ಅನುಸರಿಸುತ್ತಾರೆ. ಅವರಿಗೆ ಸಹಾಯ ದೊರಕುತ್ತದೆಯೆ?*

**ಶ್ರೀಮಾತೆ :** ಬಹಳಷ್ಟೇನೂ ಇಲ್ಲ.

ಬಹುಶಃ ಈಗ ಅವರು ಅದನ್ನು ಮತ್ತೆ ಕೈಗೆತ್ತಿಕೊಳ್ಳುತ್ತಿದ್ದಾರೆ, ಆದರೆ ಈ (ಇಪ್ಪತ್ತನೆಯ) ಶತಮಾನದ ಆದಿಯಲ್ಲಿ ಬಹಳ ಕಾಲದವರೆಗೆ ಅವರು ಧರ್ಮವನ್ನು ಜ್ಞಾನವಿರೋಧಿಯೆಂದು ತಿರಸ್ಕರಿಸಿದ್ದರು – ಕನಿಷ್ಠ ಪಕ್ಷ ಎಲ್ಲ ಬುದ್ಧಿಜೀವಿಗಳು ಆ ರೀತಿ ಮಾಡಿದ್ದರು. ಮತ್ತು ಇತ್ತೀಚೆಗೆ ಮಾತ್ರ ಆಮೂಲಾಗ್ರ ದೃಷ್ಟ ಪ್ರಮಾಣವಾದವನ್ನು ಹೊರತುಪಡಿಸಿದ ಮತ್ತೊಂದರೆಡೆಗೆ ಮರಳುವ ಕಾರ್ಯ ಪ್ರಾರಂಭವಾಗಿದೆ.

ಸಾಮಾಜಿಕ ರೂಢಿಗನುಗುಣವಾಗಿ ಜನರು ಧರ್ಮವನ್ನು ಅನುಸರಿಸುತ್ತಾರೆ, ಅವರು ಇನ್ನಿತರರ ದೃಷ್ಟಿಯಲ್ಲಿ ಕೆಟ್ಟವರಾಗಿ ಕಾಣಲು ಬಯಸುವುದಿಲ್ಲ. ಉದಾಹರಣೆಗೆ ಹಳ್ಳಿಯೊಂದರಲ್ಲಿ ಧಾರ್ಮಿಕ ಸಮಾರಂಭಗಳಿಗೆ ಹೋಗದಿರುವುದು ಕಠಿಣವಾಗುತ್ತದೆ, ಏಕೆಂದರೆ ನಿಮ್ಮ ಎಲ್ಲ ನೆರೆಹೊರೆಯವರು ನಿಮ್ಮತ್ತ ಬೊಟ್ಟು ಮಾಡಿ ತೋರಿಸುತ್ತಾರೆ, ಆದರೆ ಅದರಿಂದ ಆಧ್ಯಾತ್ಮ ಜೀವನಕ್ಕೆ ಆಗಬೇಕಾದುದು ಏನೂ ಇಲ್ಲ.

(ಮೌನ)

ನಾನು ಮೊದಲ ಸಲ ಭಾರತಕ್ಕೆ ಬಂದಾಗ ಜಪಾನೀಯರ ಚಿಕ್ಕ ಹಡಗಿನಲ್ಲಿ ಬಂದಿದ್ದೆ. ಜಪಾನೀಯರ ಈ ಹಡಗದಲ್ಲಿ ಇಬ್ಬರು ಪಾದ್ರಿಗಳಿದ್ದರು, ಅವರು ಪ್ರೊಟೆಸ್ಟಂಟ ಪಂಥದ ಎರಡು ವಿಭಿನ್ನ ಶಾಖೆಗಳಿಗೆ ಸೇರಿದವರಾಗಿದ್ದರು. ಆ ಶಾಖೆಗಳು ಯಾವವು ಎಂಬುದು ಸರಿಯಾಗಿ ನನ್ನ ನೆನಪಿಗೆ ಬರುತ್ತಿಲ್ಲ. ಆದರೆ ಆ ಪಾದ್ರಿಗಳು ಇಂಗ್ಲೀಷ ಜನರಾಗಿದ್ದರು, ಒಬ್ಬ ಆ್ಯಂಗ್ಲಿಕನ್ ಮತ್ತು ಇನ್ನೊಬ್ಬ ಪ್ರಿಸ್‌ಬಿಟೇರಿಯನ್ ಆಗಿದ್ದಿರಬಹುದೆಂದು ನನಗನಿಸುತ್ತದೆ.

ರವಿವಾರ ಬಂದಿತ್ತು. ಹಡಗಿನ ಮೇಲೆ ಧಾರ್ಮಿಕ ಸಮಾರಂಭ ನಡೆಯಬೇಕಾಗಿತ್ತು. ಇಲ್ಲವಾದರೆ ನಾವು ಜಪಾನೀಯರಂತೆ ಕ್ರಿಸ್ತ ಧರ್ಮದವರಲ್ಲವೆಂದು ತೋರಿಸಿಕೊಳ್ಳುವಂತಾಗುತ್ತಿತ್ತು. ಆ ಸಮಾರಂಭ ನಡೆಯಲೇಬೇಕಾಗಿತ್ತು. ಆದರೆ ಅದನ್ನು ನೆರವೇರಿಸಿಕೊಡುವವರಾರು? ಆ್ಯಂಗ್ಲಿಕನ್ ಪಾದ್ರಿ ಮಾಡಬೇಕೋ ಅಥವಾ ಪ್ರಿಸ್‌ಬಿಟೇರಿಯನ್ ಪಾದ್ರಿ ಮಾಡಬೇಕೋ? ಈ ಬಗ್ಗೆ ಹೊಡೆದಾಟ ಸ್ವಲ್ಪದರಲ್ಲಿ ತಪ್ಪಿತು. ಕೊನೆಗೆ ಒಬ್ಬರು ಮರ್ಯಾದೆಯಿಂದ ಹಿಂತೆಗೆದುಕೊಂಡರು. ಅವರು ಯಾರೆಂದು ನನಗೆ ಸರಿಯಾಗಿ ನೆನಪಿಗೆ ಬರುತ್ತಿಲ್ಲ. ಬಹುಶಃ ಆ್ಯಂಗ್ಲಿಕನ್ ಪಾದ್ರಿ ಇರಬಹುದು. ಪ್ರಿಸ್‌ಬಿಟೇರಿಯನ್ ಪಾದ್ರಿ ಸಮಾರಂಭ ನಡೆಸಿಕೊಟ್ಟ.

ಈ ಸಮಾರಂಭ ಹಡಗಿನ ಆರಾಮದ ಆವರಣ (lounge) ದಲ್ಲಿ ನಡೆಯಿತು. ಈ ಸ್ಥಳಕ್ಕೆ ನಾವು ಕೆಲವೊಂದು ಮೆಟ್ಟಿಲುಗಳನ್ನು ಇಳಿದು ಹೋಗಬೇಕಾಗಿತ್ತು. ಆ ದಿನ ಎಲ್ಲ ಗಂಡಸರು ಕೋಟು ಧರಿಸಿದ್ದರು – ಸೆಕೆ ಬಹಳಷ್ಟಿತ್ತು. ಆಗ ನಾವು ಕೆಂಪು ಸಮುದ್ರದ ಮೇಲಿದ್ದೆವೆಂದು ಕಾಣುತ್ತದೆ – ಅವರು ಕೋಟು, ಕೊರಳ ಪಟ್ಟಿ, ಚರ್ಮದ ಬೂಟುಗಳನ್ನು ಧರಿಸಿದ್ದರು. ತಲೆಯ ಮೇಲೆ ಹ್ಯಾಟ್ ಹಾಕಿಕೊಂಡಿದ್ದರು, ಬಗಲಲ್ಲಿ ಪ್ರಾರ್ಥನಾ ಪುಸ್ತಕವನ್ನಿಟ್ಟುಕೊಂಡು, ಮೆರವಣಿಗೆಯಲ್ಲಿ ಹೋಗುತ್ತಿರುವ ಹಾಗೆ, ಹಡಗಿನ ಮೇಲಂತಸ್ತಿನಿಂದ ಆರಾಮದ ಆವರಣದ ವರೆಗೆ ನಡೆದುಕೊಂಡು ಹೋದರು. ಮಹಿಳೆಯರು ತಮ್ಮ ಹ್ಯಾಟ್ ಧರಿಸಿದ್ದರು, ಅವರಲ್ಲಿ ಕೆಲವರು ತಮ್ಮ ಜೊತೆಗೆ ಕೊಡೆಗಳನ್ನು ಕೂಡ ತಂದಿದ್ದರು. ಅವರೂ ತಮ್ಮ ಬಗಲಲ್ಲಿ ಪ್ರಾರ್ಥನಾ ಪುಸ್ತಕವನ್ನು ಇಟ್ಟುಕೊಂಡಿದ್ದರು.

ಹೀಗೆ ಅವರು ಸಮಾರಂಭ ನಡೆಯುವ ಸ್ಥಳದಲ್ಲಿ ಒಟ್ಟುಗೂಡಿದರು. ಪ್ರಿಸ್‌ಬಿಟೇರಿಯನ್ ಪಾದ್ರಿ ಉಪದೇಶದ ಭಾಷಣ ಮಾಡಿದನು. ಎಲ್ಲರೂ ಒಳ್ಳೆಯ ಧಾರ್ಮಿಕ ಭಾವನೆಯಿಂದ ಕೇಳಿದರು. ನಂತರ ಸಮಾರಂಭ ಮುಗಿಯಿತು. ಎಲ್ಲರೂ ಮತ್ತೆ ಹಡಗಿನ ಮೇಲ್ಭಾಗಕ್ಕೆ ಬಂದರು. ತಮ್ಮ ಕರ್ತವ್ಯವನ್ನು ಮಾಡಿ ಮುಗಿಸಿದ ಸಮಾಧಾನ ಅವರಲ್ಲಿ ಎದ್ದು ಕಾಣುತ್ತಿತ್ತು. ಮತ್ತು, ಸಹಜವಾಗಿ, ಐದು ನಿಮಿಷಗಳ ನಂತರ ಬಾರಿನಲ್ಲಿ ಕುಡಿಯುತ್ತ, ಇಸ್ಪೇಟ ಆಟ ಆಡುತ್ತ ಮೋಜು ಮಾಡತೊಡಗಿದರು. ಅವರು ಧಾರ್ಮಿಕ ಸಮಾರಂಭವನ್ನು ಮರೆತು ಬಿಟ್ಟಿದ್ದರು. ಅವರು ತಮ್ಮ ಕರ್ತವ್ಯ ಮಾಡಿದ್ದರು. ಅದು ಮುಗಿದಿತ್ತು. ಅದರ ಬಗ್ಗೆ ಹೆಚ್ಚಿಗೆ ಹೇಳುವುದೇನೂ ಇರಲಿಲ್ಲ.



ಸಮಾರಂಭ ನಡೆಸಿಕೊಟ್ಟ ಪಾದ್ರಿ ನನ್ನ ಬಳಿಗೆ ಬಂದು ನಾನೇಕೆ ಸಮಾರಂಭದಲ್ಲಿ ಭಾಗವಹಿಸಲಿಲ್ಲ ಎಂದು ಹೆಚ್ಚು ಕಡಿಮೆ ವಿನಮ್ರತೆಯಿಂದಲೇ ಕೇಳಿದ. ನಾನು ಹೇಳಿದೆ: "ಸ್ವಾಮಿ, ನನಗೆ ಧರ್ಮದಲ್ಲಿ ವಿಶ್ವಾಸವಿಲ್ಲ" ಎಂದು.

"ಓ ನೀವು ಭೌತವಾದಿ (materialist) ಗಳೇ?"

"ಇಲ್ಲ, ಹಾಗೇನಿಲ್ಲ."

"ಅಹಾ! ಹಾಗಿದ್ದರೆ ನೀವೇಕೆ ಸಮಾರಂಭದಲ್ಲಿ ಭಾಗವಹಿಸಲಿಲ್ಲ?"

"ಓ," ನಾನು ಹೇಳಿದೆ: "ನಾನು ನಿಜವನ್ನು ನುಡಿದರೆ ನಿಮಗೆ ಬಹಳ ಅಸಂತೋಷವಾಗುವುದು. ನಾನು ಏನನ್ನೂ ಹೇಳದಿರುವುದೇ ಹೆಚ್ಚು ಕ್ಷೇಮವಾದದ್ದೆಂದು ನನಗನಿಸುತ್ತದೆ."

ಆ ಪಾದ್ರಿ ಕಾರಣವನ್ನು ಹೇಳಲು ಬಹಳ ಒತ್ತಾಯಪಡಿಸಿದ. ಕೊನೆಗೆ ನಾನು ಹೇಳಿದೆ: "ಸ್ವಲ್ಪ ಸರಿಯಾಗಿ ತಿಳಿದುಕೊಳ್ಳಲು ಪ್ರಯತ್ನಿಸಿರಿ. ನೀವಾಗಲಿ, ನಿಮ್ಮ ಹಿಂಬಾಲಕರಾಗಲಿ ನಿಷ್ಠಾವಂತರಾಗಿದ್ದೀರಿ ಎಂದು ನನಗನಿಸುವುದಿಲ್ಲ. ನೀವು ಅಲ್ಲಿ ಸಾಮಾಜಿಕ ಕರ್ತವ್ಯ ಇಲ್ಲವೆ ರೂಢಿಯೊಂದನ್ನು ಪೂರೈಸಲು ಹೋಗಿದ್ದಿರಿ. ಭಗವಂತನೊಡನೆ ಸಂಪರ್ಕ ಪಡೆಯಬೇಕೆಂಬ ನಿಜವಾದ ಇಚ್ಛೆಯಿಂದಲ್ಲ."

"ಭಗವಂತನೊಡನೆ ಸಂಪರ್ಕದಲ್ಲಿ ಬರುವುದು! ಆದರೆ ಅದನ್ನು ನಾವು ಮಾಡಲು ಶಕ್ತರಲ್ಲ, ಕೆಲವೊಂದು ಒಳ್ಳೆಯ ಶಬ್ದಗಳನ್ನು ಹೇಳಬಲ್ಲೆವೇ ಹೊರತು ನಮ್ಮಲ್ಲಿ ಭಗವಂತನೊಡನೆ ಸಂಪರ್ಕ ಪಡೆಯುವ ಸಾಮರ್ಥ್ಯವಿಲ್ಲ."

ಆಗ ನಾನು ಹೇಳಿದೆ: "ಆ ಕಾರಣದಿಂದಾಗಿಯೆ ನಾನು ಅಲ್ಲಿಗೆ ಹೋಗಲಿಲ್ಲ, ಏಕೆಂದರೆ ಅಂತಹ ಸಮಾರಂಭದಲ್ಲಿ ನನಗೆ ಸ್ವಾರಸ್ಯ ಕಂಡುಬರುವುದಿಲ್ಲ."

ಅದಾದ ನಂತರ ಆ ಪಾದ್ರಿ ನನಗೆ ಅನೇಕ ಪ್ರಶ್ನೆಗಳನ್ನು ಕೇಳಿದ ಮತ್ತು ಅವನು ಚೈನಾ ದೇಶಕ್ಕೆ ಜನರನ್ನು ಕ್ರಿಸ್ತಮತಕ್ಕೆ ಮತಾಂತರಗೊಳಿಸಲು ಹೊರಟಿರುವುದಾಗಿ ಹೇಳಿದ. ಅದನ್ನು ಕೇಳಿ ನಾನು ಗಂಭೀರವಾಗಿ ಹೇಳಿದೆ: "ಇಲ್ಲಿ ಸ್ವಲ್ಪ ಕೇಳಿರಿ, ನಿಮ್ಮ ಧರ್ಮ ಹುಟ್ಟುವ ಮೊದಲೆ ಎಂದರೆ ಎರಡು ಸಾವಿರ ವರ್ಷಗಳ ಮೊದಲೆ ಚೈನಾ ದೇಶದ ಜನರು ಉನ್ನತ ಮಟ್ಟದ ತತ್ವಜ್ಞಾನ ಹೊಂದಿದ್ದರು ಹಾಗೂ ಭಗವಂತ ನೆಡೆಗೆ ಸಾಗಿ ಹೋಗುವ ಮಾರ್ಗವನ್ನು ಅರಿತಿದ್ದರು. ಅವರು ಪಾಶ್ಚಾತ್ಯರನ್ನು ಕಾಡು ಜನರೆಂದು ಭಾವಿಸುತ್ತಾರೆ. ಮತ್ತು ನೀವು ನಿಮಗಿಂತ ಹೆಚ್ಚು ತಿಳಿದವರನ್ನು ಮತಾಂತರ ಮಾಡಲು ಅಲ್ಲಿಗೆ ಹೊರಟಿರುವಿರಾ? ನೀವು ಅವರಿಗೆ ಏನನ್ನು

ಕಲಿಸಿಕೊಡುವಿರಿ? ಹೆಚ್ಚಿನ ಮಟ್ಟದ ಆಧ್ಯಾತ್ಮಿಕ ಪ್ರಜ್ಞೆಯತ್ತ ಕರೆದೊಯ್ಯುವ, ಅಗಾಧವಾದ ತತ್ವಜ್ಞಾನವನ್ನು, ಜೀವನದಲ್ಲಿ ಅನಾಸಕ್ತಿಯನ್ನು ಅನುಸರಿಸುವುದರ ಬದಲಾಗಿ, ನಿಷ್ಠಾರಹಿತರಾಗಿರುವುದನ್ನು, ಅರ್ಥವಿಲ್ಲದ ಸಮಾರಂಭಗಳನ್ನು ನಡೆಸುವುದನ್ನು ಕಲಿಸುವಿರಾ? ನೀವು ಮಾಡಬಯಸುವ ಕಾರ್ಯ ಒಳ್ಳೆಯದೆಂದು ನನಗನಿಸುವುದಿಲ್ಲ."

ಆಗ ಅವನಿಗೆ ಉಸಿರುಗಟ್ಟಿದಂತಾಯಿತು. ಆ ಬಡಪ್ರಾಣಿ ಹೇಳಿದ: "ನಿಮ್ಮ ಶಬ್ದಗಳಿಂದ ನನಗೆ ಮನವರಿಕೆ ಮಾಡಿಕೊಡಲಾರಿರಿ."

"ಓ," ನಾನು ಹೇಳಿದೆ; "ನಿಮಗೆ ಮನವರಿಕೆ ಮಾಡಿಕೊಡಲು ನಾನು ಬಯಸುವುದಿಲ್ಲ. ಇದ್ದ ಪರಿಸ್ಥಿತಿಯನ್ನು ವರ್ಣಿಸಿ ಹೇಳಿದ್ದೇನೆ. ಕಾಡು ಮನುಷ್ಯರು ಹೋಗಿ ಸುಸಂಸ್ಕೃತರಿಗೆ, ನಿಮಗಿಂತ ಬಹುಕಾಲ ಮೊದಲೇ ಅವರು ತಿಳಿದಿದ್ದ ಸತ್ಯವನ್ನು ಕಲಿಸಿಕೊಡಲು ಹೋಗುವುದೇಕೆಂದು ನನಗೆ ತಿಳಿಯದಾಗಿದೆ. ಅಷ್ಟೆ." ಮತ್ತು ಅದೇ ಆ ಸಂಭಾಷಣೆಯ ಕೊನೆಯಾಯಿತು.

**(8/148–50)** **– ಶ್ರೀಮಾತೆ**

*

ಧಾರ್ಮಿಕ ಬೋಧನೆ ಆಧ್ಯಾತ್ಮಿಕ ಬೋಧನೆಯೆಂದು ತಿಳಿದು ಗೊಂದಲಕ್ಕೀಡಾಗಬೇಡಿರಿ.

ಧಾರ್ಮಿಕ ಬೋಧನೆ ಗತಕಾಲಕ್ಕೆ ಸೇರಿದ್ದಾಗಿದೆ ಮತ್ತು ಅದು ಪ್ರಗತಿಯನ್ನು ತಡೆಗಟ್ಟುತ್ತದೆ.

ಆಧ್ಯಾತ್ಮಿಕ ಬೋಧನೆ ಭವಿಷ್ಯತ್ತಿಗೆ ಸಂಬಂಧಿಸಿದುದಾಗಿದೆ – ಅದು ಪ್ರಜ್ಞೆಯನ್ನು ಪ್ರಕಾಶಿಸುತ್ತದೆ ಮತ್ತು ಭವಿಷ್ಯತ್ತಿನ ಸಿದ್ಧಿಗಾಗಿ ತಯಾರು ಮಾಡುತ್ತದೆ.

ಆಧ್ಯಾತ್ಮಿಕ ಬೋಧನೆ ಧರ್ಮಗಳಿಗಿಂತ ಮೇಲಿನ ಸ್ತರದಲ್ಲಿದೆ ಮತ್ತು ಅದು ಜಗದ್ವ್ಯಾಪಕ ದೈವೀಸತ್ಯದತ್ತ ಸಾಗಲು ಹೆಣಗುತ್ತದೆ.

ಅದು ಭಗವಂತನೊಡನೆ ನೇರ ಸಂಬಂಧಗಳಲ್ಲಿ ಪ್ರವೇಶಿಸುವುದನ್ನು ನಮಗೆ ಕಲಿಸಿಕೊಡುತ್ತದೆ.

**(12/130, 15/30)** **– ಶ್ರೀಮಾತೆ**

*



## ಧಾರ್ಮಿಕ ಸ್ಮಾರಕಗಳಲ್ಲಿರುವ ವಾತಾವರಣ

ಎಲ್ಲ ಧಾರ್ಮಿಕ ಸ್ಮಾರಕಗಳಲ್ಲಿ, ಅದರಲ್ಲೂ ಅತಿ ಶ್ರೇಷ್ಠ ಧರ್ಮಕ್ಕೆ ಸೇರಿದ ಸ್ಮಾರಕಗಳಲ್ಲಿ, ಅವು ಫ್ರಾನ್ಸಿನಲ್ಲಿ, ಬೇರೆ ದೇಶಗಳಲ್ಲಿ ಇಲ್ಲವೆ ಜಪಾನಿನಲ್ಲಿ ಇರಬಹುದು – ಅಲ್ಲಿ ಒಂದೇ ಬಗೆಯ ದೇವಾಲಯಗಳಾಗಲಿ, ಚರ್ಚುಗಳಾಗಲಿ ಇಲ್ಲವೆ ದೇವರುಗಳಾಗಲಿ ಇರಲಿಲ್ಲ, ಹಾಗಿದ್ದರೂ ಎಲ್ಲೆಡೆಗಳಲ್ಲಿ ಅಲ್ಪ, ಸ್ವಲ್ಪ ವ್ಯತ್ಯಾಸದೊಂದಿಗೆ ನನ್ನ ಅನುಭವ ಒಂದೇ ಆಗಿತ್ತು – ಚರ್ಚುಗಳಲ್ಲಿ ಕೇಂದ್ರೀಕೃತವಾದ ಶಕ್ತಿ ಯಾವುದೇ ಆಗಿದ್ದರೂ ಅದು ನಿಷ್ಠಾವಂತರ ಮೇಲೆ, ಭಕ್ತರ ನಿಷ್ಠೆಯ ಮೇಲೆ ಅವಲಂಬಿತವಾಗಿತ್ತು. ಆದಾಗ್ಯೂ ನಿಜವಾಗಿ ಅಲ್ಲಿದ್ದ ಶಕ್ತಿ ಮತ್ತು ಜನರ ಅನುಭವಕ್ಕೆ ಬರುತ್ತಿದ್ದ ಶಕ್ತಿ ಇವುಗಳ ನಡುವೆ ಅಂತರವಿತ್ತು. ಉದಾಹರಣೆಗೆ, ಫ್ರಾನ್ಸಿನ ಆರಾಧನಾ ಮಂದಿರವೊಂದರಲ್ಲಿ – ಆ ಮಂದಿರವು ಕಲಾತ್ಮಕ ದೃಷ್ಟಿಕೋನದಿಂದ ಕಲ್ಪಿಸಿಕೊಳ್ಳಬಹುದಾದ ಅತ್ಯಂತ ಭವ್ಯವಾದ ಕಟ್ಟಡವಾಗಿತ್ತು. ಅಂತಹ ಪವಿತ್ರ ಸ್ಥಾನದಲ್ಲಿ ನಾನು ಬಹು ದೊಡ್ಡದಾದ ಕಪ್ಪುವರ್ಣದ ಜೀವಿಯೊಂದನ್ನು ನೋಡಿದೆ, ಅದು ಪ್ರಾಣಿಲೋಕದ ಜೇಡ ಹುಳವಾಗಿತ್ತು, ಅದು ತನ್ನ ಬಲೆಯನ್ನು ಆ ಜಾಗದಲ್ಲೆಲ್ಲ ಹರಡಿತ್ತು ಮತ್ತು ಆ ಬಲೆಯಲ್ಲಿ ಜನರ ಭಕ್ತಿಯಿಂದ, ಅವರ ಪ್ರಾರ್ಥನೆಗಳಿಂದ, ಉದ್ಭವಿಸುವ ಶಕ್ತಿಗಳನ್ನೆಲ್ಲ ಹೀರಿಕೊಳ್ಳುತ್ತಿತ್ತು. ಅದು ಸಂತೋಷ ನೀಡುವ ದೃಶ್ಯವಾಗಿರಲಿಲ್ಲ. ಅಲ್ಲಿದ್ದ ಹಾಗೂ ಅಲ್ಲಿ ಪ್ರಾರ್ಥಿಸುತ್ತಿದ್ದ ಜನರೆಲ್ಲ ದೈವೀಸ್ಪರ್ಶವನ್ನು, ತಮ್ಮ ಪ್ರಾರ್ಥನೆಗಳಿಗೆ ಉತ್ತರವಾಗಿ ಬೇಡಿದ ವರಗಳನ್ನು ಪಡೆಯುತ್ತಿದ್ದರು. ಆದಾಗ್ಯೂ ಅಲ್ಲಿ ಇದ್ದುದು ಈ ಕಪ್ಪುವರ್ಣದ ಜೀವಿಯಾಗಿತ್ತು. ಆದರೆ ಆ ಜನರಲ್ಲಿ ಆ ದುಷ್ಟಶಕ್ತಿಯನ್ನು ತಮ್ಮಲ್ಲಿ ಒಳ್ಳೆಯದನ್ನಾಗಿ ಬದಲಾಯಿಸಲು ಸಮರ್ಥವಾದಂಥ ನಂಬಿಕೆ ಇತ್ತು. ಅವರಲ್ಲಿ ಆ ನಂಬಿಕೆಯಿತ್ತು. ಬಹಳಷ್ಟು ಸಲ ಸುಮಾರು ಎಲ್ಲ ಸ್ಥಳಗಳಲ್ಲಿ ಅದಿರುವುದು ಹಾಗೆಯೆ, ಅಲ್ಲಿರುವುದು ಪ್ರಾಣಿಕ ಶಕ್ತಿ, ಏಕೆಂದರೆ ಈ ಪ್ರಾಣಿಕ ಜೀವಿಗಳು ಮಾನವರ ಭಾವನೆಗಳ ಕಂಪನಗಳನ್ನು ತಮ್ಮ ಆಹಾರವನ್ನಾಗಿ ಮಾಡಿಕೊಳ್ಳುತ್ತವೆ ಮತ್ತು ಅತಿ ಸ್ವಲ್ಪೇ ಜನ, ಗಣನೆಗೆ ಭಾರದ ಸಂಖ್ಯೆಯಷ್ಟು ಜನ, ಚರ್ಚಿಗೆ ಅಥವಾ ದೇವಾಲಯಕ್ಕೆ ನಿಜವಾದ ಧಾರ್ಮಿಕ ಭಾವನೆಯೊಂದಿಗೆ ಹೋಗುತ್ತಾರೆ, ಅವರು ಪ್ರಾರ್ಥನೆಗಾಗಿ, ದೇವರಿಂದ ಏನನ್ನಾದರೂ ಬೇಡುವುದಕ್ಕಾಗಿ ಹೋಗುವುದಿಲ್ಲ. ಆದರೆ ತಮ್ಮನ್ನು ಅರ್ಪಿಸುವುದಕ್ಕಾಗಿ, ಧನ್ಯವಾದಗಳನ್ನು ಹೇಳುವುದಕ್ಕಾಗಿ ಹಾಗೂ ಅಭೀಪ್ಸೆಪಡುವುದಕ್ಕಾಗಿ ಹೋಗುತ್ತಾರೆ. ಹತ್ತು ಲಕ್ಷ ಜನರಲ್ಲಿ ಆ ರೀತಿ ಮಾಡುವವನು ಒಬ್ಬನಿರಬಹುದು. ಹೀಗಾಗಿ ಅಲ್ಲಿಯ ವಾತಾವರಣವನ್ನು

ಬದಲಿಸುವ ಸಾಮರ್ಥ್ಯ ಅಲ್ಲಿ ಹೋಗುವ ಆ ಬಗೆಯ ಜನರಲ್ಲಿರುವುದಿಲ್ಲ. ಅವರು ಅಲ್ಲಿ ಇದ್ದಾಗ ಬಹುಶಃ ತಮಗಾಗಿ ಒಂದು ಮಾರ್ಗವನ್ನು ಹುಡುಕಿಕೊಂಡು ದೈವಿಕವಾದುದರ ಸ್ಪರ್ಶ ಪಡೆಯುತ್ತಾರೆ. ಆದರೆ ಅಲ್ಲಿ ಹೋಗುವ ಹೆಚ್ಚಿನ ಸಂಖ್ಯೆಯ ಜನರು ಮೂಢನಂಬಿಕೆಯುಳ್ಳವರು, ಅಹಂಕಾರಿಗಳು, ಸ್ವಾರ್ಥಿಗಳು ಆಗಿರುವುದರಿಂದ ಅವರದೇ ವಾತಾವರಣವನ್ನು ಸೃಷ್ಟಿಸುತ್ತಾರೆ. ನೀವು ಚರ್ಚು ಅಥವಾ ದೇವಾಲಯಕ್ಕೆ ಹೋದಾಗ ಉಸಿರಾಡಿಸುವುದು ಅಂತಹ ವಾತಾವರಣದಲ್ಲಿಯೇ. ನೀವು ಒಳ್ಳೆಯ ಭಾವನೆಯಿಂದ ಅಲ್ಲಿಗೆ ಹೋದಾಗ 'ಧ್ಯಾನಕ್ಕಾಗಿ ಈ ಸ್ಥಳ ಎಷ್ಟೊಂದು ಪ್ರಶಾಂತವಾಗಿದೆ' ಎಂದುಕೊಳ್ಳುತ್ತೀರಿ.

ಈ ಬಗ್ಗೆ ನನಗೆ ವಿಷಾದವೆನಿಸುತ್ತದೆ, ಆದರೆ ಅದಿರುವುದು ಹಾಗೆ, ನಾನು ಉದ್ದೇಶಪೂರ್ವಕವಾಗಿ ಈ ಪ್ರಯೋಗವನ್ನು ಸ್ವಲ್ಪ ಮಟ್ಟಿಗೆ ಎಲ್ಲೆಡೆಯಲ್ಲಿ ಮಾಡಿದ್ದೇನೆ. ಧ್ಯಾನಕ್ಕಾಗಿ ಬಹಳ ಶಾಂತವಾದ ಚಿಕ್ಕ ಸ್ಥಾನವನ್ನು ನಾನು ಕಂಡಿದ್ದು ಬಹುಶಃ ಚಿಕ್ಕ ಹಳ್ಳಿಗಳಲ್ಲಿ, ಅಲ್ಲಿಯ ವಾತಾವರಣ ನಿಶ್ಚಲನೀರವತೆಯದಾಗಿದ್ದು ಸ್ವಲ್ಪ ಪ್ರಮಾಣದಲ್ಲಿ ಅಭೀಪ್ಸೆಯೂ ಕಂಡುಬರುತ್ತಿತ್ತು. ಆದರೆ ಇಂತಹ ಸ್ಥಾನ ಸಿಗುವುದು ಅಪರೂಪ. ಬಹಳ ಸುಂದರ ಹಾಗೂ ಭವ್ಯ ಚರ್ಚುಗಳನ್ನು ಇಟಲಿ ದೇಶದಲ್ಲಿ ನಾನು ನೋಡಿದ್ದೇನೆ, ಅಲ್ಲಿ ಅಂತಹ ಭಯಾನಕ ಪ್ರಾಣಿಕ ಜೀವಿಗಳು ತುಂಬಿಕೊಂಡಿದ್ದವು. ವೆನಿಸ್ ಪಟ್ಟಣದ ಬೇಸಿಲಿಕಾ (ನ್ಯಾಯಾಸ್ಥಾನ ಹಾಗೂ ರಂಗ ಮಂದಿರ ಎಂದೂ ಉಪಯೋಗಿಸಲ್ಪಡುವ ಭವ್ಯ ಮಂದಿರ) ದಲ್ಲಿ ಒಂದು ಸಲ ಬಣ್ಣಗಳಲ್ಲಿ ಚಿತ್ರ ಬಿಡಿಸಲು ತೊಡಗಿಕೊಂಡಿದ್ದೆ. ಅಲ್ಲಿ ಪಾದ್ರಿಯೊಬ್ಬನು ಓರ್ವ ಬಡ ಹೆಂಗಸಿನಿಂದ ತಪ್ಪೊಪ್ಪಿಗೆಯನ್ನು ಕೇಳಿಸಿಕೊಳ್ಳುತ್ತಿದ್ದ. ಅದು ನಿಜವಾಗಿಯೂ ಭಯ ಹುಟ್ಟಿಸುವ ದೃಶ್ಯವಾಗಿತ್ತು. ಆ ಪಾದ್ರಿ ಹೇಗಿದ್ದ, ಅವನ ಚಾರಿತ್ರ್ಯವೆಂತಹದಿತ್ತು ಎಂಬುದು ನನಗೆ ಗೊತ್ತಾಗಲಿಲ್ಲ. ಅವನು ಕಣ್ಣಿಗೆ ಬೀಳಲಿಲ್ಲ. ತಪ್ಪೊಪ್ಪಿಗೆಯ ಪದ್ಧತಿ ಪ್ರಕಾರ ಪಾದ್ರಿ ಪೆಟ್ಟಿಗೆಯ ಮರೆಯಲ್ಲಿ ಕುಳಿತು ಜಾಳಿಗೆಯುಳ್ಳ ಪರದೆಯ ಮೂಲಕ ತಪ್ಪೊಪ್ಪಿಕೊಳ್ಳುವವರ ಮಾತು ಕೇಳುತ್ತಾನೆ. ಅವನಿದ್ದ ಸ್ಥಳದ ಮೇಲೆ ಕಪ್ಪು ವರ್ಣದ, ಶಕ್ತಿ ಹೀರಿಕೊಳ್ಳುವ ಪ್ರಾಣಿಕ ಜೀವಿಯೊಂದು ಕಾರ್ಯ ಮಾಡುತ್ತಿರುವುದು ಕಂಡುಬಂದಿತು. ಮತ್ತು ಆ ಬಡ ಹೆಂಗಸು ಬಹಳ ಹೆದರಿಕೊಂಡಿದ್ದಳು. ಆ ದೃಶ್ಯ ನೋಡಲು ಬಹಳ ಕಷ್ಟದಾಯಕವಾಗಿತ್ತು. ಈ ಎಲ್ಲ ಜನರು ಅದು ಪವಿತ್ರ ಕಾರ್ಯವೆಂದು ತಿಳಿದಿದ್ದಾರೆ. ಆದರೆ ಅದು ವಿರೋಧೀ ಶಕ್ತಿಗಳ ಬಲೆಯಾಗಿದ್ದು ಇಂತಹದೆಲ್ಲವನ್ನು, ಆಹಾರವನ್ನಾಗಿ ಮಾಡಿಕೊಳ್ಳುತ್ತವೆ.

**(6/194–95)** **– ಶ್ರೀಮಾತೆ**

*



## ಧರ್ಮಗಳು ಸೃಷ್ಟಿಸಿದ ಸ್ವರ್ಗ ಹಾಗೂ ನರಕ

**ಪ್ರಶ್ನೆ :** *(ಮಗುವೊಂದು ಕೇಳಿದ್ದು) ಮರಣದ ನಂತರ ಜನರು ಪ್ರಾಣಿಕ ಲೋಕದಲ್ಲಿ ಪ್ರವೇಶಿಸುತ್ತಾರೆ, ಆದರೆ ಒಳ್ಳೆಯ ಕಾರ್ಯಗಳನ್ನು ಮಾಡಿದವರು ಸ್ವರ್ಗಕ್ಕೆ ಹೋಗುತ್ತಾರೆ. ಎಂಬುದು ನಿಜವೆ ?*

**ಶ್ರೀಮಾತೆ :** ಎಲ್ಲಿದೆ ನಿನ್ನ ಸ್ವರ್ಗ? ನಿನಗಾರು ಇದನ್ನು ಕಲಿಸಿಕೊಟ್ಟರು? ಸ್ವರ್ಗ, ನರಕ, ಶುದ್ಧಿಪಡೆಯುವ ಸ್ಥಾನ ಇವುಗಳನ್ನು ಕುರಿತು ಅವರು ನಿನಗೆ ಹೇಳಿದ್ದಾರೆ. ಇಲ್ಲ? ಅದೆಲ್ಲವನ್ನೂ ಕುರಿತಾಗಿಲ್ಲವೆ? ಸ್ವರ್ಗದ ವಿಚಾರವನ್ನು ನೀನು ಎಲ್ಲಿಂದ ದೊರಕಿಸಿರುವಿ, ಯಾವ ಪುಸ್ತಕದಿಂದ?

ಸಾಮಾನ್ಯವಾಗಿ ಧರ್ಮ ಗುರುಗಳು ಆಸ್ತಿಕರನ್ನು ಸತ್ಕರ್ಮಗಳನ್ನು ಕೈಕೊಳ್ಳುವತ್ತ ಪ್ರೋತ್ಸಾಹಿಸಲು ಹಾಗೆ ಹೇಳುತ್ತಾರೆ. ಜೀವನವು ಕೆಟ್ಟ ಜನರಿಗಿಂತ ಒಳ್ಳೆಯವರಿಗೆ ಹೆಚ್ಚು ಸುಲಭವಾಗಿಲ್ಲವೆಂಬುದು ಎಲ್ಲರಿಗೂ ಗೊತ್ತಿರುವ ವಸ್ತುಸ್ಥಿತಿ, ತದ್ವಿರುದ್ಧವಾಗಿ ಜೀವನದಲ್ಲಿ ಕೆಟ್ಟ ಜನರೇ ಹೆಚ್ಚು ಯಶಸ್ವಿಗಳಾಗುತ್ತಾರೆ. ಆಧ್ಯಾತ್ಮಿಕ ಜ್ಞಾನದ ಪರಿಚಯವಿಲ್ಲದವರು ಹೇಳುತ್ತಾರೆ: "ಒಳ್ಳೆಯವನಾಗಲಿಕ್ಕೆ ನಾನೇಕೆ ಪ್ರಯತ್ನಿಸಬೇಕು! ಕೆಟ್ಟವನಾಗಿ ಒಳ್ಳೆಯ ಜೀವನ ನಡೆಸುವುದು ಲೇಸು" ಎಂದು. ಒಳ್ಳೆಯ ಕೆಲಸಗಳಲ್ಲಿ ನಾನಾ ವಿಧಗಳಿವೆ ಮತ್ತು ಕೆಲವೊಂದು ಸಂದರ್ಭಗಳಲ್ಲಿ ಒಳ್ಳೆಯದನ್ನು ಮಾಡಲು ತೊಂದರೆ ತೆಗೆದುಕೊಳ್ಳುವುದು ಸಾರ್ಥಕ ಶ್ರಮವೆನಿಸುತ್ತದೆ ಎಂದು ಅವರಿಗೆ ತಿಳಿಸಿಕೊಡಲು ಕಠಿಣವಾದದ್ದು. ಇದನ್ನು ಮಂದಬುದ್ಧಿಯ ಜನರಿಗೆ ತಿಳಿಸಿ ಕೊಡುವುದಕ್ಕಾಗಿ ಹೀಗೆ ಹೇಳಲಾಗಿದೆ: "ಅದು ಬಹಳ ಸರಳವಾದದ್ದು, ನೀವು ಸಾಕಷ್ಟು ವಿಧೇಯರಾಗಿದ್ದರೆ, ಒಳ್ಳೆಯವರಾಗಿದ್ದರೆ, ನಿಸ್ವಾರ್ಥಿಗಳಾಗಿದ್ದರೆ, ಸತ್ಕರ್ಮಗಳನ್ನು ಮಾಡುತ್ತಿದ್ದರೆ ಮತ್ತು ನಾವು ನಿಮಗೆ ತಿಳಿಸಿಕೊಡುವ ಧರ್ಮ ತತ್ವಗಳಲ್ಲಿ ನಂಬಿಕೆಯಿರಿಸಿದರೆ, ನಿಮ್ಮ ಮರಣಾನಂತರ ದೇವರು ನಿಮ್ಮನ್ನು ಸ್ವರ್ಗಕ್ಕೆ ಕಳಿಸುವನು. ನಿಮ್ಮಲ್ಲಿ ಕೆಲವೊಮ್ಮೆ ಸದಿಚ್ಛೆ, ಕೆಲವು ಸಲ ದುರ್ಬುದ್ಧಿ ಇದ್ದರೆ, ನೀವು ಒಮ್ಮೆ ಸತ್ಕರ್ಮ ಇನ್ನೊಮ್ಮೆ ದುಷ್ಕರ್ಮಗಳಲ್ಲಿ ತೊಡಗಿಕೊಂಡಿದ್ದರೆ, ಮತ್ತೊಬ್ಬರಿಗಾಗಿ ಕಾಳಜಿ ಮಾಡದೆ ಸ್ವಂತದ ಬಗೆಗೆಯೇ ಯೋಚಿಸುತ್ತಿದ್ದರೆ ಮರಣಾನಂತರ ನೀವು ಇನ್ನೊಂದು ಬಗೆಯ ಅನುಭವ ಗಳಿಸಲು ನಿಮ್ಮನ್ನು ಶುದ್ಧೀಲೋಕ (ಪ್ರಾಯಶ್ಚಿತ್ತ ಲೋಕ) ಕ್ಕೆ ಕಳಿಸಲಾಗುತ್ತದೆ. ನೀವು ಪೂರ್ತಿಯಾಗಿ ಕೆಟ್ಟವರಾಗಿದ್ದರೆ, ಸದಾ ಬೇರೆಯವರಿಗೆ ಎಲ್ಲ ಬಗೆಯ ಕೆಡುಕನ್ನುಂಟು ಮಾಡುತ್ತಿದ್ದರೆ, ಯಾರೊಬ್ಬರ ಒಳ್ಳೆಯದರ ಬಗ್ಗೆ ಚಿಂತಿಸದೇ ಇದ್ದರೆ ಮತ್ತು ವಿಶೇಷವಾಗಿ ನಾವು ಉಪದೇಶಿಸುವ ಧರ್ಮ ಸಿದ್ಧಾಂತದಲ್ಲಿ

ನಂಬಿಕೆಯನ್ನು ಇರಿಸದಿದ್ದರೆ ಮರಣಾನಂತರ ನೀವು ನೇರವಾಗಿ ನರಕಕ್ಕೆ ಹೋಗುತ್ತೀರಿ, ಅಲ್ಲಿಯೇ ಶಾಶ್ವತವಾಗಿ ಉಳಿಯುತ್ತೀರಿ."

ನಾನು ಕೇಳಿದ ಹಲವಾರು ಸಂಗತಿಗಳಲ್ಲಿ ಇದು ಅತಿ ಆಕರ್ಷಕವಾದ ಶೋಧ ಎಂದು ನನಗನಿಸುತ್ತದೆ. ಅವರು ಶಾಶ್ವತ ನರಕದ ಶೋಧ ಮಾಡಿದ್ದಾರೆ, ಅಂದರೆ ಒಮ್ಮೆ ಆ ನರಕದಲ್ಲಿ ಪ್ರವೇಶಿಸಿದರೆ ಅಲ್ಲಿಯೇ ಶಾಶ್ವತವಾಗಿ ಉಳಿಯ ಬೇಕಾಗುವುದು. ಅದರರ್ಥ ನಿಮಗೆ ತಿಳಿಯಿತೆ? ಅಲ್ಲಿ ನೀವು ಚಿತ್ರಹಿಂಸೆಗೆ, ದಹನ ಕ್ರಿಯೆಗೆ ಒಳಗಾಗುವಿರಿ. (ಉಷ್ಣ ಪ್ರದೇಶದ ಜನರಾದರೆ ನಿಮ್ಮನ್ನು ಚಿತೆಗೇರಿಸುವರು, ಶೀತ ಪ್ರದೇಶದವರಾದರೆ ಕೊರೆಯುವ ಚಳಿಯಲ್ಲಿ ಹೆಪ್ಪು ಗಟ್ಟಿಸುವರು.) ಮತ್ತು ಆ ಶಿಕ್ಷೆ ಶಾಶ್ವತವಾಗಿರುವಂತೆ ಮಾಡಲಾಗುತ್ತದೆ. ಈ ಆಕರ್ಷಕ ವಿಷಯಗಳನ್ನು ನಿನಗಾರು ಕಲಿಸಿದರೆಂದು ನನಗೆ ತಿಳಿಯದು. ಈ ಅನ್ವೇಷಣೆಗಳ ಉದ್ದೇಶ ಜನರನ್ನು ವಿಧೇಯರನ್ನಾಗಿರಿಸುವುದು ಮತ್ತು ನಿಯಂತ್ರಣದಲ್ಲಿಟ್ಟುಕೊಳ್ಳುವುದು ಆಗಿದೆ.

ಇದಕ್ಕಿಂತ ಭಿನ್ನವಾದ ಬೋಧನೆಗಳಿವೆ. ಕೆಲವು ಧರ್ಮಗಳ ಬೋಧನೆ ಈ ರೀತಿಯದಾಗಿಲ್ಲ. ಆದರೂ ಕಾವ್ಯಮಯವಾಗಿ, ಚಿತ್ರೋಪಮವಾಗಿ ವರ್ಣನಾತ್ಮಕ ಶೈಲಿಯಲ್ಲಿ ಸ್ವರ್ಗ ಕುರಿತು ಹೇಳಲು ಸಾಧ್ಯವಿದೆ, ಏಕೆಂದರೆ ಸ್ವರ್ಗದ ಅರ್ಥ ಅದು ಆಶ್ಚರ್ಯಕರವಾದ, ಪರಮ ಸಂತೋಷ ಹಾಗೂ ಸೌಲಭ್ಯಗಳು ಇರುವ ಸ್ಥಳವಾಗಿದೆ. ಹಾಗಿದ್ದರೂ ಅದು ನೀವು ಯಾವ ಧರ್ಮಕ್ಕೆ ಸೇರಿದವರು ಎನ್ನುವುದರ ಮೇಲೆ ಅವಲಂಬಿಸಿರುತ್ತದೆ. ಏಕೆಂದರೆ ಕೆಲವು ಸ್ವರ್ಗಗಳಿವೆ, ಅಲ್ಲಿ ನೀವು ಭಗವಂತನ ಸ್ತೋತ್ರ ಮಾಡುತ್ತ ಕಾಲ ಕಳೆಯುವಿರಿ, ಬೇರೇನನ್ನೂ ಮಾಡುವುದಿಲ್ಲ. ಆದರೆ ಅದು ಕೊನೆಗೆ ಬಹಳ ಆಯಾಸದ ಕಾರ್ಯವಾಗಿ ಪರಿಣಮಿಸಿಬಹುದು. ಹಾಗಿದ್ದರೂ ಅಲ್ಲಿ ನೀವು ಸಂಗೀತ ವಾದ್ಯಗಳನ್ನು ನುಡಿಸುತ್ತ ದೇವರ ಸ್ತುತಿಪರವಾದ ಹಾಡುಗಳನ್ನು ಹೇಳುತ್ತ ಕಾಲ ಕಳೆಯುವಿರಿ. ಇದಕ್ಕೆ ತದ್ವಿರುದ್ಧವಾದ ಇನ್ನೂ ಬೇರೆ ಸ್ವರ್ಗಗಳಿವೆ. ಅಲ್ಲಿ ಸಾಧ್ಯವಾದ ಎಲ್ಲ ಬಗೆಯ ಸಂತೋಷ ಪಡೆಯುತ್ತೀರಿ, ನಿಮ್ಮ ಜೀವಿತ ಕಾಲದಲ್ಲಿ ಬಯಸಿದ ಎಲ್ಲ ಸುಖಗಳೂ ಅಲ್ಲಿರುತ್ತವೆ ಮತ್ತೆ ಕೆಲವು ಸ್ವರ್ಗಗಳಲ್ಲಿ ನೀವು ಸತತವಾದ ಆನಂದದಿಂದ ಕೂಡಿದ ಧ್ಯಾನದಲ್ಲಿರುತ್ತೀರಿ. ಆದರೆ ಧ್ಯಾನದಲ್ಲಿ ಮನಸ್ಸಿಲ್ಲದವರಿಗೆ ಇದು ಆಯಾಸ ತರಿಸುವಂತಹದು ಎನಿಸಬಹುದು. ಹಾಗಿದ್ದರೂ ಇವೆಲ್ಲ ಸ್ವರ್ಗಗಳ ಅನ್ವೇಷಣೆಯ ಉದ್ದೇಶ ಜನರು ನಿಜವಾಗಿಯೂ ಬುದ್ಧಿವಂತರಾಗಬೇಕು ಮತ್ತು ಅವರಿಗೆ ಕೊಟ್ಟ ಧರ್ಮ ತತ್ವಗಳನ್ನು ಪಾಲಿಸಬೇಕು ಎಂಬುದಾಗಿದೆ.



ಮನುಷ್ಯನ ಕಲ್ಪನಾಶಕ್ತಿ ಎಷ್ಟೊಂದು ಸೃಜನಾತ್ಮಕವಾಗಿದೆ ಹಾಗೂ ರಚನಾ ಸಾಮರ್ಥ್ಯ ಹೊಂದಿದೆಯೆಂದರೆ ಜಗತ್ತಿನಲ್ಲಿ ನಿಜವಾಗಿಯೂ ಸ್ವರ್ಗ ಸದೃಶವಾದ ಸ್ಥಳಗಳಿವೆ. ಅದೇ ರೀತಿ ನರಕ ಸದೃಶ ಸ್ಥಳಗಳು, ಶುದ್ಧೀಲೋಕಗಳು ಇವೆ. ಮನುಷ್ಯ ತನ್ನ ಕಲ್ಪನಾಶಕ್ತಿಯಿಂದ ತನ್ನ ಕಲ್ಪನೆಗನುಸಾರವಾಗಿ ಶೂನ್ಯದಿಂದ ಸೃಷ್ಟಿ ಮಾಡುತ್ತಾನೆ. ನಿಮ್ಮ ಪ್ರಜ್ಞೆ ಪ್ರಕಾಶಮಯವಾಗಿದ್ದರೆ, ನಿಮ್ಮನ್ನು ಈ ಸ್ಥಳಗಳಿಂದ ಹೊರತೆಗೆಯಬಹುದು, ಇಲ್ಲವಾದರೆ ನೀವಲ್ಲಿ ಬಂದಿಯಾಗಿರುತ್ತೀರಿ, ನೀವು ಜೀವಿತವಿದ್ದಾಗಿನ ನಂಬಿಕೆಯ ಪ್ರಕಾರ ಆ ರೀತಿ ಬಂದಿಯಾಗಿರುತ್ತೀರಿ. ಅದು ಒಂದು ಜೀವಿತ ಕಾಲ ಎಂದು ನೀವು ಹೇಳಬಹುದು, ಆದರೆ ಅದು ಒಟ್ಟಿನಲ್ಲಿ, ಭ್ರಮೆಯಿಂದ ಕೂಡಿದ ಮತ್ತು ಬಹಳ ಸೀಮಿತ ಅಸ್ತಿತ್ವವಾಗಿರುತ್ತದೆ. ಆ ರೀತಿ ಯೋಚನೆ ಮಾಡುವವರಿಗಷ್ಟೇ ಅದು ನಿಜವಾಗಿರುತ್ತದೆ. ನೀವು ಬೇರೆ ರೀತಿ ಯೋಚಿಸಲು ಪ್ರಾರಂಭಿಸಿದಾಗ ನಿಮ್ಮ ಮಟ್ಟಿಗೆ ಅದು ಅಸ್ತಿತ್ವದಲ್ಲಿ ಉಳಿಯುವುದೇ ಇಲ್ಲ. ನೀವು ಅದರಿಂದ ಹೊರಬರಬಹುದು. ಅಂತಹ ಸ್ಥಳಗಳಲ್ಲಿದ್ದ ಮನುಷ್ಯನನ್ನು ನೀವು ಹೊರತೆಗೆಯಬಹುದು ಮತ್ತು ಅವನು ಕೂಡಲೆ ತನ್ನ ರಚನೆಯಲ್ಲೇ ತಾನು ಬಂಧಿತನಾಗಿದ್ದೆ ಎಂಬುದರ ಅರಿವು ಪಡೆಯುವನು.

ಮಾನವನಿಗೆ ಅಸಾಮಾನ್ಯ ಸೃಜನಾತ್ಮಕ ಶಕ್ತಿ ಇದೆ. ತನ್ನ ಪ್ರತಿಬಿಂಬಕ್ಕನುಗುಣವಾಗಿ ಅವನು ದೇವ ಪ್ರಮುಖರ ತಂಡವನ್ನೇ ನಿರ್ಮಿಸಿದ್ದಾನೆ, ತನ್ನಲ್ಲಿದ್ದ ಗುಣದೋಷಗಳೇ ಅವರಲ್ಲಿವೆ, ಅವನು ಕೈಕೊಳ್ಳುವಂತಹದನ್ನೇ ಅವರು ದೊಡ್ಡ ಪ್ರಮಾಣದಲ್ಲಿ ಮಾಡುತ್ತಾರೆ. ಈ ಸತ್ತೆಗಳದು ಸಾಪೇಕ್ಷವಾದ ಅಸ್ತಿತ್ವ, ಆದರೂ ನಿಮ್ಮ ಯೋಚನೆಗಳಂತೆ ಅವರದು ಸ್ವತಂತ್ರ ಅಸ್ತಿತ್ವ. . . . ನಿಮ್ಮಲ್ಲಿ ಒಂದು ಯೋಚನೆಯಿದ್ದಾಗ, ಅದು ನಿಮ್ಮಿಂದ ಸರಿಯಾದ ಮಾನಸಿಕ ರೂಪ ಪಡೆದು ಹೊರಬಿದ್ದಾಗ, ಅದಕ್ಕೆ ಸ್ವತಂತ್ರ ಅಸ್ತಿತ್ವವಿರುತ್ತದೆ ಮತ್ತು ಅದು ತನ್ನ ಮಾರ್ಗದಲ್ಲಿ ಮುಂದುವರಿಯುತ್ತ ತನ್ನನ್ನು ಸೃಷ್ಟಿಸಿದುದರ ಉದ್ದೇಶಕ್ಕಾಗಿ ಕಾರ್ಯಮಾಡುತ್ತದೆ, ಅದು ನಿಮ್ಮಿಂದ ಸ್ವತಂತ್ರವಾಗಿ ಕಾರ್ಯ ಮಾಡುತ್ತದೆ. ಆ ಕಾರಣದಿಂದಾಗಿ ನೀವು ಬಹಳ ಜಾಗರೂಕರಾಗಿರಬೇಕು. . .

ರೂಪಕೊಡುವುದರ ಈ ಸಾಮರ್ಥ್ಯಕ್ಕೆ, ಅದನ್ನು ಮನುಷ್ಯ ಹೇಗೆ ಉಪಯೋಗಿಸಬೇಕೆಂಬುದನ್ನು ತಿಳಿದುಕೊಂಡಿದ್ದರೆ ಶ್ರೇಷ್ಠಮಟ್ಟದ ಪ್ರಯೋಜನ ಇದೆ ಎಂಬುದನ್ನು ಅವನು ಗಮನಿಸಬೇಕು. ನೀವು ಒಳ್ಳೆಯ ರೂಪಗಳನ್ನು ಸೃಷ್ಟಿಸಬಹುದು, ಅದನ್ನು ಸರಿಯಾಗಿ ಕೈಕೊಂಡರೆ, ಅವು ಇನ್ನಿತರ ರೂಪಗಳ

ಹಾಗೆ ಒಳ್ಳೆಯ ರೀತಿಯಲ್ಲಿ ಕಾರ್ಯ ಕೈಕೊಳ್ಳುತ್ತವೆ. ನಿಮ್ಮ ಕೋಣೆಯಲ್ಲಿ ಅಚಂಚಲರಾಗಿ ಕುಳಿತುಕೊಂಡು ಇತರರಿಗೆ ಸಾಕಷ್ಟು ಒಳ್ಳೆಯದನ್ನು ಮಾಡಬಹುದು, ಅದು ಬಹುಶಃ ಬಾಹ್ಯದಲ್ಲಿ ಸಾಕಷ್ಟು ತೊಂದರೆ ತೆಗೆದುಕೊಂಡು ಕೈಕೊಳ್ಳುವುದಕ್ಕಿಂತ ಹೆಚ್ಚು ಒಳ್ಳೆಯದಾಗಿರುತ್ತದೆ. ಶಕ್ತಿಯುತವಾಗಿ, ಬುದ್ಧಿಮತ್ತೆ ಮತ್ತು ದಯಾಪರತೆಗಳಿಂದ ಸರಿಯಾಗಿ ಹೇಗೆ ಯೋಚಿಸಬೇಕು ಎಂಬುದನ್ನು ನೀವು ತಿಳಿದುಕೊಂಡಿದ್ದರೆ ಮತ್ತು ಯಾರಾದರೊಬ್ಬರನ್ನು ನಿಷ್ಕಾಪಟ್ಯದಿಂದ, ಆಳವಾಗಿ, ನಿಮ್ಮೆಲ್ಲ ಹೃದಯದಿಂದ ಪ್ರೀತಿಸುತ್ತಿದ್ದರೆ, ಅದು ಅವನಿಗೆ, ನೀವು ಯೋಚಿಸಬಹುದಾದುದಕ್ಕಿಂತ ಹೆಚ್ಚು ನಿಶ್ಚಿತವಾಗಿ ಬಹಳ ಒಳ್ಳೆಯದನ್ನು ಮಾಡುತ್ತದೆ.

ನಿಮ್ಮ ಪ್ರಜ್ಞೆಯಲ್ಲಿ ಚೈತ್ಯ ಪುರುಷನೊಂದಿಗೆ ಏಕತೆ ಪಡೆದಿದ್ದರೆ ಮರಣಾನಂತರ ನೀವು ಚೈತ್ಯ ಪುರುಷನ ಪ್ರಜ್ಞೆಯನ್ನು ಉಳಿಸಿಕೊಳ್ಳುವಿರಿ ಮತ್ತು ಚೈತ್ಯ ಪುರುಷನು ಚೈತ್ಯ ಲೋಕಕ್ಕೆ ಮರಳಿ ಹೋಗುವನು. ಈ ಚೈತ್ಯ ಲೋಕವು ದಿವ್ಯಾನಂದ, ಸಂತೋಷ, ಶಾಂತಿ, ಸ್ವಾಸ್ಥ್ಯಗಳಿಂದ ಹಾಗೂ ವೃದ್ಧಿಸುವ ಜ್ಞಾನದಿಂದ ಕೂಡಿದೆ. ಆದ್ದರಿಂದ ಅದನ್ನು ನೀವು ಸ್ವರ್ಗ ಎಂದು ಕರೆದರೆ ಅದು ಸರಿಯಾದದ್ದೇ, ಏಕೆಂದರೆ ವಾಸ್ತವವಾಗಿ ನಿಮ್ಮ ಚೈತ್ಯ ಪುರುಷನೊಂದಿಗೆ ತಾದಾತ್ಮ್ಯ ಸಾಧಿಸುವಷ್ಟರ ಮಟ್ಟಿಗೆ ಅವನ ಬಗ್ಗೆ ಪ್ರಜ್ಞೆಯುಳ್ಳವರಾಗಿರುತ್ತೀರಿ, ಅವನೊಂದಿಗೆ ಏಕತೆ ಪಡೆಯುತ್ತೀರಿ. ಅವನು ಅಮರನಾಗಿದ್ದಾನೆ ಹಾಗೂ ಅವನು ಅಮರ ಸ್ಥಳಕ್ಕೆ ಪರಿಪೂರ್ಣ ಸಂತೋಷವನ್ನು ಪಡೆಯಲು ಇಲ್ಲವೆ ವಿಶ್ರಾಂತಿ ಪಡೆಯಲು ಹೋಗುತ್ತಾನೆ. ನೀವು ಆ ಅಮರ ಸ್ಥಳವನ್ನು ಸ್ವರ್ಗವೆಂದೇ ಕರೆಯಬೇಕೆಂದಿದ್ದರೆ ಅದನ್ನು ಹಾಗೆ ಕರೆಯಬಹುದು. ನೀವು ಒಳ್ಳೆಯವರಾಗಿದ್ದರೆ, ನಿಮ್ಮ ಚೈತ್ಯ ಪುರುಷನ ಅರಿವು ಪಡೆದು ಅವನಲ್ಲಿ ಜೀವಿಸುತ್ತಿದ್ದರೆ ಸರಿ, ನಿಮ್ಮ ದೇಹಾವಸಾನದ ನಂತರ ನಿಮ್ಮ ಚೈತ್ಯ ಪುರುಷನೊಂದಿಗೆ ಚೈತ್ಯ ಲೋಕದಲ್ಲಿ ದಿವ್ಯಾನಂದದಲ್ಲಿ ವಿಶ್ರಾಂತಿ ಪಡೆಯಲು ಹೋಗುತ್ತೀರಿ.

ಆದರೆ ನಿಮ್ಮ ಪ್ರಾಣಿಕದಲ್ಲಿ ಅದರ ಎಲ್ಲ ಪ್ರೇರಣೆಗಳೊಂದಿಗೆ ಜೀವಿಸಿದ್ದರೆ ಪ್ರತಿಯೊಂದು ಪ್ರೇರಣೆಯು ತನ್ನ ತೃಪ್ತಿಯನ್ನು ಇಲ್ಲಿ ಅಥವಾ ಅಲ್ಲಿ ಕಂಡುಕೊಳ್ಳಲು ಪ್ರಯತ್ನಿಸುವುದು. ಉದಾಹರಣೆಗೆ ಧನದ ಮೇಲೆ ಆಸೆಯನ್ನಿಟ್ಟುಕೊಂಡು ಬದುಕುತ್ತಿದ್ದ ಜಿಪುಣ ತನ್ನ ಮರಣಾನಂತರ ಆ ಧನದ ಹತ್ತಿರವೇ ಸಿಕ್ಕಿಹಾಕಿಕೊಂಡಿರುತ್ತಾನೆ ಮತ್ತು ತನ್ನ ಧನವನ್ನು ಇನ್ನೊಬ್ಬರು ಅಪಹರಿಸದಂತೆ ಕಾಯುತ್ತಿರುತ್ತಾನೆ. ಜನರಿಗೆ ಅವನು ಕಾಣಿಸಿಕೊಳ್ಳುವುದಿಲ್ಲ. ಆದರೆ ಅವನು ಅಲ್ಲಿ



ಇದ್ದೇ ಇರುತ್ತಾನೆ. ಅವನ ಧನಕ್ಕೇನಾದರೂ ಅಪಾಯ ಒದಗಿದರೆ ಅವನು ಬಹಳ ಅಸಂತುಷ್ಟನಾಗುತ್ತಾನೆ.

ಕಣ್ಣಿಗೆ ಕಾಣದ ಈ ಲೋಕದಲ್ಲಿ ಮನುಷ್ಯನ ಮಾನಸಿಕ ರಚನೆಯ ಪರಿಣಾಮವಾಗಿ ಹುಟ್ಟಿಕೊಂಡ ಸ್ಥಳಗಳಿವೆ. ಅಲ್ಲಿ ಮನುಷ್ಯ ತನಗೆ ಬೇಕಾದುದನ್ನು ಪಡೆಯಬಹುದು. ವಸ್ತುಸ್ಥಿತಿಯೆಂದರೆ ಬಹಳಷ್ಟು ಸಲ ಮನುಷ್ಯ ಅಲ್ಲಿ ಏನು ಕಾಣಬೇಕೆಂದು ಬಯಸುತ್ತಾನೋ ಅದು ಅಲ್ಲಿರುತ್ತದೆ. ಅಲ್ಲಿ ನರಕಗಳಿವೆ, ಸ್ವರ್ಗಗಳಿವೆ, ಶುದ್ಧೀಲೋಕಗಳಿವೆ. ಬೇರೆ ಬೇರೆ ಧರ್ಮಗಳ ಹಾಗೂ ಅವುಗಳ ಕಲ್ಪನೆಗಳಿಗನುಸಾರವಾಗಿ ಅಲ್ಲಿ ಎಲ್ಲ ಬಗೆಯ ವಸ್ತುಗಳಿವೆ. ಈ ವಸ್ತುಗಳಿಗೆ ಕೇವಲ ಸಾಪೇಕ್ಷ ಅಸ್ತಿತ್ವವಿರುತ್ತದೆ, ಆದರೆ ಆ ಸಾಪೇಕ್ಷತೆಯು ಇಲ್ಲಿದ್ದ ಭೌತಿಕ ವಸ್ತುಗಳಿಗಿದ್ದ ಹಾಗೆ ಇರುತ್ತದೆ ಅಂದರೆ ಅಲ್ಲಿ ಮನುಷ್ಯ ತನ್ನನ್ನು ಕಂಡುಕೊಂಡಾಗ ಆ ವಸ್ತುಗಳು ಅವನಿಗೆ ಪೂರ್ತಿ ನಿಜವಾಗಿರುತ್ತವೆ ಹಾಗೂ ಅವುಗಳ ಪರಿಣಾಮಗಳು ಸ್ಪರ್ಶವೇದ್ಯವಾಗಿರುತ್ತವೆ. ಅವುಗಳ ಸತ್ಯದ ಭ್ರಮೆಯಿಂದ ಪಾರಾಗಲು ಮನುಷ್ಯನಿಗೆ ಆಂತರಿಕ ಮುಕ್ತಿ, ಪ್ರಜ್ಞೆಯ ವಿಸ್ತಾರ, ಆಳವಾದ ಮತ್ತು ಉನ್ನತವಾದ ಸತ್ಯದೊಡನೆ ಸಂಪರ್ಕ ಇವುಗಳ ಆವಶ್ಯಕತೆ ಇರುತ್ತದೆ. ಆದರೆ ಅದು ಸುಮಾರಾಗಿ ಇಲ್ಲಿ ನಡೆಯುವ ವಿಷಯದ ಹಾಗೇ ಇದೆ. ಮನುಷ್ಯರು ಭೌತಿಕ ನೈಜತೆ ಮಾತ್ರ ಕೇವಲ ಸತ್ಯವೆಂದು ಮನವರಿಕೆ ಮಾಡಿಕೊಂಡಿರುತ್ತಾರೆ – ಸ್ಪರ್ಶದಿಂದ, ನೋಡುವುದರಿಂದ ತಿಳಿದು ಬರುವ ನೈಜತೆ – ಮತ್ತು ಅವರಿಗೆ ಕಾಣಿಸದಿದ್ದಾಗ, ಸ್ಪರ್ಶಕ್ಕೆ ನಿಲುಕದಿದ್ದಾಗ, ಭಾವಿಸಲು ಆಗದಿದ್ದಾಗ ಎಲ್ಲವೂ ಒಟ್ಟಿನಲ್ಲಿ ಸಮಸ್ಯಾಪೂರ್ಣವಾಗುತ್ತದೆ; ಸರಿ, ಅಲ್ಲಿ ಸಂಭವಿಸುವುದೂ ಕೂಡ ಇಲ್ಲಿಯ ಪ್ರಕೃತಿ ಘಟನೆಗೆ ಸಮಾನವಾದದ್ದೇ ಇರುತ್ತದೆ. ಮರಣ ಕಾಲದಲ್ಲಿ ಒಂದಿಲ್ಲೊಂದು ಕಾರಣದಿಂದಾಗಿ ಜನರು ತಾವು ಸ್ವರ್ಗಕ್ಕೆ ಇಲ್ಲವೆ ನರಕಕ್ಕೆ ಹೋಗುವವರೆಂದು ಮನವರಿಕೆ ಮಾಡಿಕೊಂಡಿದ್ದರೆ ಮರಣಾನಂತರ ಅವರು ತಾವು ಮನವರಿಕೆ ಮಾಡಿಕೊಂಡ ಜಾಗಗಳಲ್ಲಿ ಇರುತ್ತಾರೆ. ಅದು ಅವರಿಗೆ ನಿಜವಾಗಿ ಸ್ವರ್ಗ ಇಲ್ಲವೆ ನರಕವಾಗಿರುತ್ತದೆ. ಅವರನ್ನು ಅದರೊಳಗಿಂದ ಹೊರಗೆ ಬರುವಂತೆ ಮಾಡುವುದು ಮತ್ತು ಅದಕ್ಕಿಂತ ಸತ್ಯವಾದ ನಿಜವಾದ ಜಾಗಕ್ಕೆ ಹೋಗುವಂತೆ ಮಾಡುವುದು ಬಹಳ ಕಷ್ಟಕರವಾದದ್ದು.

**ಪ್ರಶ್ನೆ :** *ಸ್ವರ್ಗ, ನರಕಗಳು ಅಸ್ತಿತ್ವದಲ್ಲಿ ಇರುವವೆ?*

**ಶ್ರೀಮಾತೆ :** ಸ್ವರ್ಗ ಹಾಗೂ ನರಕಗಳು ಏಕಕಾಲಕ್ಕೆ ಸತ್ಯವೂ ಹೌದು, ಮಿಥ್ಯೆಯೂ ಹೌದು, ಅವೆರಡೂ ಅಸ್ತಿತ್ವದಲ್ಲಿವೆ ಮತ್ತು ಅಸ್ತಿತ್ವದಲ್ಲಿಲ್ಲ ಎಂದು ಹೇಳಬಹುದು.

ಮಾನವ ಮನಸ್ಸು ಸೃಜನಾತ್ಮಕವಾದುದು, ಅದು ಮಾನಸಿಕ, ಪ್ರಾಣಿಕ ಹಾಗೂ ಸೂಕ್ಷ್ಮ ಭೌತಿಕ ದ್ರವ್ಯಕ್ಕೂ ಕೂಡ ತಾಳಿಕೊಳ್ಳುವ ರೂಪಗಳನ್ನು ಕೊಡುತ್ತದೆ. ಈ ರೂಪಗಳು ನಿಜವಾಗಿರುವುದಕ್ಕಿಂತ ಹೆಚ್ಚಾಗಿ ತೋರಿಕೆಗಳಾಗಿರುತ್ತವೆ. ಆದರೆ ಯಾರ ಯೋಚನೆಗಳಲ್ಲಿ ಅವು ಇವೆಯೋ ಮತ್ತು ಅವುಗಳನ್ನು ಯಾರು ನಂಬಿಕೊಂಡಿರುವರೋ ಅಂತಹವರಿಗೆ ಅವುಗಳ ಅಸ್ತಿತ್ವ ಮೂರ್ತಸ್ವರೂಪದ್ದಾಗಿದ್ದು ನೈಜತೆಯ ಭ್ರಮೆಯನ್ನುಂಟು ಮಾಡುತ್ತದೆ. ಹೀಗೆ ಸ್ವರ್ಗ, ನರಕಗಳ ಅಸ್ತಿತ್ವವನ್ನು ಪ್ರತಿಪಾದಿಸುವ ಧರ್ಮಗಳನ್ನು ನಂಬುವವರಿಗೆ ಈ ಸ್ಥಳಗಳು ವಾಸ್ತವದಲ್ಲಿ ಅಸ್ತಿತ್ವದಲ್ಲಿರುತ್ತವೆ ಮತ್ತು ಮರಣಾನಂತರ ಅವರು ಚಿಕ್ಕ ಅಥವಾ ದೀರ್ಘ ಕಾಲದ ಅವಧಿಯವರೆಗೆ ಅಲ್ಲಿರಲು ಹೋಗುತ್ತಾರೆ. ಆದಾಗ್ಯೂ ಇವು ಮನಸ್ಸಿನಿಂದ ರಚಿತವಾದ ಅಶಾಶ್ವತ ರಚನೆಗಳು, ಅವುಗಳದೇ ಶಾಶ್ವತ ಸತ್ಯವೆಂಬುದಿಲ್ಲ.

ಕೆಲವು ಜನರು ಮರಣಾನಂತರ ಸಾಗಿ ಹೋಗಿದ್ದ ನರಕಗಳನ್ನು ಹಾಗೂ ಸ್ವರ್ಗಗಳನ್ನು ನಾನು ನೋಡಿದ್ದೇನೆ ಮತ್ತು ಅವರಿಗೆ ಅವುಗಳಲ್ಲಿ ಯಾವ ಸತ್ಯವೂ ಇಲ್ಲ ಎಂದು ಮನವರಿಕೆ ಮಾಡಿಕೊಡುವುದು ಬಹಳ ಕಠಿಣ. ಒಬ್ಬನಿಗೆ ಅವನು ನರಕ ಎಂದು ಕರೆಯುತ್ತಿದ್ದುದು ನರಕವಾಗಿಲ್ಲ ಎಂದು ಮನವರಿಕೆ ಮಾಡುವುದಕ್ಕೆ ಹಾಗೂ ಅವನನ್ನು ಅದರಿಂದ ಹೊರಗೆ ತೆಗೆಯುವುದಕ್ಕೆ ನನಗೆ ಒಂದು ವರ್ಷಕ್ಕಿಂತಲೂ ಹೆಚ್ಚು ಸಮಯ ಬೇಕಾಯಿತು.

**(5/130), (17/106), (8/218–19), (10/64–65) – ಶ್ರೀಮಾತೆ**

*

## ಧರ್ಮಗಳಲ್ಲಿ ಸನ್ಯಾಸ ಹಾಗೂ ನಿರ್ವಾಣಗಳ ಕಲ್ಪನೆ

ದೇಶ ಹಾಗೂ ಧರ್ಮಗಳಿಗನುಸಾರವಾಗಿ ಜಗತ್ತಿನ ಎಲ್ಲೆಡೆಗಳಲ್ಲಿ ಕಂಡುಬರುವ ಈ ವಿಷಯದ ಬಗೆಗಿನ ಮನೋವೃತ್ತಿಯು ಭಿನ್ನ ಭಿನ್ನವಾಗಿ ಅಭಿವ್ಯಕ್ತವಾಗಿದೆ ಮತ್ತು ಈ ಮನೋವೃತ್ತಿಯ ಅಜ್ಞಾನದ ವಿರುದ್ಧ ಪ್ರತಿಕ್ರಿಯಿಸಲೆಂದೇ ನಾನಿದನ್ನು ಬರೆದಿದ್ದೇನೆ[1]. ಸ್ವಾಭಾವಿಕವಾಗಿ ಭಾರತದಲ್ಲೂ ಎಲ್ಲ

1. "ದುಷ್ಟಶಕ್ತಿಗಿಂತ ಶ್ರೇಷ್ಠವಾದ ಸಾಮರ್ಥ್ಯ ಮಾತ್ರ ವಿಜಯವನ್ನು ದೊರಕಿಸಿ–ಕೊಡಬಲ್ಲದು. ಶಿಲುಬೆಗೇರಿದ ದೇಹವಲ್ಲ, ಆದರೆ ಮಹಿಮೆಯಿಂದ ಕೂಡಿದ ದೇಹ ಜಗತ್ತಿಗೆ ರಕ್ಷಣೆ ಒದಗಿಸಬಲ್ಲದು." (ಹೊಸ ವರ್ಷದ ಸಂದೇಶ, 1957)



ಭೌತಿಕ ನೈಜತೆಯನ್ನು ಪರಿತ್ಯಾಗ ಮಾಡುವ, ಭ್ರಮೆ ಮತ್ತು ಮಿಥ್ಯೆ ಎಂದು ಪರಿಗಣಿಸಲಾದ ಭೌತಿಕ ಜಗತ್ತಿನ ಬಗ್ಗೆ ತಿರಸ್ಕಾರ ವ್ಯಕ್ತಪಡಿಸುವ ಮನೋವೃತ್ತಿ ಇದೆ. ಈ ಮನೋವೃತ್ತಿಯಿಂದಾಗಿ ಭೌತಿಕ ಕ್ಷೇತ್ರವನ್ನು ವಿರೋಧೀ ಶಕ್ತಿಗಳ ಸಾರ್ವಭೌಮ ಆಳಿಕೆಗೆ ತೆರೆದಿಟ್ಟಂತಾಗಿದೆ ಎಂದು ಶ್ರೀ ಅರವಿಂದರು ಹೇಳಿದ್ದಾರೆ.

ದೂರದ ಅಮೂರ್ತ ವಾಸ್ತವಿಕತೆಯ ಶೋಧಕ್ಕಾಗಿ ನೀವು ಮೂರ್ತ ವಾಸ್ತವಿಕತೆಯಿಂದ ತಪ್ಪಿಸಿಕೊಂಡರೆ, ಮೂರ್ತ ವಾಸ್ತವಿಕತೆಯ ಸಂಪೂರ್ಣ ಕ್ಷೇತ್ರವನ್ನು ವಿರೋಧೀ ಶಕ್ತಿಗಳ ವಿನಿಯೋಗಕ್ಕೆ ಬಿಟ್ಟುಕೊಡುತ್ತೀರಿ – ಈ ವಿರೋಧೀ ಶಕ್ತಿಗಳೇ ಆ ಕ್ಷೇತ್ರವನ್ನು ಈಗ ಆಳುತ್ತಿವೆ – ನಿಮ್ಮ ಪಲಾಯನವು, ಶ್ರೀ ಅರವಿಂದರು ಹೇಳುವ ಹಾಗೆ, ಶೂನ್ಯದ ಸಾರ್ವಭೌಮತ್ವವನ್ನು ಪಡೆಯುವುದಕ್ಕಾಗಿದೆ. ಈ ವಿಚಾರವು ಜಗತ್ತಿನ ಎಲ್ಲೆಡೆಗಳಲ್ಲಿ ಇದೆ, ಆದರೆ ಅದು ಬೇರೆ, ಬೇರೆ ರೀತಿಯಲ್ಲಿ ಅಭಿವ್ಯಕ್ತಿ ಪಡೆದಿದೆ.

ಭೌತಿಕ ಜಗತ್ತಿನಲ್ಲಿ ಪರಿವರ್ತನೆ ತರುವ ಸಾಮರ್ಥ್ಯವಿಲ್ಲದ ಆಧ್ಯಾತ್ಮಿಕ ಶಕ್ತಿಯ ದೌರ್ಬಲ್ಯದಿಂದ ಕೆಡುಕನ್ನು ಇಲ್ಲಿಯವರೆಗೆ ಎದುರಿಸಬೇಕಾದ ಕಾರಣದಿಂದಾಗಿ ಈ ಸದಿಚ್ಛೆಯ ಪ್ರಚಂಡ ಪ್ರಯತ್ನ ಶೋಚನೀಯ ವಿಫಲತೆಯಲ್ಲಿ ಕೊನೆಗೊಂಡಿದೆ ಮತ್ತು ಜಗತ್ತನ್ನು ಅದೇ ಮೊದಲಿನ ಅತೀವ ಕಷ್ಟ, ಭ್ರಷ್ಟಾಚಾರ ಮತ್ತು ಮಿಥ್ಯೆಗಳ ಸ್ಥಿತಿಯಲ್ಲಿ ಇರಲು ಬಿಟ್ಟುಕೊಟ್ಟಿದೆ. ಆಳುತ್ತಿರುವ ಪ್ರತಿಕೂಲ ಶಕ್ತಿಗಳ ಸ್ತರದಲ್ಲಿಯೇ ಅವುಗಳಿಗಿಂತ ಶ್ರೇಷ್ಠತರ ಸಾಮರ್ಥ್ಯ ನಮ್ಮದಾಗಬೇಕು, ಅವುಗಳ ಪ್ರಾಂತದಲ್ಲಿ ಅವುಗಳನ್ನು ಸಂಪೂರ್ಣವಾಗಿ ಜಯಿಸುವ ಸಾಮರ್ಥ್ಯ ಅದಾಗಿರಬೇಕು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಆ ಸಾಮರ್ಥ್ಯವು ಪ್ರಜ್ಞೆಯನ್ನು ಹಾಗೂ ಭೌತಿಕ ಜಗತ್ತನ್ನು ಪರಿವರ್ತಿಸುವ ಸಾಮರ್ಥ್ಯ ಹೊಂದಿರಬೇಕು. ಈ ಶಕ್ತಿಯೇ ಅತಿಮಾನಸ ಶಕ್ತಿ. ಅವಶ್ಯವಾದುದೇನೆಂದರೆ ಅತಿಮಾನಸ ಶಕ್ತಿಯ ಕಾರ್ಯವನ್ನು ಭೌತಿಕ ಸ್ತರದಲ್ಲಿ ಸ್ವೀಕರಿಸಬೇಕು ಮತ್ತು ತಾವು ಪರಿತ್ಯಾಗ ಮಾಡುವ ಎಲ್ಲದರ ಮೇಲೆ ಶತ್ರುವು ಸಂಪೂರ್ಣ ಸಾಮರ್ಥ್ಯದಿಂದಿರಲು ಬಿಟ್ಟುಕೊಟ್ಟು ದೂರದ ನಿರ್ವಾಣದತ್ತ ಓಡಿಹೋಗಬಾರದು.

ತ್ಯಾಗವಾಗಲಿ, ಸನ್ಯಾಸವಾಗಲಿ ಇಲ್ಲವೆ ದೌರ್ಬಲ್ಯವಾಗಲಿ ವಿಜಯವನ್ನು ದೊರಕಿಸಿ ಕೊಡುವುದಿಲ್ಲ. ದೃಢತೆ, ತಾಳ್ಮೆ ಮತ್ತು ಪರಮ ಧೈರ್ಯ ಇವುಗಳಿಂದ ಕೂಡಿದ ದಿವ್ಯಾನಂದ ವಿಜಯ ದೊರಕಿಸಿಕೊಡಬಲ್ಲದು. ಈ ದಿವ್ಯಾನಂದವನ್ನು ಅತಿಮಾನಸ ಶಕ್ತಿ ತರುತ್ತದೆ. ಅದು ಪ್ರತಿಯೊಂದನ್ನು ಬಿಟ್ಟುಕೊಟ್ಟು ಪಲಾಯನ ಮಾಡುವುದಕ್ಕಿಂತ ಅತಿ ಹೆಚ್ಚು ಕಠಿಣವಾದದ್ದು. ಅದು ಅನಂತಪಟ್ಟು ವೀರತನವನ್ನು ಬೇಡುತ್ತದೆ – ಆದರೆ ವಿಜಯ ದೊರಕಿಸುವ ಮಾರ್ಗ ಅದೊಂದೇ.

ಇಡೀ ಸೃಷ್ಟಿ, ಇಡೀ ವಿಶ್ವಂಭರ ಪ್ರಕಟಣೆ, ಅದು ಈಗಿರುವಂತೆಯೇ ಇದ್ದರೆ ಅತಿ ಹೆಚ್ಚೆಂದರೆ ಒಂದು ಕೆಟ್ಟ ಮೋಜಿನ ವಿಷಯವಾಗಿರುವಂತೆ ಕಂಡುಬರುತ್ತದೆ. ಅದರೊಳಗಿಂದ ಹೊರಬರುವುದೊಂದೇ ಉದ್ದೇಶವಾಗಿದ್ದರೆ, ಅದನ್ನು ಪ್ರಾರಂಭಿಸಿದ್ದಾದರೂ ಏಕೆ? ಅದರಿಂದ ಸರಳರೀತಿಯಲ್ಲಿ ಹೊರಗೆ ಬರುವುದನ್ನು ನಿಮಗೆ ಕಲಿಸಿಕೊಡುವುದಷ್ಟೇ ಆಗಿದ್ದರೆ, ಇಷ್ಟೊಂದು ಹೋರಾಟ ನಡೆಸುವುದರ, ನೋವನ್ನು ಅನುಭವಿಸುವುದರ, ಹೊರನೋಟನ್ನು ಇಷ್ಟೊಂದು ದುಃಖದಾಯಕ ಹಾಗೂ ನಾಟಕೀಯವೆನಿಸುವುದನ್ನು ಸೃಷ್ಟಿಸುವುದರ ಉಪಯೋಗವೇನು? – ಅದನ್ನು ಪ್ರಾರಂಭಿಸಿರದಿದ್ದರೆ ಹೆಚ್ಚು ಒಳ್ಳೆಯದಾಗುತ್ತಿತ್ತು.

ಆದರೆ ಮನುಷ್ಯ ವಿಷಯಗಳ ಆಳಕ್ಕೆ ಇಳಿದು ಹೋದಾಗ, ಅಹಂಮನ್ಯತೆಯನ್ನು ತೊಡೆದುಹಾಕುವುದಷ್ಟೇ ಅಲ್ಲ, ಅಹಂಕಾರಿಯಾಗಿರದೆ ಇದ್ದಾಗ, ಏನನ್ನೂ ಕಾದಿರಿಸಿಕೊಳ್ಳದೆ ತನ್ನನ್ನು ಅರ್ಪಿಸಿಕೊಂಡಾಗ, ಅದೆಷ್ಟರ ಮಟ್ಟಿಗೆ ನಿರಾಸಕ್ತನಾಗಿ ಹಾಗೂ ಸಂಪೂರ್ಣವಾಗಿ ಎಂದರೆ ಅವನು ಭಗವಂತನ ಯೋಜನೆಯನ್ನು ಅರಿತುಕೊಳ್ಳಲು ಸಮರ್ಥನಾಗುವಂತಾಗುತ್ತದೆ. ಆಗ ಈ ಸೃಷ್ಟಿ ಒಂದು ಕೆಟ್ಟ ಮೋಜಿಗಾಗಿಲ್ಲ, ಪ್ರಾರಂಭ ಬಿಂದುವಿಗೆ ನಾವು ಮರಳಿ ಹೋಗುವ ಮಾರ್ಗ ಅತ್ಯಂತ ವೇದನೆಯಿಂದ ಕೂಡಿದ್ದಲ್ಲ. ಅಲ್ಲಿಗೆ ಒಂದಿಷ್ಟು ಹೊಡೆತ ತಿಂದು ಹೋಗುವುದಲ್ಲ, ತದ್ವಿರುದ್ಧವಾಗಿ ಇಡೀ ಸೃಷ್ಟಿಗೆ ಸತ್ತೆಯ ಅನಂದವನ್ನು, ಸೌಂದರ್ಯವನ್ನು, ಶ್ರೇಷ್ಠತೆಯನ್ನು, ಘನತೆಯ ಜೀವನದ ಮಹಿಮೆಯನ್ನು ಮತ್ತು ಇವೆಲ್ಲವುಗಳೊಡನೆ ನಿರಂತರ ಬೆಳವಣಿಗೆ ಹಾಗೂ ಆ ಆನಂದ, ಸೌಂದರ್ಯ, ಶ್ರೇಷ್ಠತೆಗಳು ನಿರಂತರವಾಗಿ ಪ್ರಗತಿಪರವಾಗಿರುವುದನ್ನು ಕಲಿಸಿಕೊಡುವುದಿರುತ್ತದೆ. ಆಗ ಎಲ್ಲದಕ್ಕೂ ಒಂದು ಅರ್ಥವಿರುತ್ತದೆ, ಮನುಷ್ಯ, ತಾನು ಹೋರಾಟ ನಡೆಸಿರುವುದರ ಬಗ್ಗೆ, ನೋವನ್ನನುಭವಿಸಿದರ ಬಗ್ಗೆ ವಿಷಾದ ಪಡುವುದಿಲ್ಲ, ದೈವೀ ಗುರಿಯನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ ಅವನಲ್ಲಿ ಉತ್ಸಾಹವಿರುತ್ತದೆ ಮತ್ತು ಅವನು ಗುರಿ ತಲುಪುವ, ಜಯ ಸಾಧಿಸುವ ನಿಶ್ಚಿತತೆಯಿಂದ ಸಿದ್ಧಿಯಲ್ಲಿ ಧುಮುಕುತ್ತಾನೆ.

ಆದರೆ ಅದನ್ನು ಅರಿತುಕೊಳ್ಳುವುದಕ್ಕೆ ಮನುಷ್ಯ ಅಹಂಕಾರಿಯಾಗಿರುವುದನ್ನು, ತನ್ನ ಮೇಲೆಯೇ ತಾನು ತಿರುಗಿಕೊಂಡಿರುವುದನ್ನು ನಿಲ್ಲಿಸಬೇಕು. ಆಗ ಅವನು ನಿಜವಾದ ಗುರಿಯನ್ನು ಅರಿತುಕೊಳ್ಳಬಲ್ಲನು ಮತ್ತು ಇರುವ ಮಾರ್ಗ ಇದೊಂದೇ.

**(9/4–5, 426), (9/8–9)** **– ಶ್ರೀಮಾತೆ**

*



## ನೈತಿಕತೆ ಮತ್ತು ಆಧ್ಯಾತ್ಮಿಕತೆ ಇವುಗಳ ನಡುವಿನ ಭಿನ್ನತೆ

ನೈತಿಕತೆ ಹಾಗೂ ಆಧ್ಯಾತ್ಮಿಕತೆ ಇವುಗಳ ನಡುವೆ ಬಹಳ ದೊಡ್ಡ ವ್ಯತ್ಯಾಸವಿದೆ. ಇವೆರಡರಲ್ಲಿ ಒಂದನ್ನು ಇನ್ನೊಂದೆಂದು ಯಾವಾಗಲೂ ತಪ್ಪು ತಿಳಿವಳಿಕೆ ಮಾಡಿಕೊಳ್ಳಲಾಗುತ್ತಿದೆ. ಆಧ್ಯಾತ್ಮಿಕ ಜೀವನವು ಯೌಗಿಕ ಜೀವನವಾಗಿದ್ದು ಅದರ ಉದ್ದೇಶವು ದೈವೀ ಪ್ರಜ್ಞೆಯಲ್ಲಿ ಬೆಳೆಯುವುದಾಗಿದೆ ಮತ್ತು ಅದರ ಪರಿಣಾಮ ಶುದ್ಧೀಕರಣಗೊಳ್ಳುವುದು, ನಿಮ್ಮಲ್ಲಿದ್ದುದನ್ನು ಪರಿಪೂರ್ಣಗೊಳಿಸುವುದು ಹಾಗೂ ವೈಭವೀಕರಿಸುವುದಾಗಿದೆ. ಅದು ನಿಮ್ಮಲ್ಲಿ ಭಗವಂತನನ್ನು ಪ್ರಕಟಿಸುವ ಸಾಮರ್ಥ್ಯವನ್ನು ತರುವುದು, ಪ್ರತಿಯೊಬ್ಬನ ವ್ಯಕ್ತಿತ್ವದ ಗುಣಲಕ್ಷಣವನ್ನು ಅದರ ಪೂರ್ತಿ ಮೌಲ್ಯ ದೊರಕಿಸುವಂತೆ ಎತ್ತರಕ್ಕೇರಿಸುತ್ತದೆ ಮತ್ತು ಅದರ ಗರಿಷ್ಠ ಅಭಿವ್ಯಕ್ತಿ ಬರುವಂತೆ ಮಾಡುತ್ತದೆ, ಏಕೆಂದರೆ ಇದು ದೈವೀ ಯೋಜನೆಯ ಅಂಗವಾಗಿದೆ. ನೈತಿಕತೆಯು ಮಾನಸಿಕ ರಚನೆಯಿಂದ ಮುಂದುವರಿಯುವುದು ಮತ್ತು ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂಬ ಕೆಲವೇ ವಿಚಾರಗಳಿಂದ ಆದರ್ಶದ ಮಾದರಿಯನ್ನು ನಿರ್ಮಿಸುತ್ತದೆ ಮತ್ತು ಎಲ್ಲರೂ ಅದನ್ನು ಬಲವಂತವಾಗಿ ಅನುಸರಿಸಬೇಕಾಗುತ್ತದೆ, ಆತ್ಮದ ಜೀವನ ಹಾಗೂ ಸ್ವಾತಂತ್ರ್ಯಗಳಿಗೆ ವಿರುದ್ಧವಾಗಿ ಒಂದು ಕೃತ್ರಿಮವಾದ ಮಾದರಿಯನ್ನು ಎತ್ತಿ ಹಿಡಿಯುತ್ತದೆ. ಮಾನಸಿಕ ಹಾಗೂ ಸೀಮಿತವಾದುದೇನನ್ನೋ ಸೃಷ್ಟಿಸಿ ನೈತಿಕತೆಯು ಎಲ್ಲರೂ ಅದಕ್ಕೆ ಹೊಂದಿಕೊಳ್ಳಬೇಕೆಂದು ಕೇಳುತ್ತದೆ. ಎಲ್ಲರೂ ಒಂದೇ ತರಹದ ಗುಣಗಳನ್ನು, ಆದರ್ಶ ಸ್ವಭಾವವನ್ನು ಹೊಂದಲು ಹೆಣಗಬೇಕು. ನೈತಿಕತೆಗೂ ದೈವತ್ವಕ್ಕೂ ಯಾವ ಸಂಬಂಧವಿಲ್ಲ, ಅದು ಮಾನವನಿಗೆ ಸೇರಿದ್ದು. ಒಳ್ಳೆಯದರ ಹಾಗೂ ಕೆಟ್ಟದ್ದರ ನಿಶ್ಚಿತ ವಿಭಜನೆಯನ್ನು ನೈತಿಕತೆಯು ತನ್ನ ಆಧಾರದ ಅಂಶವನ್ನಾಗಿ ತೆಗೆದುಕೊಳ್ಳುತ್ತದೆ, ಆದರೆ ಇದೊಂದು ಸ್ವೇಚ್ಛಾನುಸಾರವಾದ ಕಲ್ಪನೆ. ಅದು ಪರಸ್ಪರ ಸಂಬಂಧಿತ ವಿಷಯಗಳನ್ನು ತೆಗೆದುಕೊಂಡು ಅವು ಸ್ವ–ಪರಿಪೂರ್ಣವಾದವುಗಳೆಂದು ಹೇರಲು ಪ್ರಯತ್ನಿಸುತ್ತದೆ, ಏಕೆಂದರೆ ಈ ಒಳ್ಳೆಯದೆನ್ನುವುದು ಮತ್ತು ಕೆಟ್ಟದ್ದೆನ್ನುವುದು ಬೇರೆ, ಬೇರೆ ಪರಿಸರಗಳಲ್ಲಿ, ಕಾಲ ಯುಗಗಳಲ್ಲಿ, ಹಾಗೂ ದೇಶಗಳಲ್ಲಿ ಭಿನ್ನವಾಗಿರುತ್ತವೆ. ಒಳ್ಳೆಯ ಹಾಗೂ ಕೆಟ್ಟ ಆಸೆಗಳಿರುತ್ತವೆ ಎನ್ನುವಷ್ಟರ ಮಟ್ಟಿಗೆ ನೈತಿಕತೆ ಮುಂದುವರಿಯುತ್ತದೆ ಮತ್ತು ನೀವು ಅವುಗಳಲ್ಲೊಂದನ್ನು ಸ್ವೀಕರಿಸಿ ಇನ್ನೊಂದನ್ನು ನಿರಾಕರಿಸಲು ನಿಮಗೆ ಕರೆಕೊಡುತ್ತದೆ. ಆದರೆ ಆಧ್ಯಾತ್ಮಿಕ ಜೀವನ ನೀವು ಆಸೆಯನ್ನು ಒಟ್ಟಿನಲ್ಲಿ ತಿರಸ್ಕರಿಸುವುದನ್ನು ಒತ್ತಾಯದಿಂದ ಬೇಡುತ್ತದೆ. ಅದರ ನಿಯಮ ಭಗವಂತನಿಂದ

ನಿಮ್ಮನ್ನು ದೂರ ಕರೆದೊಯ್ಯುವ ಎಲ್ಲ ಚಲನೆಗಳನ್ನು ಬಿಟ್ಟುಕೊಡುವುದಾಗಿದೆ.

ನೈತಿಕ ಗುಣಗಳೆಂದು ಕರೆಯಲಾದವುಗಳನ್ನು ಹೊಂದಿರುವುದು ನೈತಿಕ ಪರಿಪೂರ್ಣತೆ: ಎಂದಿಗೂ ಅಪಾರ್ಥ ಮಾಡಿಕೊಳ್ಳದೆ ಇರುವುದು, ತಪ್ಪು ಆಡದಿರುವುದು, ತಾನು ಅತ್ಯಂತ ಒಳ್ಳೆಯದೆಂದು ಕಲ್ಪಿಸಿಕೊಂಡ ರೀತಿಯಲ್ಲಿ ಮನುಷ್ಯ ಇರುವುದು, ಎಲ್ಲ ಸದ್ಗುಣಗಳನ್ನು ಹೊಂದಿರುವುದು – ಎಂದರೆ ಅತ್ಯುಚ್ಚ ಮಾನಸಿಕ ಕಲ್ಪನೆಯನ್ನು ಸಿದ್ಧಿಸಿಕೊಂಡಿರುವುದು; ಎಲ್ಲ ಗುಣಗಳನ್ನು ಮೈಗೂಡಿಸಿಕೊಂಡಿರುವುದು – ಅವು ಹಲವಾರಿವೆ ಅಲ್ಲವೆ? – ಎಲ್ಲ ಸದ್ಗುಣಗಳು, ಅತ್ಯಂತ ಸುಂದರವಾದದ್ದು, ಉದಾರವಾದದ್ದು, ನಿಜವಾದದ್ದು ಎಂದು ಮನುಷ್ಯ ಕಲ್ಪಿಸಿಕೊಂಡದ್ದನ್ನು ಸಮಗ್ರವಾಗಿ ಜೀವಿಸುವುದು, ಎಲ್ಲ ಚಲನೆಗಳು, ಎಲ್ಲ ಪ್ರತಿಕ್ರಿಯೆಗಳು, ಎಲ್ಲ ಭಾವನೆಗಳು ಹೀಗೆ ಎಲ್ಲ ಕ್ರಿಯೆಗಳು ಆ ಎಲ್ಲದರಿಂದ ಮಾರ್ಗದರ್ಶನ ಪಡೆಯುವುದಕ್ಕೆ ಅನುವು ಮಾಡಿಕೊಡುವುದು – ಇದು ಪರಿಪೂರ್ಣತೆಯ ನೈತಿಕ ಆದರ್ಶ. ಅದು ಮಾನವನ ಮಾನಸಿಕ ಉತ್ಕ್ರಾಂತಿಯ ಶಿಖರ.

ಅದನ್ನು ಬಹಳ ಜನರು ಕೈಕೊಳ್ಳುವುದಿಲ್ಲ. ಆದಾಗ್ಯೂ ಅಂತಹ ಕೆಲವರಿದ್ದರು ಮತ್ತು ಇನ್ನೂ ಇದ್ದಾರೆ. ಇದನ್ನೇ ಜನರು ಸಾಮಾನ್ಯವಾಗಿ, ಆಧ್ಯಾತ್ಮಿಕ ಜೀವನವೆಂದು ಪರಿಗಣಿಸುತ್ತಾರೆ. ಈ ಮಾದರಿಯ ಮನುಷ್ಯನನ್ನು ಭೇಟಿ ಮಾಡಿದಾಗ ಅವರು "ಓಹ್! ಅವನು ಶ್ರೇಷ್ಠ ಆಧ್ಯಾತ್ಮಿಕ ಸತ್ತೆ" ಎಂದು ಹೇಳುತ್ತಾರೆ. ಅವನು ಶ್ರೇಷ್ಠ ಸಾಧು ಇಲ್ಲವೆ ಋಷಿಯಾಗಿರಬಹುದು, ಆದರೆ ಆಧ್ಯಾತ್ಮಿಕ ಸತ್ತೆಯಾಗಿರುವುದಿಲ್ಲ.

ಹೀಗಿದ್ದಾಗ್ಯೂ ನೈತಿಕ ಪರಿಪೂರ್ಣತೆಯನ್ನು ಸಿದ್ಧಿಸಿಕೊಳ್ಳುವುದು ಬಹಳ ಒಳ್ಳೆಯದು ಮತ್ತು ಅದು ಕಷ್ಟಕರವಾದದ್ದೂ ಕೂಡ. ಆಂತರಿಕ ಉತ್ಕ್ರಾಂತಿಯಲ್ಲಿ ಒಂದು ಕಾಲ ಬರುತ್ತದೆ, ಆಗ ಅದನ್ನು ಸಿದ್ಧಿಸಿಕೊಳ್ಳುವುದು ಅತ್ಯಂತ ಅವಶ್ಯವಾಗಿರುತ್ತದೆ. ಮನುಷ್ಯ ತನ್ನ ಎಲ್ಲ ಪ್ರೇರಣೆಗಳಿಂದ ಹಾಗೂ ಬಾಹ್ಯ ಪ್ರತಿಕ್ರಿಯೆಗಳಿಂದ ನಿರ್ದೇಶನ ಪಡೆಯುವುದಕ್ಕಿಂತ ನೈತಿಕತೆಯಿಂದ ನಿರ್ದೇಶನ ಪಡೆಯುವುದು ಅನಂತಪಟ್ಟು ಒಳ್ಳೆಯದು. ಅದಾಗಲೇ ತನ್ನ ಸ್ವಭಾವದ ಮೇಲೆ ಪ್ರಭುತ್ವ ಪಡೆಯುವ ಮಾರ್ಗದಲ್ಲಿ ನಡೆದ ಹಾಗೆ. ಮನುಷ್ಯ ಈ ನೈತಿಕತೆಯ ಹಂತದೊಳಗಿಂದ ಹಾಯ್ದುಹೋಗಲೇಬೇಕಾಗುತ್ತದೆ. ಏಕೆಂದರೆ ಆ ಹಂತದಲ್ಲಿ ಅವನು ತನ್ನ ಅಹಂಕಾರದ ಮೇಲೆ ಪ್ರಭುತ್ವ ಪಡೆಯಲು ಪ್ರಾರಂಭಿಸುತ್ತಾನೆ. ಅದನ್ನು ತನ್ನಿಂದ ಕಳಚಿಕೊಂಡು ಬಿಡಲು ತಯಾರಾಗುತ್ತಾನೆ – ಅದು ಇನ್ನೂ ಉಳಿದಿರುತ್ತದೆ, ಆದರೆ ಸಾಕಷ್ಟು ಬಲಹೀನವಾಗಿ ತನ್ನ ಕೊನೆಯನ್ನು ತಲುಪುವ ಹಂತದಲ್ಲಿರುತ್ತದೆ. ಇದು ಜೀವನದ ಇನ್ನೊಂದು ಮಗ್ಗುಲಿಗೆ ದಾಟಿ ಹೋಗುವ ಕೊನೆಯ ಹಂತ ಮತ್ತು ನಿಜವಾಗಿ ಯಾರಾದರೂ ಈ ಹಂತದೊಳಗಿಂದ ಸಾಗಿ ಹೋಗದೆ ಆ ಇನ್ನೊಂದು ಮಗ್ಗುಲಿಗೆ ಹೋಗಬಲ್ಲೆವೆಂದು ಕಲ್ಪನೆ ಮಾಡಿಕೊಂಡರೆ ಅವರು ಬಹಳ ದೊಡ್ಡ ತಪ್ಪನ್ನು ಮಾಡುವ ಮತ್ತು ನಿಮ್ಮ ಸ್ವಭಾವದ ಬಲಹೀನತೆಯನ್ನು ಪರಿಪೂರ್ಣ ಸ್ವಾತಂತ್ರ್ಯವೆಂದು ತಿಳಿಯುವ ಅಪಾಯಕ್ಕೊಳಗಾಗುತ್ತಾರೆ.



ಮಾನಸಿಕ ಸತ್ತೆಯಿಂದ – ಅದು ಎಷ್ಟೇ ಪರಿಪೂರ್ಣವಾಗಿರಲಿ ಇಲ್ಲವೆ ಅಸಾಧಾರಣವಾಗಿರಲಿ – ನಿಜವಾದ ಆಧ್ಯಾತ್ಮಿಕ ಸತ್ತೆಯೊಳಗೆ ಸಾಗಿ ಹೋಗಬೇಕಾದರೆ ಕೆಲ ಕಾಲದವರೆಗೆ (ಅದು ಅಲ್ಪಕಾಲಿಕವಾಗಿರಬಹುದು) ಯಾದರೂ ಈ ನೈತಿಕ ಪರಿಪೂರ್ಣತೆಯ ಆದರ್ಶವನ್ನು ಸಿದ್ಧಿಸಿಕೊಳ್ಳುವ ಆವಶ್ಯಕತೆಯಿದೆ, ಇಲ್ಲದಿದ್ದರೆ ಅದು ಅಸಾಧ್ಯವಾಗುವುದು. ಬಹಳಷ್ಟು ಜನರು ಹತ್ತಿರದ ದಾರಿಯನ್ನು ಹಿಡಿಯಲು ಪ್ರಯತ್ನಿಸುತ್ತಾರೆ ಮತ್ತು ತಮ್ಮ ಬಾಹ್ಯ ಸ್ವಭಾವದ ಎಲ್ಲ ಬಲಹೀನತೆಗಳನ್ನು ಜಯಿಸದೆ ಆಂತರಿಕ ಸ್ವಾತಂತ್ರ್ಯವನ್ನು ದೃಢೀಕರಿಸಲು ಬಯಸುತ್ತಾರೆ, ಹೀಗೆ ಅವರು ತಮ್ಮನ್ನು ಮೋಸಪಡಿಸಿಕೊಳ್ಳುವ ದೊಡ್ಡ ಅಪಾಯಕ್ಕೊಳಗಾಗುತ್ತಾರೆ. ನಿಜವಾದ ಆಧ್ಯಾತ್ಮಿಕ ಜೀವನ ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಿದ್ದಾಗಿದ್ದು ಅತ್ಯಂತ ಉಚ್ಚ ಮಟ್ಟದ ನೈತಿಕ ಸಿದ್ಧಿಗಳಿಗಿಂತ ಅತ್ಯಂತ ಉನ್ನತ ಮಟ್ಟದ ಸಿದ್ಧಿಗಳನ್ನೊಳಗೊಂಡಿರುತ್ತದೆ. ಆದರೆ ನಾವು ಸ್ವಾತಂತ್ರ್ಯವೆಂದು ಕರೆಯುವುದನ್ನು ಲೋಲುಪತೆಯೆಂದು ಹಾಗೂ ಎಲ್ಲ ನಿಯಮಗಳನ್ನು ತಿರಸ್ಕಾರ ಭಾವದಿಂದ ನೋಡುವುದೆಂದು ತಿಳಿದುಕೊಳ್ಳದಂತೆ ಮನುಷ್ಯ ಕಾಳಜಿ ವಹಿಸತಕ್ಕದ್ದು.

ತನ್ನ ಆಧ್ಯಾತ್ಮಿಕ ಗರಿಗಳನ್ನು ಬಿಚ್ಚಿಕೊಳ್ಳುವ ಮೊದಲು ಮನುಷ್ಯ ಮಾನವತೆ ಅತ್ಯುತ್ತಮ ಮಟ್ಟದ್ದೆಂದು ಕಲ್ಪಿಸಿಕೊಂಡ, ಅತ್ಯಂತ ಸುಂದರವಾದ, ಅತ್ಯಂತ ನಿರಾಸಕ್ತಿಯಿಂದ ಕೂಡಿದ, ಅತ್ಯಂತ ಶ್ರೇಷ್ಠವಾದ ಎಲ್ಲವನ್ನು ಸ್ವಯಂಸ್ಫೂರ್ತಿಯಿಂದ ತನ್ನದಾಗಿರಿಸಿಕೊಂಡಿರುವ ಸಾಮರ್ಥ್ಯವನ್ನು ಪಡೆದಿರಬೇಕು.

**(3/117–18), (9/409–10)** **– ಶ್ರೀಮಾತೆ**

*

## ಶ್ರೀ ಅರವಿಂದರ ಬೋಧನೆ ಹೊಸ ಧರ್ಮವಾಗಿದೆಯೆ?

**ಪ್ರಶ್ನೆ :** *ಶ್ರೀ ಅರವಿಂದರ ಬೋಧನೆಯು ಹೊಸ ಧರ್ಮವೆಂದು ಬಹಳ ಜನರು ಹೇಳುತ್ತಾರೆ. ನೀವು ಅದನ್ನು ಧರ್ಮವೆಂದು ಹೇಳುವಿರಾ?*

**ಶ್ರೀಮಾತೆ :** ಹಾಗೆ ಹೇಳುವ ಜನರು ಮೂರ್ಖರು, ತಾವೇನು ಮಾತನಾಡುತ್ತಿದ್ದೇವೆಂಬುದು ಅವರಿಗೇ ತಿಳಿದಿಲ್ಲ. ಶ್ರೀ ಅರವಿಂದರು ಬರೆದುದನ್ನೆಲ್ಲ ನೀವು ಓದಿದಿರಾದರೆ ಅವರ ಕೃತಿಗಳ ಆಧಾರದ ಮೇಲೆ ಧರ್ಮವೊಂದನ್ನು ಸ್ಥಾಪಿಸುವುದು ಅಸಾಧ್ಯವೆಂದು ತಿಳಿದು ಬರುವುದು. ಏಕೆಂದರೆ ಅವರು ಪ್ರತಿಯೊಂದು ಸಮಸ್ಯೆಯನ್ನು, ಪ್ರತಿಯೊಂದು ಪ್ರಶ್ನೆಯನ್ನು ಅದರೆಲ್ಲದರ ಮುಖಗಳಲ್ಲಿ ವಿವೇಚಿಸಿದ್ದಾರೆ, ಅವುಗಳಲ್ಲಿ ಬರುವ ಪ್ರತಿಯೊಂದು ವಿಷಯದಲ್ಲಿರುವ ಸತ್ಯವನ್ನು ನೋಡುವ ಮಾರ್ಗವನ್ನು ತೋರಿಸಿದ್ದಾರೆ ಮತ್ತು ದಿವ್ಯ ಸತ್ಯವನ್ನು ಸಂಪಾದಿಸುವುದಕ್ಕಾಗಿ ಎಲ್ಲ ಮಾನಸಿಕ ಕಲ್ಪನೆಗಳಾಚೆ ಇರುವ ಸಮನ್ವಯವನ್ನು ಸಿದ್ಧಿಸಿಕೊಳ್ಳಬೇಕು ಹಾಗೂ ವಿಚಾರಗಳ ಆಚೆ ಇರುವ ವಿಶ್ವಾತೀತದಲ್ಲಿ ಪ್ರವೇಶಿಸಬೇಕೆಂದು ವಿವರಿಸಿದ್ದಾರೆ.

ನಾವು ಶ್ರೀ ಅರವಿಂದರ ಬಗ್ಗೆ ಹೇಳುವಾಗ ಬೋಧನೆಯೊಂದರ ಇಲ್ಲವೆ ದಿವ್ಯದರ್ಶನವೊಂದರ ಬಗ್ಗೆ ಪ್ರಶ್ನೆ ಇರಲಾರದು, ಆದರೆ ಅವರದು ಪರಮಶ್ರೇಷ್ಠನಿಂದ ಬಂದ ಕ್ರಿಯೆಯಾಗಿದೆ, ಅದರ ಆಧಾರದ ಮೇಲೆ ಧರ್ಮವನ್ನು ಸ್ಥಾಪಿಸಲಿಕ್ಕಾಗದು.

ಆದರೆ ಮನುಷ್ಯರು ಎಷ್ಟೊಂದು ಮೂರ್ಖರಾಗಿರುತ್ತಾರೆಂದರೆ ಅವರು ಯಾವುದನ್ನೂ ಒಂದು ಧರ್ಮವನ್ನಾಗಿ ಪರಿವರ್ತಿಸಬಲ್ಲರು. ಅವರಿಗೆ ತಮ್ಮ ಸಂಕುಚಿತ ವಿಚಾರಕ್ಕಾಗಿ ಸೀಮಿತ ಕ್ರಿಯೆಗಾಗಿ ಒಂದು ನಿಶ್ಚಿತ ಚೌಕಟ್ಟಿನ ಆವಶ್ಯಕತೆ ಬಹಳವಾಗಿರುತ್ತದೆ. 'ಇದು ಸತ್ಯ, ಅದು ಸತ್ಯವಲ್ಲ' ಎಂದು ದೃಢೀಕರಿಸಲು ಅವರಿಗೆ ಸಾಧ್ಯವಾಗದೇ ಹೋದರೆ ಸುರಕ್ಷಿತತೆಯ ಭಾವನೆ ಬರುವುದಿಲ್ಲ, ಆದರೆ ಶ್ರೀ ಅರವಿಂದರು ಬರೆದದ್ದನ್ನು ಓದಿ ಅರ್ಥ ಮಾಡಿಕೊಂಡವರಿಗೆ ಈ ಬಗೆಯ ದೃಢೀಕರಣ ಅಸಾಧ್ಯವಾಗುತ್ತದೆ. ಧರ್ಮ ಮತ್ತು ಯೋಗ ಸತ್ತೆಯ ಒಂದೇ ಸ್ತರಕ್ಕೆ ಸೇರಿರುವುದಿಲ್ಲ ಮತ್ತು ಆಧ್ಯಾತ್ಮಿಕ ಜೀವನವು ತನ್ನೆಲ್ಲ ಪರಿಶುದ್ಧತೆಯೊಂದಿಗೆ ಇರಬೇಕಾದರೆ ಅದು ಎಲ್ಲ ಮಾನಸಿಕ ಧರ್ಮಾಂಧತೆಯಿಂದ ಮುಕ್ತವಾಗಿರಬೇಕು.

(ಶಿಕ್ಷಕನೊಬ್ಬನನ್ನು ಕುರಿತು): "ಇತಿಹಾಸ ಮುಂದುವರಿದಿದೆ, ಶ್ರೀ ಅರವಿಂದರು ಅದರ ಪರಿಣಾಮ ಹಾಗೂ ಪರಾಕಾಷ್ಠೆ" ಎಂದು ನೀನು



ಹೇಳುತ್ತೀ. ಅದು ಸತ್ಯವಲ್ಲ. ಶ್ರೀ ಅರವಿಂದರು ಇತಿಹಾಸಕ್ಕೆ ಸೇರಿದವರಲ್ಲ, ಅದಕ್ಕೆ ಬಾಹ್ಯದಲ್ಲಿರುವವರು.

ಶ್ರೀ ಅರವಿಂದರು ಜನ್ಮತಾಳಿ ಬರುವವರೆಗೆ ಧರ್ಮಗಳು ಹಾಗೂ ಆಧ್ಯಾತ್ಮಿಕತೆಗಳು ಹಿಂದೆ ಬಾಳಿ ಹೋದ ಅವತಾರಗಳ ಮೇಲೆ ಅವಲಂಬಿತವಾಗಿದ್ದವು ಮತ್ತು ಅವು ಪೃಥ್ವಿಯ ಮೇಲಿನ ಜೀವನವನ್ನು ನಿರಾಕರಿಸುವುದನ್ನು ತಮ್ಮ ಧ್ಯೇಯವನ್ನಾಗಿ ಮಾಡಿಕೊಂಡಿದ್ದವು. ಹೀಗಾಗಿ ನೀವು ಎರಡು ವಿಕಲ್ಪಗಳ ನಡುವೆ ಆಯ್ಕೆ ಮಾಡಿಕೊಳ್ಳಬೇಕಾಗಿತ್ತು.

– ಈ ಜಗತ್ತಿನಲ್ಲಿಯ ಜೀವನ, ಅದರ ಅಲ್ಪ ಸುಖ ದುಃಖ, ನೋವು ನಲಿವು ಇವುಗಳ ಚಕ್ರದಲ್ಲಿ ಸಿಕ್ಕಿ ಹಾಕಿಕೊಳ್ಳುವುದು. ನೀವು ಸರಿಯಾಗಿ ವರ್ತಿಸದಿದ್ದರೆ ನರಕದ ಭಯ, ಇಲ್ಲವೆ – ಸ್ವರ್ಗ, ನಿರ್ವಾಣ ಮೋಕ್ಷಗಳಿರುವ ಬೇರೆ ಜಗತ್ತುಗಳಿಗೆ ಪಾರಾಗಿ ಹೋಗುವುದು. ಇವೆರಡರ ನಡುವೆ ಆಯ್ದುಕೊಳ್ಳಲು ಬೇರೇನಿಲ್ಲ. ಅವೆರಡೂ ಅಷ್ಟೇ ಕೆಟ್ಟದ್ದಾಗಿವೆ.

ಶ್ರೀ ಅರವಿಂದರ ಪ್ರಕಾರ ಇದು ಮೂಲಭೂತ ಪ್ರಮಾದವಾಗಿತ್ತು. ಇದರಿಂದಾಗಿಯೇ ಭಾರತವು ಬಲಹೀನತೆಗೆ ಹಾಗೂ ಅವನತಿಗೆ ಒಳಗಾಯಿತು. ಬೌದ್ಧಮತ, ಜೈನಮತ ಮತ್ತು ಮಾಯಾವಾದ ಇವು ದೇಶದ ಎಲ್ಲ ಶಕ್ತಿಯು ಕ್ಷೀಣಿಸುವುದಕ್ಕೆ ಸಾಕಷ್ಟು ಅವಕಾಶ ಮಾಡಿಕೊಟ್ಟವು.

ನಿಜ, ಜಗತ್ತಿನಲ್ಲಿ ಭಾರತ ದೇಶಕ್ಕೆ ಮಾತ್ರ ಜಡವಸ್ತುವಲ್ಲದೆ ಬೇರೇನೆಲ್ಲ ಅಸ್ತಿತ್ವದಲ್ಲಿದೆ ಎಂಬುದರ ಅರಿವಿದೆ.

ಪೃಥ್ವಿಯ ಜೀವನದಿಂದ ಪಲಾಯನ ಮಾಡುವುದರಲ್ಲಿ ಸತ್ಯವಡಗಿಲ್ಲವೆಂದು ಶ್ರೀ ಅರವಿಂದರು ತೋರಿಸಿಕೊಟ್ಟಿದ್ದಾರೆ. ಆದರೆ ಅದರಲ್ಲೇ ಇದ್ದುಕೊಂಡು ಅದನ್ನು ಪರಿವರ್ತಿಸಬೇಕು, ದೈವೀಕರಿಸಬೇಕು, ಭಗವಂತನು ಈ ಭೌತಿಕ ಜಗತ್ತಿನಲ್ಲೇ ಪ್ರಕಟನಾಗುವನು ಎಂದು ಅವರು ಹೇಳಿದ್ದಾರೆ.

**(10/96–97), (12/212–13)** **– ಶ್ರೀಮಾತೆ**

*

## ಶ್ರೀ ಅರವಿಂದರು ತಮ್ಮ ಬಗೆಗೆ ಹೇಳಿದುದು

ಯಾವುದೊಂದು ಧರ್ಮವನ್ನು ಸ್ಥಾಪಿಸಿ ಬೆಳೆಸುವುದು ಇಲ್ಲವೆ ಹಳೆಯ ಧರ್ಮಗಳನ್ನೆಲ್ಲ ಒಟ್ಟುಗೂಡಿಸಿ ಹೊಸದೊಂದು ಧರ್ಮವನ್ನು ಸ್ಥಾಪಿಸುವುದು ನನ್ನ ಉದ್ದೇಶವಾಗಿರಲಿಲ್ಲ. ಏಕೆಂದರೆ ಇದರಲ್ಲಿ ಪ್ರತಿಯೊಂದು ನನ್ನ ಕೇಂದ್ರ

ಉದ್ದೇಶದಿಂದ ನನ್ನನ್ನು ದೂರ ಕೊಂಡೊಯ್ಯುತ್ತಿತ್ತು. ನನ್ನ ಯೋಗದ ಒಂದು ಮುಖ್ಯ ಗುರಿಯೆಂದರೆ ಅಂತರಾತ್ಮವನ್ನು ಬೆಳೆಸಿಕೊಳ್ಳುವುದು. ಅದರಿಂದಾಗಿ ಅದನ್ನನುಸರಿಸುವ ಪ್ರತಿಯೊಬ್ಬನೂ ಕಾಲಕ್ರಮೇಣ ಎಲ್ಲದರಲ್ಲಿ ಭಗವಂತನನ್ನು ಕಂಡುಕೊಳ್ಳುವನು ಮತ್ತು ಮಾನವ ಪ್ರಜ್ಞೆಗಿಂತ ಉಚ್ಚತರ ಪ್ರಜ್ಞೆಯಲ್ಲಿ ಉತ್ಕ್ರಾಂತಿ ಹೊಂದುವನು. ಈ ಉಚ್ಚತರ ಪ್ರಜ್ಞೆಯು ಆಧ್ಯಾತ್ಮಿಕ ಹಾಗೂ ಅತಿಮಾನಸ ಪ್ರಜ್ಞೆಯಾಗಿದ್ದು ಮಾನವ ಸ್ವಭಾವವನ್ನು ಪರಿವರ್ತಿಸುವುದು ಹಾಗೂ ದೈವೀಕರಿಸುವುದು.

**(26/97)** **– ಶ್ರೀ ಅರವಿಂದರು**

## ಭವಿಷ್ಯತ್ತಿನಲ್ಲಿ ಧರ್ಮ

ಈ ಕಲ್ಪನೆಯನ್ನು ಶ್ರೀ ಅರವಿಂದರು ಅಭಿವ್ಯಕ್ತಪಡಿಸಿದ್ದರು. ನಾನು ಕೂಡ ಹಲವಾರು ಸಲ ಅಭಿವ್ಯಕ್ತಪಡಿಸಿದ್ದೇನೆ, ಅದನ್ನು ಸೂತ್ರರೂಪದಲ್ಲಿ ಈ ರೀತಿ ಹೇಳಬಹುದು; ಹಳೆಯ ಆಧ್ಯಾತ್ಮಿಕತೆಯು ಜೀವನದಿಂದ ತಪ್ಪಿಸಿಕೊಂಡು ದೈವೀ ನೈಜತೆಯಲ್ಲಿ ಪಾರಾಗಿ ಹೋಗುವುದಾಗಿತ್ತು ಹಾಗೂ ಜಗತ್ತನ್ನು ಅದರ ಮಟ್ಟಿಗೆ ಹಾಗೇ ಬಿಟ್ಟುಬಿಡುವುದಾಗಿತ್ತು. ಅದಕ್ಕೆ ತದ್ವಿರುದ್ಧವಾಗಿ ನಮ್ಮ ಹೊಸ ದರ್ಶನವು ಜೀವನವನ್ನು ದೈವಿಕವನ್ನಾಗಿ ಮಾಡುವುದು ಹಾಗೂ ಭೌತಿಕ ಜಗತ್ತನ್ನು ದೈವಿಕ ಜಗತ್ತನ್ನಾಗಿ ಮಾರ್ಪಡಿಸುವುದಾಗಿದೆ. ಇದನ್ನು ಈಗಾಗಲೇ ಹೇಳಿಯಾಗಿದೆ. ಪುನರುಚ್ಚರಿಸಲಾಗಿದೆ. ಹೆಚ್ಚು ಕಡಿಮೆ ಅರ್ಥಮಾಡಿಕೊಳ್ಳಲಾಗಿದೆ. ನಿಜವಾಗಿ ಇದೇ ನಾವು ಕೈಕೊಳ್ಳಬಯಸುವುದರ ಮೂಲಭೂತ ವಿಚಾರ. ಆದರೆ ಇದು ಹಳೆಯ ಜಗತ್ತನ್ನು ಅದಿದ್ದ ಹಾಗೆ ಮುಂದುವರಿಸಿಕೊಂಡು ಬಂದು ಸುಧಾರಿಸುವುದಾಗಿರಬಹುದು ಮತ್ತು ವಿಸ್ತರಿಸುವುದಾಗಿರಬಹುದು – ಅದು ಮೇಲೆ ಎಲ್ಲೋ ಇರುವ ವಿಚಾರದಲ್ಲಿಯ, ಕ್ಷೇತ್ರದಲ್ಲಿಯ ಕಲ್ಪನೆ ಮಾತ್ರವಾಗಿದ್ದರೆ ಸಾಲದು, ವಾಸ್ತವದಲ್ಲಿ ಅದಕ್ಕಿಂತ ಹೆಚ್ಚೇನೂ ಆಗಿಲ್ಲ – ಆದರೆ ಈಗ ಸಂಭವಿಸಿದ್ದೇನೆಂದರೆ ನಿಜವಾಗಿಯೂ ಹೊಸ ಜಗತ್ತಿನ ಉದಯವಾಗಿದೆ. ಹಳೆಯ ಜಗತ್ತು ಪರಿವರ್ತನೆಗೊಳ್ಳುವ ವಿಚಾರ ಇದಲ್ಲ. ಹೊಸ ಜಗತ್ತು ಹುಟ್ಟಿದೆ. ಸ್ಥಿತ್ಯಂತರದ ಈ ಕಾಲಾವಧಿಯ ಮಧ್ಯದಲ್ಲಿ ನಾವಿದ್ದೇವೆ, ಈಗ ಹಳೆಯದು ಮತ್ತು ಹೊಸದು ಒಂದರೊಳಗೊಂದು ತಳಕು ಹಾಕಿಕೊಂಡಿವೆ, ಹಳೆಯದು ಸಾಕಷ್ಟು ಪ್ರಬಲವಾಗಿದ್ದು ಸಾಮಾನ್ಯ ಪ್ರಜ್ಞೆಯ ಮೇಲೆ ತನ್ನ ಅಧಿಪತ್ಯವನ್ನು ನಡೆಸುತ್ತ ಉಳಿದುಕೊಂಡಿದೆ, ಅದೇ ಕಾಲಕ್ಕೆ ಹೊಸದು ಸದ್ದಿಲ್ಲದೆ ಒಳಗೆ ನುಸುಳುತ್ತಿದೆ,



ಇನ್ನೂ ಬಹಳ ಮೃದುವಾಗಿ, ಯಾರ ಗಮನಕ್ಕೂ ಬಾರದೆ – ಎಷ್ಟರ ಮಟ್ಟಿಗೆ ಜನರ ಗಮನಕ್ಕೆ ಬಾರದೆ ಇದೆಯೆಂದರೆ ಸದ್ಯಕ್ಕೆ ಬಾಹ್ಯದಲ್ಲಿ ಅದು ಯಾವುದನ್ನೂ ಬಹಳಷ್ಟು ತೊಂದರೆಗೊಳಪಡಿಸುವುದಿಲ್ಲ ಮತ್ತು ಬಹಳಷ್ಟು ಜನರ ಪ್ರಜ್ಞೆಯಲ್ಲಿ ಅದು ಇನ್ನೂ ಗ್ರಹಿಕೆಗೆ ಬಾರದೆ ಇದೆ. ಹಾಗಿದ್ದರೂ ಅದು ಕಾರ್ಯ ಮಾಡುತ್ತಿದೆ, ಬೆಳೆಯುತ್ತಿದೆ – ಪ್ರಕಟವಾಗಿ ತನ್ನನ್ನು ದೃಢೀಕರಿಸಿಕೊಳ್ಳುವವರೆಗೆ ಹೀಗೇ ನಡೆಯುತ್ತದೆ.

ಸಂದರ್ಭ ಯಾವುದೇ ಇರಲಿ, ವಿಷಯಗಳನ್ನು ಸರಳೀಕರಿಸಿ ಹೇಳುವುದಾದರೆ ಶ್ರೀ ಅರವಿಂದರು ಅಧಿಮಾನಸ ಸೃಷ್ಟಿಯೆಂದು ಕರೆದ ಹಳೆಯ ಜಗತ್ತು ಅದರ ಗುಣಲಕ್ಷಣಗಳಲ್ಲಿ ದೇವತೆಗಳ ಯುಗವಾಗಿತ್ತು. ಪರಿಣಾಮವಾಗಿ ಧರ್ಮಗಳ ಯುಗವಾಗಿತ್ತು. ನಾನು ಹೇಳಿದ ಹಾಗೆ ಮನುಷ್ಯ ತನಗಿಂತಲೂ ಉಚ್ಚತರವಾಗಿರುವುದನ್ನು ಕುರಿತು ಮಾಡಿದ ಪ್ರಯತ್ನದ ಫಲಸ್ವರೂಪವಾಗಿ ಅನೇಕ ಬಗೆಯ ಧರ್ಮಗಳು ಹುಟ್ಟಿಕೊಂಡವು ಮತ್ತು ಶ್ರೇಷ್ಠ ಆತ್ಮಗಳಿಗೆ ಅಗೋಚರ ಜಗತ್ತುಗಳೊಡನೆ ಧಾರ್ಮಿಕ ಸಂಬಂಧ ಏರ್ಪಟ್ಟಿತು. ಅದೆಲ್ಲದರ ಶಿಖರಪ್ರಾಯವಾಗಿ ಉಚ್ಚತರ ಸಿದ್ಧಿಯತ್ತ ಪ್ರಯತ್ನವೆಂದು ಎಲ್ಲ ಧರ್ಮಗಳ ಏಕತೆಯ ವಿಚಾರ ತಲೆಯೆತ್ತಿದೆ. ಅದರದು 'ಏಕೈಕ ವಿಷಯ'ವಾಗಿದ್ದು ಈ ಎಲ್ಲ ಪ್ರಕಟಣೆಗಳ ಹಿಂದೆ ಇದೆ ಎಂಬ ಭಾವನೆ ಅದರಲ್ಲಿದೆ ಮತ್ತು ನಿಜವಾಗಿಯೂ ಈ ವಿಚಾರವು ಮಾನವ ಅಭೀಪ್ಸೆಯ ಕಟ್ಟಕಡೆಯ ಮಿತಿಯಾಗಿದೆ. ಸರಿ, ಅದು ಗಡಿಯಲ್ಲಿದೆ, ಆದಾಗ್ಯೂ ಅದು ಇನ್ನೂ ಪೂರ್ಣವಾಗಿ ಅಧಿಮಾನಸ ಜಗತ್ತಿಗೆ ಹಾಗೂ ಸೃಷ್ಟಿಗೆ ಸೇರಿದೆ ಮತ್ತು ಅಲ್ಲಿಂದ ಅದು 'ಮತ್ತೊಂದು ವಿಷಯದ' ಕಡೆಗೆ ನೋಡುತ್ತಿರುವಂತೆ ಭಾಸವಾಗುತ್ತಿದೆ. ಅದರ ಹಿಡಿತಕ್ಕೆ ಸಿಕ್ಕದ ಹೊಸ ಸೃಷ್ಟಿ ಅದಾಗಿದೆ – ಅದನ್ನು ಹಿಡಿದುಕೊಳ್ಳಲು ಪ್ರಯತ್ನಿಸುತ್ತದೆ. ಅದು ಬರುತ್ತಿರುವ ಅನುಭವ ಪಡೆಯುತ್ತದೆ. ಆದರೆ ಅದನ್ನು ಹಿಡಿದುಕೊಳ್ಳಲಾಗುತ್ತಿಲ್ಲ. ಅದನ್ನು ಹಿಡಿದುಕೊಳ್ಳಲು ಹಿಂತಿರುಗುವಿಕೆಯ ಆವಶ್ಯಕತೆಯಿದೆ. ಅಧಿಮಾನಸ ಸೃಷ್ಟಿಯನ್ನು ಬಿಟ್ಟುಕೊಡುವುದು ಅವಶ್ಯವಿದೆ. ಅತಿಮಾನಸ ಸೃಷ್ಟಿ ಸಂಭವಿಸಬೇಕಾದುದು ಅವಶ್ಯವಾಗಿತ್ತು.

ಮತ್ತು ಈಗ ಈ ಎಲ್ಲ ವಿಷಯಗಳು ಎಷ್ಟೊಂದು ಹಳೆಯವಾಗಿರುವಂತೆ, ಹಳೆಯ ಕಾಲಕ್ಕೆ ಸೇರಿರುವಂತೆ ಕಾಣುತ್ತವೆ. ಎಷ್ಟೊಂದು ಸ್ವೇಚ್ಛೆಯವೆನಿಸುತ್ತವೆ – ಎಷ್ಟೊಂದು ಸತ್ಯದ ಆಭಾಸ!

ಅತಿಮಾನಸ ಸೃಷ್ಟಿಯಲ್ಲಿ ಧರ್ಮಗಳಾವೂ ಇರುವುದಿಲ್ಲ. ಇಡೀ ಜೀವನವು ಜಗತ್ತಿನಲ್ಲಿ ಪ್ರಕಟವಾಗುವ ದೈವೀ ಏಕತೆಯ ಅಭಿವ್ಯಕ್ತಿ ಹಾಗೂ ಉತ್ಕ್ರಾಂತಿಯಾಗಿರುತ್ತದೆ. ಜನರಿಂದ ದೇವತೆಗಳೆಂದು ಕರೆಸಿಕೊಳ್ಳುವವರು ಯಾರೂ ಇರುವುದಿಲ್ಲ.

ಭೌತದ್ರವ್ಯ ಅತಿಮಾನಸೀಕರಣಗೊಂಡ ನಂತರ ಪೃಥ್ವಿಯ ಮೇಲೆ ಅವತರಿಸುವುದು ಕೀಳುಮಟ್ಟಕ್ಕೆ ಕಾರಣವಾಗುವುದಿಲ್ಲ, ತದ್ವಿರುದ್ಧವಾಗಿರುತ್ತದೆ. ಅದು ಸಮೃದ್ಧಿಯಾಗಿದ್ದು ಅದನ್ನು ಬೇರೆ ರೀತಿಯಲ್ಲಿ ದೊರಕಿಸಲಾಗುವುದಿಲ್ಲ.

ಆದರೆ ಇದೆಲ್ಲವೂ ಭವಿಷ್ಯತ್ತಿನಲ್ಲಿ ನಡೆಯುವಂತಹದು, ಅದು ಈಗ ಪ್ರಾರಂಭವಾಗಿದೆ, ಆದರೆ ಅದರ ಸಮಗ್ರ ಸಿದ್ಧಿ ಕೆಲ ಸಮಯ ತೆಗೆದುಕೊಳ್ಳುತ್ತದೆ.

ಈ ಮಧ್ಯೆ, ನಾವು ಒಂದು ವಿಶೇಷ ಸ್ಥಿತಿಯಲ್ಲಿರುತ್ತೇವೆ, ಅದು ಬಹಳ ವಿಶೇಷವಾದ ಸ್ಥಿತಿ, ಅದಕ್ಕೆ ಪೂರ್ವ ನಿದರ್ಶನವೆಂಬುದಿರುವುದಿಲ್ಲ.

ಈಗ ನಾವು ಹೊಸ ಜಗತ್ತು ಜನ್ಮತಾಳುತ್ತಿರುವುದಕ್ಕೆ ಸಾಕ್ಷಿಯಾಗಿದ್ದೇವೆ, ಅದು ಇನ್ನೂ ಬಾಲ್ಯಾವಸ್ಥೆಯಲ್ಲಿದೆ, ಬಹಳ ದುರ್ಬಲವಾಗಿದೆ – ಸಾರದಲ್ಲಿ ಅಲ್ಲ, ಆದರೆ ಅದರ ಪ್ರಕಟಣೆಯಲ್ಲಿ – ಇನ್ನೂ ಅದನ್ನು ಗುರುತಿಸಲಾಗಿಲ್ಲ, ಅದರ ಬಗ್ಗೆ ಭಾವನೆಯನ್ನು ತಂದುಕೊಳ್ಳಲಾಗಿಲ್ಲ, ಬಹಳಷ್ಟು ಜನರು ಅದನ್ನು ಒಪ್ಪುವುದಿಲ್ಲ ಎನ್ನುತ್ತಾರೆ. ಆದರೆ ಅದು ಇಲ್ಲಿದೆ.

**(9/150–51)** – **ಶ್ರೀಮಾತೆ**

*

## ಧರ್ಮಗಳ ಕಾಲ ಕೊನೆಗೊಂಡಿದೆ

ನಾವು ವಿಶ್ವಂಭರ ಆಧ್ಯಾತ್ಮಿಕತೆಯ ಹಾಗೂ ಆಧ್ಯಾತ್ಮಿಕ ಅನುಭವದ ಪ್ರಾರಂಭಿಕ ಪರಿಶುದ್ಧತೆಯ ಯುಗದಲ್ಲಿ ಪ್ರವೇಶಿಸಿದ್ದೇವೆ.

**(15/29)** – **ಶ್ರೀಮಾತೆ**

*

## ಆಧ್ಯಾತ್ಮಿಕತೆ ಎಂದರೇನು?

ಆಧ್ಯಾತ್ಮಿಕತೆ ಉಚ್ಚಮಟ್ಟದ ಬೌದ್ಧಿಕತೆ ಅಲ್ಲ, ಆದರ್ಶವಾದವಲ್ಲ. ಮನಸ್ಸು ನೈತಿಕತೆಯತ್ತ ಹೊರಳುವುದಲ್ಲ ಇಲ್ಲವೆ ನೈತಿಕ ಪರಿಶುದ್ಧತೆ ಮತ್ತು ವೈರಾಗ್ಯವಲ್ಲ, ಧಾರ್ಮಿಕತೆಯಲ್ಲ ಇಲ್ಲವೆ ಉತ್ಸಾಹದಿಂದ, ಔನ್ನತ್ಯದಿಂದ ಕೂಡಿ ಭಾವನಾತ್ಮಕ



ಉತ್ಕಟತೆಯಲ್ಲ; ಮಾನಸಿಕ ನಂಬಿಕೆ, ಪಂಥ ಅಥವಾ ನಂಬಿಕೆ, ಭಾವನಾತ್ಮಕ ಅಭೀಪ್ಸೆ, ನಡತೆಯಲ್ಲಿ ಧಾರ್ಮಿಕ ಇಲ್ಲವೆ ನೈತಿಕ ಸೂತ್ರಕ್ಕನುಗುಣವಾದ ಕ್ರಮಬದ್ಧತೆ ಇವೆಲ್ಲ ಆಧ್ಯಾತ್ಮಿಕತೆಗೆ ಹಾಗೂ ಆಧ್ಯಾತ್ಮಿಕ ಅನುಭವಕ್ಕೆ ಸೇರಿದ ವಿಷಯಗಳಲ್ಲ.

ಈ ವಿಷಯಗಳು ಮನಸ್ಸಿಗೆ, ಜೀವನಕ್ಕೆ ಅಸಾಧಾರಣ ಮೌಲ್ಯವನ್ನು ಹೊಂದಿರುತ್ತವೆ, ಆಧ್ಯಾತ್ಮಿಕ ಉತ್ಕ್ರಾಂತಿಗಾಗಿಯೇ ಸ್ವಭಾವವನ್ನು ಶುದ್ಧೀಕರಣ ಗೊಳಿಸುವ ಇಲ್ಲವೆ ಅದಕ್ಕೆ ಯೋಗ್ಯರೂಪಕೊಡುವ ತಯಾರಿ ಹಂತದ ಚಲನೆಗಳೆಂದು ಮೌಲ್ಯವನ್ನು ಹೊಂದಿವೆ. – ಇದು ಆಧ್ಯಾತ್ಮಿಕ ಸಿದ್ಧಿಯ ಹಾಗೂ ಅನುಭವದ ಪ್ರಾರಂಭ, ಬದಲಾವಣೆ ಇನ್ನೂ ಅಲ್ಲಿರುವುದಿಲ್ಲ.

ಆಧ್ಯಾತ್ಮಿಕತೆ ಸಾರದಲ್ಲಿ ನಮ್ಮ ಸತ್ತೆಯ ಆಂತರಿಕ ನೈಜತೆ, ಆತ್ಮ ಇಲ್ಲವೆ ಜೀವದ ಬಗ್ಗೆ ಎಚ್ಚರಿಕೆ ತಂದುಕೊಳ್ಳುವುದಾಗಿದೆ, ಆ ಆತ್ಮ ನಮ್ಮ ಮನಸ್ಸು, ಪ್ರಾಣ ಹಾಗೂ ದೇಹಗಳಿಂದ ಭಿನ್ನವಾಗಿರುತ್ತದೆ, ಅದು ತಿಳಿದುಕೊಳ್ಳುವುದಕ್ಕೆ ಭಾವನೆಗೆ ತಂದುಕೊಳ್ಳುವುದಕ್ಕೆ, ಅದಾಗುವುದಕ್ಕೆ ಶ್ರೇಷ್ಠತರ ದೈವೀ ನೈಜತೆಯೊಂದಿಗೆ ಸಂಪರ್ಕದಲ್ಲಿ ಬರುವುದಕ್ಕೆ ಆಂತರಿಕ ಅಭೀಪ್ಸೆಯಾಗಿರುತ್ತದೆ. ಆ ದೈವೀ ನೈಜತೆ ಆಚೆಗಿರುತ್ತದೆ, ವಿಶ್ವವನ್ನು ವ್ಯಾಪಿಸಿರುತ್ತದೆ ಮತ್ತು ನಮ್ಮ ಸತ್ತೆಯಲ್ಲೂ ವಾಸಿಸುತ್ತದೆ. ಆ ದೈವೀ ನೈಜತೆಯೊಂದಿಗೆ ಸಂಸರ್ಗದಲ್ಲಿರುವುದು, ಏಕತೆಯಲ್ಲಿರುವುದು ಮತ್ತು ನಮ್ಮ ಇಡೀ ಸತ್ತೆ, ಅಭೀಪ್ಸೆಯ ಪರಿಣಾಮವೆಂದಾಗಿ, ದೈವೀ ಸತ್ತೆಯತ್ತ ಹೊರಳಿಕೊಂಡಿರುವುದು, ಮಾರ್ಪಾಡಿಗೊಳಗಾಗುವುದು ಮತ್ತು ಪರಿವರ್ತನೆ ಗೊಳಗಾಗುವುದು, ಆ ಸಂಪರ್ಕ, ಏಕತೆ ಬೆಳವಣಿಗೆ ಇಲ್ಲವೆ ಹೊಸ ಸಂಭೂತಿಯಲ್ಲಿ ಇಲ್ಲವೆ ಹೊಸ ಸತ್ತೆಯಲ್ಲಿ ಎಚ್ಚತ್ತುಕೊಳ್ಳುವುದು, ಹೊಸ ಆತ್ಮವನ್ನು ಇಲ್ಲವೆ ಹೊಸ ಸ್ವಭಾವವನ್ನು ಹೊಂದಿರುವುದು ಆಧ್ಯಾತ್ಮಿಕತೆಯಾಗಿದೆ.

**(19/857)** – **ಶ್ರೀ ಅರವಿಂದರು**

*

## ಸಾಮಾನ್ಯ ಜೀವನ, ಧಾರ್ಮಿಕ ಜೀವನ, ಆಧ್ಯಾತ್ಮಿಕ ಜೀವನ

ಆಧ್ಯಾತ್ಮಿಕ ಜೀವನ, ಧಾರ್ಮಿಕ ಜೀವನ ಮತ್ತು ನೈತಿಕತೆ ಒಂದು ಭಾಗವಾಗಿರುವ ಸಾಮಾನ್ಯ ಜೀವನ ಇವು ಮೂರು ಭಿನ್ನವಾದ ವಿಷಯಗಳು, ಇವುಗಳನ್ನು ಕುರಿತು ಗೊಂದಲಕ್ಕೀಡಾಗಬಾರದು. ಸಾಮಾನ್ಯ ಜೀವನ ಸರ್ವಸಾಮಾನ್ಯ ಮಾನವ ಪ್ರಜ್ಞೆಯದಾಗಿದ್ದು ತನ್ನದೇ ಆತ್ಮದಿಂದ, ಭಗವಂತನಿಂದ

ಪ್ರತ್ಯೇಕಗೊಂಡಂತಹದು ಮತ್ತು ಮನಸ್ಸು, ಪ್ರಾಣ, ದೇಹ ಇವುಗಳ ಸಾಮಾನ್ಯ ರೂಢಿಗಳಿಂದ ನಡೆಯುವಂತಹದು, ಆ ರೂಢಿಗಳು ಅವಿದ್ಯೆಯ ನಿಯಮಗಳಾಗಿರುತ್ತವೆ.

ಧಾರ್ಮಿಕ ಜೀವನ ಅದೇ ಅಜ್ಞಾನೀ ಮಾನವ ಪ್ರಜ್ಞೆಯ ಚಲನೆಯಾಗಿದ್ದು ಪೃಥ್ವಿಯಿಂದ ಭಗವಂತನತ್ತ ಹೊರಳುತ್ತಿರುವ ಇಲ್ಲವೆ ಹೊರಳಲು ಪ್ರಯತ್ನಿಸುತ್ತಿರುವ ಚಲನೆ, ಆದರೆ ಅದಿನ್ನೂ ಜ್ಞಾನವಿಲ್ಲದೆ ಇದ್ದದ್ದು, ಯಾವುದೋ ಧಾರ್ಮಿಕ ಪಂಥ ಇಲ್ಲವೆ ಒಳಪಂಗಡದ ಧರ್ಮಾಂಧತೆಯ ಮತತತ್ವಗಳಿಂದ ಮುನ್ನಡೆಸಲಾಗಿದ್ದು ಆಗಿರುತ್ತದೆ. ಆ ಮತತತ್ವಗಳು ಪೃಥ್ವಿ–ಪ್ರಜ್ಞೆಯಿಂದ ಆಚೆಗಿರುವ ಸ್ವರ್ಗದತ್ತ ಸಾಗುವುದಕ್ಕೆ ಮಾರ್ಗ ಕಂಡುಹಿಡಿದಿದ್ದೇವೆ ಎಂದು ಹಕ್ಕು ಸಾಧಿಸುತ್ತವೆ. ಆಧ್ಯಾತ್ಮಿಕ ಜೀವನವನ್ನು ಸಮೀಪಿಸುವುದಕ್ಕೆ ಧಾರ್ಮಿಕ ಜೀವನ ಮೊದಲ ಹೆಜ್ಜೆಯಾಗಿರಬಹುದು, ಆದರೆ ಬಹಳಷ್ಟು ಸಲ ಅದು ಕೇವಲ ವೃತಾಚರಣೆಗಳಲ್ಲಿ, ಸಮಾರಂಭಗಳು ಹಾಗೂ ಅವುಗಳ ಆಚರಣೆಗಳಲ್ಲಿ, ಇಲ್ಲವೆ ಯಾವ ಫಲಿತಾಂಶ ಕಾಣದ ನಿರ್ಧಾರಿತ ವಿಚಾರಗಳು ಹಾಗೂ ರೂಪಗಳಲ್ಲಿ ಸುತ್ತು ಹೊಡೆಯುವುದಾಗಿರುತ್ತದೆ.

ತದ್ವಿರುದ್ಧವಾಗಿ ಆಧ್ಯಾತ್ಮಿಕ ಜೀವನ ನೇರವಾಗಿ ಪ್ರಜ್ಞೆಯ ಬದಲಾವಣೆಯ ಮೂಲಕ ಮುಂದೆ ಸಾಗುತ್ತದೆ, ಆ ಬದಲಾವಣೆ ಅಜ್ಞಾನದಿಂದ ಮತ್ತು ತನ್ನ ನಿಜವಾದ ಆತ್ಮ ಹಾಗೂ ಭಗವಂತನಿಂದ ಪ್ರತ್ಯೇಕಗೊಂಡ ಸಾಮಾನ್ಯ ಪ್ರಜ್ಞೆಯಿಂದ ಶ್ರೇಷ್ಠತರ ಪ್ರಜ್ಞೆಯತ್ತ ಸಾಗುವುದಾಗಿರುತ್ತದೆ. ಆ ಶ್ರೇಷ್ಠತರ ಪ್ರಜ್ಞೆಯಲ್ಲಿ ಮನುಷ್ಯ ತನ್ನ ನಿಜವಾದ ಸತ್ತೆಯನ್ನು ಕಂಡುಕೊಳ್ಳುತ್ತಾನೆ ಮತ್ತು ಮೊದಲು ಭಗವಂತನೊಡನೆ ನೇರ ಮತ್ತು ಜೀವಂತ ಸಂಪರ್ಕದಲ್ಲಿ ಬರುತ್ತಾನೆ, ನಂತರ ಭಗವಂತನೊಡನೆ ಏಕತೆ ಪಡೆಯುತ್ತಾನೆ. ಆಧ್ಯಾತ್ಮಿಕ ಅನ್ವೇಷಕನಿಗೆ ಪ್ರಜ್ಞೆಯ ಈ ಬದಲಾವಣೆ ಅವನು ಅರಸುವ ಏಕೈಕ ವಿಷಯವಾಗಿದ್ದು ಉಳಿದದ್ದಾವುದೂ ಮುಖ್ಯವಾಗಿರುವುದಿಲ್ಲ.

ನೈತಿಕತೆ ಸಾಮಾನ್ಯ ಜೀವನದ ಒಂದು ಭಾಗ, ಕೆಲವೊಂದು ಮಾನಸಿಕ ನಿಯಮಗಳಿಂದ ಬಾಹ್ಯ ಜೀವನದ ಮೇಲೆ ಅಧಿಪತ್ಯ ಕೈಕೊಳ್ಳುವುದಕ್ಕೆ ಒಂದು ಪ್ರಯತ್ನ ಇಲ್ಲವೆ ಈ ನಿಯಮಗಳ ಮೂಲಕ ಯಾವುದೊಂದು ಮಾನವ ಆದರ್ಶದ ಪ್ರತೀಕದಲ್ಲಿ ಚಾರಿತ್ರ್ಯವನ್ನು ರೂಪಿಸುವುದಾಗಿರುತ್ತದೆ. ಆಧ್ಯಾತ್ಮಿಕ ಜೀವನ ಮನಸ್ಸಿನಾಚೆಗೆ ಸಾಗಿ ಹೋಗುತ್ತದೆ, ದಿವ್ಯಾತ್ಮದ ಹೆಚ್ಚು ಆಳವಾದ ಪ್ರಜ್ಞೆಯಲ್ಲಿ ಪ್ರವೇಶಿಸುತ್ತದೆ ಮತ್ತು ದಿವ್ಯಾತ್ಮದ ಸತ್ಯದ ಆಧಾರದ ಮೇಲೆ ಕಾರ್ಯ ಕೈಕೊಳ್ಳುತ್ತದೆ. ನೈತಿಕ ಜೀವನ ಮತ್ತು ಭಗವಂತನನ್ನು ಸಿದ್ಧಿಸಿಕೊಳ್ಳುವುದರ ಆವಶ್ಯಕತೆ ಇವುಗಳನ್ನು



ಕುರಿತಾದ ಪ್ರಶ್ನೆಯ ಬಗ್ಗೆ ಹೇಳುವುದಾದರೆ, ಅದು ಜೀವನದ ಉದ್ದೇಶಗಳನ್ನು ನೆರವೇರಿಸಿಕೊಳ್ಳುವುದರ ಅರ್ಥವೇನು ಎಂಬುದರ ಮೇಲೆ ಅವಲಂಬಿಸಿರುತ್ತದೆ. ಆಧ್ಯಾತ್ಮಿಕ ಜೀವನದಲ್ಲಿ ಪ್ರವೇಶ ಪಡೆಯುವುದು ಅದರ ಒಂದು ಭಾಗವಾಗಿದ್ದರೆ, ಕೇವಲ ನೈತಿಕತೆ ಅದನ್ನು ಕೊಡಲಾರದು.

ಆ ಪತ್ರದಲ್ಲಿ ಹೇಳಲಾದ ಪೂಜಾ ಪದ್ಧತಿ ಧಾರ್ಮಿಕ ಜೀವನಕ್ಕೆ ಸೇರಿದ್ದಾಗಿದೆ. ಅದನ್ನು ಸರಿಯಾಗಿ, ಆಳಾತಿ ಆಳದ ಧಾರ್ಮಿಕ ಮನೋಭಾವದಿಂದ ಕೈಕೊಂಡರೆ ಮನಸ್ಸು ಮತ್ತು ಹೃದಯಗಳನ್ನು ಆಧ್ಯಾತ್ಮಿಕ ಜೀವನಕ್ಕೆ ಸ್ವಲ್ಪಮಟ್ಟಿಗೆ ತಯಾರು ಮಾಡಬಹುದು, ಆದರೆ ಅದಕ್ಕೂ ಹೆಚ್ಚೇನಿಲ್ಲ. ಆದರೆ ಪೂಜೆಯನ್ನು ಧ್ಯಾನದ ಒಂದು ಭಾಗವೆಂದು ಇಲ್ಲವೆ ಆಧ್ಯಾತ್ಮಿಕ ನೈಜತೆಗಾಗಿ ಮತ್ತು ಆಧ್ಯಾತ್ಮಿಕ ಪ್ರಜ್ಞೆಗಾಗಿ ಮತ್ತು ಭಗವಂತನೊಡನೆ ಸಂಪರ್ಕವನ್ನು, ಏಕತೆಯನ್ನು ಪಡೆಯುವುದಕ್ಕೆ ಹಾತೊರೆತವಿರುವ ಅಭೀಪ್ಸೆಯಿಂದ ಕೈಕೊಂಡರೆ, ಆಗ ಅದು ಆಧ್ಯಾತ್ಮಿಕವಾಗಿ ಪರಿಣಾಮಕಾರಿಯಾಗಬಹುದು.

ಆಧ್ಯಾತ್ಮಿಕ ಬದಲಾವಣೆಗಾಗಿ ನಿಮ್ಮ ಹೃದಯದಲ್ಲಿ ಹಾಗೂ ಆತ್ಮದಲ್ಲಿ ನಿಷ್ಕಪಟವಾದ ಅಭೀಪ್ಸೆ ಇದ್ದರೆ, ಆಗ ಮಾರ್ಗವನ್ನು ಮತ್ತು ಮಾರ್ಗದರ್ಶಕನನ್ನು ಕಂಡುಕೊಳ್ಳುವಿರಿ. ಕೇವಲ ಮಾನಸಿಕ ಅರಸುವಿಕೆ ಹಾಗೂ ಪ್ರಶ್ನಿಸುವಿಕೆ ದಿವ್ಯಾತ್ಮದ ದ್ವಾರಗಳನ್ನು ತೆರೆದಿರಿಸುವುದಕ್ಕೆ ಸಾಕಾಗುವುದಿಲ್ಲ.

*

ಎಲ್ಲ ಧರ್ಮ ಯಾವುದೋ ಒಂದು ದೈವೀ ಸಾಮರ್ಥ್ಯ ಇಲ್ಲವೆ ನಮ್ಮ ಸೀಮಿತ ಮತ್ತು ಮರ್ತ್ಯ ಆತ್ಮಗಳಿಗಿಂತ ಶ್ರೇಷ್ಠತರವಾದ, ಉಚ್ಚತರವಾದ ಅಸ್ತಿತ್ವದ ಕಲ್ಪನೆಯಿಂದ ಪ್ರಾರಂಭವಾಗುತ್ತದೆ, ಆ ಸಾಮರ್ಥ್ಯಕ್ಕಾಗಿ ಪೂಜೆಯ ಒಂದು ಯೋಚನೆ ಹಾಗೂ ಕ್ರಿಯೆ ಇರುತ್ತದೆ, ಅದರ ಸಂಕಲ್ಪಕ್ಕೆ, ನಿಯಮಗಳಿಗೆ ಇಲ್ಲವೆ ಒತ್ತಾಯದ ಬೇಡಿಕೆಗಳಿಗೆ ವಿಧೇಯತೆ ಇರುತ್ತದೆ. ಆದರೆ ಧರ್ಮ ಅದರ ಪ್ರಾರಂಭದ ಸ್ಥಿತಿಗಳಲ್ಲಿ, ಹೀಗೆ ಕಲ್ಪಿಸಿಕೊಂಡ, ಪೂಜಿಸುವ, ವಿಧೇಯತೆ ಬೇಡುವ ಸಾಮರ್ಥ್ಯ ಹಾಗೂ ಪೂಜಿಸುವವನ ನಡುವೆ ಅಳತೆಗೆ ನಿಲುಕದ ಕಂದರವನ್ನು ಇರಿಸುತ್ತದೆ, ಯೋಗ ಅದರ ಪರಾಕಾಷ್ಠೆಯಲ್ಲಿ ಈ ಕಂದರವನ್ನು ತೆಗೆದು ಹಾಕುತ್ತದೆ, ಏಕೆಂದರೆ ಯೋಗ ಏಕತೆಯಾಗಿದೆ. ನಾವು ಅದರೊಡನೆ (ಆ ದೈವೀ ಸಾಮರ್ಥ್ಯದೊಡನೆ) ಜ್ಞಾನದ ಮೂಲಕ ಏಕತೆಯನ್ನು ತಲುಪುತ್ತೇವೆ, ಏಕೆಂದರೆ ಅದರ ಬಗೆಗಿನ ಮೊದಲ ಮಬ್ಬಾದ ಕಲ್ಪನೆಗಳು ಸ್ಪಷ್ಟವಾಗುತ್ತವೆ, ಭವ್ಯವಾಗುತ್ತವೆ

ಹೆಚ್ಚಿನ ಆಳವಿರುವಂತಹವಾಗುತ್ತವೆ, ಅದು ನಮ್ಮದೇ ಅತ್ಯುಚ್ಚ ಮೂಲವೆಂದು ನಮ್ಮ ಸತ್ತೆಯ ಪೋಷಕನೆಂದು, ಅದರತ್ತ ಚಲಿಸುತ್ತದೆ ಎಂದು ಗುರುತಿಸುವತ್ತ ಬರುತ್ತೇವೆ. ಕರ್ಮಗಳ ಮೂಲಕ ಅದರೊಡನೆ ಏಕತೆಯತ್ತ ತಲುಪುತ್ತೇವೆ, ಏಕೆಂದರೆ ಕೇವಲ ವಿಧೇಯರಾಗಿರುವುದರ ಮೂಲಕ ನಮ್ಮ ಸಂಕಲ್ಪವನ್ನು ಅದರ ದೈವೀ ಸಂಕಲ್ಪದೊಡನೆ ಏಕವಾಗಿಸುವತ್ತ ಬರುತ್ತೇವೆ, ಕೇವಲ ಮೂಲ ಹಾಗೂ ಆದರ್ಶವಾದ ಈ ದೈವೀ ಸಾಮರ್ಥ್ಯದೊಡನೆ ಗುರುತಿಸಿಕೊಳ್ಳುವ ಪ್ರಮಾಣದಲ್ಲಿ ನಮ್ಮ ಸಂಕಲ್ಪ ಪರಿಪೂರ್ಣ ಹಾಗೂ ದೈವಿಕವಾಗಬಲ್ಲದು. ಪೂಜೆಯ ಮೂಲಕ ಕೂಡ ಅದರೊಡನೆ ಏಕತೆಯುಂಟಾಗುತ್ತದೆ, ದೂರದಿಂದ ಕೈಕೊಂಡ ಪೂಜೆಯ ಯೋಚನೆ ಹಾಗೂ ಕ್ರಿಯೆ ಹತ್ತಿರದ ಆರಾಧನೆಯಾಗುವ ಆವಶ್ಯಕತೆಯಾಗಿ ಅಭಿವೃದ್ಧಿ ಹೊಂದುತ್ತದೆ ಮತ್ತು ಇದು ಪ್ರೇಮದ ಆವಶ್ಯಕತೆಯನ್ನುಂಟು ಮಾಡುತ್ತದೆ ಮತ್ತು ಪ್ರೇಮದ ಪರಾಕಾಷ್ಠೆ ಪ್ರೇಮಪಾತ್ರವಾದುದರೊಂದಿಗೆ ಏಕತೆ ಪಡೆಯುವುದಾಗಿರುತ್ತದೆ. ...

ಧರ್ಮಕ್ಕೆ ಎರಡು ಮಗ್ಗುಲುಗಳಿವೆ, ಒಂದು ನಿಜವಾದ ಧರ್ಮ, ಇನ್ನೊಂದು ಧಾರ್ಮಿಕವಾದ (religionism). ನಿಜವಾದ ಧರ್ಮ ಆಧ್ಯಾತ್ಮಿಕವಾಗಿರುತ್ತದೆ. ಅದು ಬುದ್ಧಿಯಾಚೆ, ಸೌಂದರ್ಯಾಭಿರುಚಿಯ ನೈತಿಕ ಹಾಗೂ ವ್ಯಾವಹಾರಿಕ ಸತ್ತೆಯಾಚೆ ಆತ್ಮದಲ್ಲಿ ಜೀವಿಸುವುದನ್ನು ಅನ್ವೇಷಿಸುತ್ತದೆ ಮತ್ತು ಆತ್ಮದ ಉಚ್ಚತರ ಪ್ರಕಾಶ ಹಾಗೂ ನಿಯಮದಿಂದ ನಮ್ಮ ಸತ್ತೆಯ ಈ ಅಂಗಗಳಿಗೆ ತಿಳಿವಳಿಕೆ ನೀಡುತ್ತದೆ ಮತ್ತು ಅವುಗಳ ಮೇಲೆ ಆಳಿಕೆ ನಡೆಸುತ್ತದೆ. ಇದಕ್ಕೆ ತದ್ವಿರುದ್ಧವಾಗಿ ಧಾರ್ಮಿಕವಾದ ನಿಮ್ನತರ ಅಂಗಗಳ ಸಂಕುಚಿತ ಧಾರ್ಮಿಕ ಪರವಶತೆಯಲ್ಲಿ ಭದ್ರವಾಗಿ ನಿಲ್ಲುತ್ತದೆ, ಇಲ್ಲವೆ ಬೌದ್ಧಿಕ ಧರ್ಮ ತತ್ವಗಳ, ರೂಪಗಳ ಹಾಗೂ ಸಮಾರಂಭಗಳ ನಿಶ್ಚಿತ ಹಾಗೂ ಬಿಗುವಿನ ನೈತಿಕ ನಿಯಮಗಳ ಮೇಲೆ ಹಾಗೂ ಧಾರ್ಮಿಕ–ರಾಜಕೀಯ ಇಲ್ಲವೆ ಧಾರ್ಮಿಕ–ಸಾಮಾಜಿಕ ವ್ಯವಸ್ಥೆಯ ಮೇಲೆ ಒತ್ತು ನೀಡುತ್ತದೆ. ಇವು ಒಟ್ಟಿನಲ್ಲಿ ನಿರ್ಲಕ್ಷಿಸಬೇಕಾದ ವಿಷಯಗಳೆಂದೇನೂ ಅಲ್ಲ ಮತ್ತು ಯೋಗ್ಯವಲ್ಲದವು ಇಲ್ಲವೆ ಅನವಶ್ಯಕವಾಗಿರಬೇಕೆಂದೇನೂ ಇಲ್ಲ, ಇಲ್ಲವೆ ಆಧ್ಯಾತ್ಮಿಕ ಧರ್ಮ ರೂಪಗಳ, ಸಮಾರಂಭಗಳ, ಪಂಥಗಳ ಇಲ್ಲವೆ ಪದ್ಧತಿಗಳ ಸಹಾಯವನ್ನು ಕಡೆಗಣಿಸಬೇಕಾಗಿಲ್ಲ. ತದ್ವಿರುದ್ಧವಾಗಿ ಮನುಷ್ಯನಿಗೆ ಅವೆಲ್ಲವೂ ಅವಶ್ಯವಾಗಿವೆ ಏಕೆಂದರೆ ನಿಮ್ನತರ ಅಂಗಗಳನ್ನು, ಅವು ಆತ್ಮದ ಬಗ್ಗೆ ನೇರವಾಗಿ ಭಾವನೆ ತಂದುಕೊಳ್ಳಲು ಶಕ್ತವಾಗುವ ಮತ್ತು ಅದರ ನಿಯಮಕ್ಕೆ ವಿಧೇಯವಾಗುವ ಮೊದಲು ಅವುಗಳನ್ನು ಘನತೆಗೇರಿಸಬೇಕಾಗುತ್ತದೆ, ಮೇಲಕ್ಕೇರಿಸಬೇಕಾಗುತ್ತದೆ,



ಸೌಂದರ್ಯಾಭಿರುಚಿಯ ಮನೋಧರ್ಮಕ್ಕೆ ಇಲ್ಲವೆ ತರ್ಕಮಾಡಲು ಶಕ್ತವಾಗದ (infrarational) ಸತ್ತೆಗೆ ಅವು ಆಂತರಿಕ ಜೀವನದತ್ತ ಹೊರಳುವುದಕ್ಕೆ ಮನುಷ್ಯನ ಪ್ರಾಣಿಕ ಸ್ವಭಾವದಿಂದ ರೂಪಿಸಿದ ನೈತಿಕ ನಿಯಮಾವಳಿ ಬೇಕಾಗುತ್ತದೆ. ಆದರೆ ಈ ವಿಷಯಗಳು ನೆರವಾಗುವಂತಹವು, ಆಧಾರಗಳು, ಸಾರಭೂತವಾದವುಗಳಲ್ಲ; ನಿಖರವಾಗಿ ಏಕೆಂದರೆ ಅವು ತಾರ್ಕಿಕ ಹಾಗೂ ತರ್ಕಮಾಡಲಾಗದವರ ಕ್ಷೇತ್ರಕ್ಕೆ ಸೇರಿರುತ್ತವೆ, ಅವು ಅದಕ್ಕಿಂತ ಹೆಚ್ಚಿನವೇನೂ ಆಗಲು ಸಾಧ್ಯವಿಲ್ಲ ಮತ್ತು ಅವುಗಳ ಮೇಲೆ ಕುರುಡಾಗಿ ಒತ್ತಾಯ ತಂದರೆ, ತರ್ಕಾತೀತವಾದ ಪ್ರಕಾಶಕ್ಕೆ ಅಡೆತಡೆ ಉಂಟುಮಾಡಬಹುದು.

**(22/137–38, 21/528, 15/166–67)** **– ಶ್ರೀ ಅರವಿಂದರು**

*

## ಧರ್ಮವೆಂದರೇನು?

ಮನುಷ್ಯ ತನ್ನಿಂದಾಚೆಗೆ ಮತ್ತು ಸ್ಪಷ್ಟವಾಗಿರುವ ಮತ್ತು ಪ್ರಾಪಂಚಿಕ ವಾಸ್ತವತೆಗಳಿರುವ ಅಸ್ತಿತ್ವದಿಂದಾಚೆಗೆ ಸಾಗಿಹೋಗುವುದಕ್ಕಾಗಿ ಕೈಕೊಂಡ ಪ್ರಥಮ ಪ್ರಯತ್ನವೇ ಧರ್ಮ. ಅವಶ್ಯವಾದ ಆ ಪ್ರಯತ್ನದ ಕಾರ್ಯ ಅನಂತಕ್ಕೆ ಅಧೀನವಾಗಿರುವ ಭಾವನೆಯನ್ನು ತನಗೆ ದೃಢೀಕರಿಸಿಕೊಳ್ಳುವುದಾಗಿದೆ ಮತ್ತು ನೈಜವಾದದ್ದನ್ನಾಗಿ ಮಾಡಿಕೊಳ್ಳುವುದಾಗಿದೆ, ಆ ಅನಂತದ ಮೇಲೆ ಅವನ ಭೌತಿಕ ಮತ್ತು ಮಾನಸಿಕ ಸತ್ತೆ ಅವಲಂಬಿಸಿರುವುದನ್ನು ಮತ್ತು ಅವನ ಆತ್ಮದ ಅಭೀಪ್ಸೆ ಅದರ ಸಾನ್ನಿಧ್ಯದಲ್ಲಿ ಬರುವುದಕ್ಕಾಗಿ ಮತ್ತು ಆ ಸಾನ್ನಿಧ್ಯದ ಸಂಪರ್ಕದಲ್ಲಿರುವುದಕ್ಕಾಗಿ ಇದೆಯೆಂಬುದನ್ನು ಕಂಡುಕೊಳ್ಳುವುದಾಗಿದೆ. ಅದರ ಕಾರ್ಯ ವಿಧಾನವೆಂದರೆ, ಅವನು ಯಾವಾಗಲೂ ಕನಸು ಕಾಣುತ್ತಿರುವ ಸಾಧ್ಯತೆಯೊಂದರ ಬಗ್ಗೆ ಭರವಸೆ ದೊರಕಿಸುವುದಾಗಿದೆ, ಆದರೆ ಅವನ ಸಾಮಾನ್ಯ ಜೀವನ ಆ ಸಾಧ್ಯತೆಯ ಬಗ್ಗೆ ಯಾವ ಭರವಸೆಯನ್ನೂ ಕೊಡುತ್ತಿಲ್ಲ. ಆ ಸಾಧ್ಯತೆಯೆಂದರೆ ತನ್ನನ್ನು ಮೀರಿ ಆಚೆಗೆ ಹೋಗುವ, ದೈಹಿಕ ಜೀವನದಿಂದ ಮತ್ತು ಮರ್ತ್ಯತೆಯಿಂದ ಅಮರ ಜೀವನದಲ್ಲಿ ಹಾಗೂ ಆಧ್ಯಾತ್ಮಿಕ ಅಸ್ತಿತ್ವದಲ್ಲಿ ಬೆಳೆಯುವುದಾಗಿದೆ. ಆ ಸಾಧ್ಯತೆ ಅವನೀಗ ಇರಬೇಕಾಗಿ ಬಂದ ಲೋಕಕ್ಕಿಂತ ಭಿನ್ನವಾದ ಲೋಕಗಳು ಇಲ್ಲವೆ ಸ್ತರಗಳಿವೆ ಎಂಬ ಭಾವನೆಯನ್ನು ಅವನಲ್ಲಿ ದೃಢೀಕರಿಸುತ್ತದೆ, ಆ ಲೋಕಗಳಲ್ಲಿ ಮರ್ತ್ಯತೆ, ದುಷ್ಟವಾದದ್ದಕ್ಕೆ ಅಧೀನತೆ ಇವು ಸ್ವಾಭಾವಿಕ ಸ್ಥಿತಿಗಳಾಗಿರುವುದಿಲ್ಲ, ಆದರೆ ಅದಕ್ಕೂ ಹೆಚ್ಚಾಗಿ ಅಮರತ್ವದ

ದಿವ್ಯಾನಂದ ಶಾಶ್ವತ ಸ್ಥಿತಿಯಾಗಿರುತ್ತದೆ. ಪ್ರಾಸಂಗಿಕವಾಗಿ ಅದು ಅವನಿಗೆ ಮರ್ತ್ಯ ಜೀವನದ ನಿಯಮವೊಂದನ್ನು ಕೊಡುತ್ತದೆ, ಅದರ ಮೂಲಕ ಅವನು ಅಮರತ್ವಕ್ಕಾಗಿ ತಯಾರಿ ಮಾಡಿಕೊಳ್ಳುವನು. ಅವನೊಂದು ಆತ್ಮ, ದೇಹವಲ್ಲ. ಅವನ ಐಹಿಕ ಜೀವನ ಒಂದು ಸಾಧನವಾಗಿದೆ, ಅದರ ಮೂಲಕ ಅವನು ತನ್ನ ಆಧ್ಯಾತ್ಮಿಕ ಸತ್ತೆಯ ಭವಿಷ್ಯತ್ತಿನ ಸ್ಥಿತಿಗಳನ್ನು ನಿರ್ಧರಿಸುತ್ತಾನೆ. ಇದಿಷ್ಟು ಎಲ್ಲ ಧರ್ಮಗಳಿಗೆ ಸಾಮಾನ್ಯವಾಗಿರುವ ವಿಷಯ. ಇದರಾಚೆಗೆ ಆ ಧರ್ಮಗಳಿಂದ ಯಾವುದೇ ಬಗೆಯ ದೃಢೀಕರಿಸಿದ ನಿಶ್ಚಿತತೆಯನ್ನು ನಾವು ಪಡೆಯುವುದಿಲ್ಲ. ಆ ಧರ್ಮಗಳ ಧ್ವನಿಗಳು ಭಿನ್ನವಾಗಿರುತ್ತವೆ, ಕೆಲವು ಧರ್ಮಗಳು ಹೇಳುತ್ತವೆ: ಪೃಥ್ವಿಯ ಮೇಲಿರುವ ಒಂದು ಜೀವನ ಮಾತ್ರ ನಮಗಿದೆ, ಅದರಲ್ಲಿ ನಮ್ಮ ಭವಿಷ್ಯತ್ತಿನ ಅಸ್ತಿತ್ವವನ್ನು ನಿರ್ಧರಿಸಬೇಕಾಗಿದೆ ಎಂದು, ಅವು ನಮ್ಮ ಆತ್ಮದ ಗತಕಾಲದ ಅಮರತ್ವವನ್ನು ನಿರಾಕರಿಸುತ್ತವೆ, ಅದರ ಭವಿಷ್ಯತ್ತಿನ ಅಮರತ್ವವನ್ನಷ್ಟೇ ದೃಢೀಕರಿಸುತ್ತವೆ. ಸರಿಯಾದ ಮಾರ್ಗದಲ್ಲಿ ನಡೆಯುವುದನ್ನು ತಪ್ಪಿಸಿಕೊಂಡವರಿಗೆ ಶಾಶ್ವತವಾಗಿ ವೇದನೆ ಅನುಭವಿಸಬೇಕಾದ ಭವಿಷ್ಯವಿದೆ ಎಂಬ ನಂಬಲಸಾಧ್ಯವಾದ ಮತತತ್ವದಿಂದ ಹೆದರಿಸುತ್ತವೆ. ಅದು ಹಾಗಿರುವಾಗ ಹೆಚ್ಚು ವಿಶಾಲ ಹಾಗೂ ತರ್ಕಬುದ್ಧಿಯಿರುವ ಮನಸ್ಸಿನವರು ಒಂದರನಂತರ ಒಂದರಂತೆ ಬರುವ ಅಸ್ತಿತ್ವಗಳನ್ನು ದೃಢೀಕರಿಸುತ್ತಾರೆ, ಅವುಗಳ ಮೂಲಕ ಆತ್ಮ ಅನಂತದ ಬಗೆಗಿರುವ ಜ್ಞಾನದಲ್ಲಿ ಬೆಳೆಯುತ್ತದೆ, ಆ ಜ್ಞಾನದಿಂದ ಕಟ್ಟಕಡೆಯ ಸ್ಥಿತಿಯನ್ನು, ಪರಿಪೂರ್ಣತೆಯನ್ನು ದೊರಕಿಸುವ ಭರವಸೆ ದೊರಕುತ್ತದೆ. ಬೇರೆ ಕೆಲವರು ಅನಂತ ನಮಗಿಂತ ಬೇರೆಯಾದ ಸತ್ತೆ, ಅದರೊಡನೆ ನಾವು ವೈಯಕ್ತಿಕ ಸಂಬಂಧ ಹೊಂದಬಹುದೆಂಬ ಚಿತ್ರಣವನ್ನು ನಮ್ಮ ಮುಂದಿರಿಸುತ್ತಾರೆ. ಇನ್ನಿತರರು ಅನಂತ ಅವೈಯಕ್ತಿವಾದ ಅಸ್ತಿತ್ವ, ಅದರಲ್ಲಿ ನಮ್ಮ ಪ್ರತ್ಯೇಕಗೊಂಡ ಅಸ್ತಿತ್ವ ವಿಲೀನವಾಗಬೇಕು ಎಂದು ಹೇಳುತ್ತಾರೆ. ಹಾಗಾಗಿ ಕೆಲವರು ನಮ್ಮ ಗುರಿ ಆಚೆಗಿರುವ ಲೋಕಗಳನ್ನು ಕುರಿತಾಗಿರಬೇಕು, ಅಲ್ಲಿ ನಾವು ಭಗವಂತನ ಸಾನ್ನಿಧ್ಯದಲ್ಲಿ ನೆಲೆಸಬಲ್ಲೆವು ಎಂದು ಹೇಳುತ್ತಾರೆ. ಕೆಲವರು ಅನಂತದಲ್ಲಿ ವಿಲೀನವಾಗುವುದರ ಮೂಲಕ ಜಗತ್ತಿನ ಅಸ್ತಿತ್ವ ನಿಂತು ಹೋಗುವುದನ್ನು ಕುರಿತು ಹೇಳುತ್ತಾರೆ: ಐಹಿಕ ಜೀವನ ಒಂದು ಪರೀಕ್ಷೆ ಇಲ್ಲವೆ ತಾತ್ಕಾಲಿಕ ದುಃಖ ಅಥವಾ ಗರ್ವ, ಅದನ್ನು ಸಹಿಸಿಕೊಳ್ಳಬೇಕು ಇಲ್ಲವೆ ಬಿಟ್ಟುಕೊಡಬೇಕು ಮತ್ತು ನಮ್ಮ ಭರವಸೆಯನ್ನು ಆಚೆಗಿರುವುದರ ಮೇಲೆ ಇರಿಸಬೇಕು ಎಂದು ಹಲವರು ನಮಗೆ ಕರೆ ಕೊಡುತ್ತಾರೆ. ಇನ್ನು ಕೆಲವರಲ್ಲಿ ದಿವ್ಯಾತ್ಮನ ಭವಿಷ್ಯತ್ತಿನಲ್ಲಿಯ ವಿಜಯದ ಬಗ್ಗೆ ಅಸ್ಪಷ್ಟ ಸುಳಿವನ್ನು



ಕಂಡುಕೊಳ್ಳುತ್ತೇವೆ. ಅದು ಪೃಥ್ವಿಯ ಮೇಲೆ ದೇಹದಲ್ಲಿರುವ ದಿವ್ಯಾತ್ಮ, ಅದೂ ಕೂಡ ಮಾನವನ ಸಾಮೂಹಿಕ ಜೀವನದಲ್ಲಿ ಮತ್ತು ಹಾಗಾಗಿ ಕೇವಲ ವ್ಯಕ್ತಿವಿಶಿಷ್ಟತೆಯ ಭರವಸೆ ಮತ್ತು ಅಭೀಪ್ಸೆಯನ್ನಷ್ಟೇ ಅಲ್ಲ, ಆದರೆ ಮಾನವ ಕುಲದ ಏಕಗೊಂಡ ಸಹಾನುಭೂತಿಪರ ಭರವಸೆ ಮತ್ತು ಅಭೀಪ್ಸೆಯನ್ನು ಸಮರ್ಥಿಸಿಕೊಳ್ಳುವಂತಾಗುತ್ತದೆ. ವಾಸ್ತವದಲ್ಲಿ ಧರ್ಮ ಜ್ಞಾನವಲ್ಲ, ಆದರೆ ಅದೊಂದು ನಂಬಿಕೆ ಮತ್ತು ಅಭೀಪ್ಸೆ; ಅದಕ್ಕೆ ಸಮರ್ಥನೆ, ಅಷ್ಟೊಂದು ನಿಖರವಲ್ಲದ ಭವ್ಯ ಆಧ್ಯಾತ್ಮಿಕ ಸತ್ಯಗಳ ಅಂತರ್ಬೋಧೆಯ ಜ್ಞಾನದಿಂದ ಮತ್ತು ಸಾಮಾನ್ಯ ಜೀವನದ ಮೇಲೆ ಏರಿ ಹೋದ ಆತ್ಮಗಳ ವ್ಯಕ್ತಿನಿಷ್ಠ ಅನುಭವಗಳಿಂದ ದೊರೆಯುವುದು, ಆದರೆ ಅದರಲ್ಲೇ ಅದು ಕೇವಲ ಭರವಸೆ ಮತ್ತು ನಂಬಿಕೆಗಳನ್ನು ಕೊಡುತ್ತದೆ, ಅವುಗಳ ಮೂಲಕ ನಾವು ದಿವ್ಯಾತ್ಮದ ಹೆಚ್ಚು ವಿಸ್ತಾರವಾದ ನೈಜತೆಗಳನ್ನು, ಅಡಗಿರುವ ಹರಹುಗಳನ್ನು ನಿಕಟವಾಗಿ ವಶಪಡಿಸಿಕೊಳ್ಳಲು ಅಭೀಪ್ಸೆಪಡುವುದಕ್ಕಾಗಿ ನಮಗೆ ಪ್ರಚೋದನೆ ದೊರಕಬಹುದು. ನಾವು ಯಾವಾಗಲೂ ಧರ್ಮದ ಒಂದು ವಿಶಿಷ್ಟ ಶಿಸ್ತುಪಾಲನೆಯ ಭಿನ್ನ ಸತ್ಯಗಳನ್ನು ಮತ್ತು ಸಂಕೇತಗಳನ್ನು ಬಿಗುವಿನ ಮತ್ತು ಭದ್ರವಾದ ಮತತತ್ವಗಳನ್ನಾಗಿ ಹೊರಳಿಸುವುದು ನಾವಿನ್ನೂ ಆಧ್ಯಾತ್ಮಿಕ ಜ್ಞಾನದಲ್ಲಿ ಶಿಶುಗಳಾಗಿದ್ದೇವೆ ಮತ್ತು ಅನಂತದ ವಿಜ್ಞಾನದಿಂದ ಇನ್ನೂ ಬಹಳ ದೂರದಲ್ಲಿದ್ದೇವೆ ಎಂಬುದರ ಕುರುಹಾಗಿರುತ್ತದೆ.

ಆದಾಗ್ಯೂ ಪ್ರತಿಯೊಂದು ಶ್ರೇಷ್ಠ ಧರ್ಮದ ಹಿಂದೆ ಎಂದರೆ ಅದರ ನಂಬಿಕೆಯ, ಭರವಸೆಯ ಸಂಕೇತಗಳ, ಹರಡಿಕೊಂಡ ಸತ್ಯಗಳ ಮತ್ತು ಸೀಮಿತ ಮತತತ್ವಗಳ ಸರ್ವಜನಗ್ರಾಹ್ಯ ಬದಿಯ ಹಿಂದೆ ಆಂತರಿಕ ಆಧ್ಯಾತ್ಮಿಕ ತರಬೇತು ಮತ್ತು ಜ್ಞಾನೋದಯ ಇವು ದೀಕ್ಷೆ ಪಡೆದವರಿಗೆ ಮಾತ್ರ ಎಂಬ ಬದಿಯೂ ಇದೆ, ಅದರ ಮೂಲಕ ಅಡಗಿದ ಸತ್ಯಗಳನ್ನು ತಿಳಿದುಕೊಳ್ಳುವಂತಾಗಬಹುದು, ಕಾರ್ಯಗತಗೊಳಿಸುವಂತಾಗಬಹುದು ಮತ್ತು ವಶಪಡಿಸಿಕೊಳ್ಳುವಂತಾಗ–ಬಹುದು. ಪ್ರತಿಯೊಂದು ಸರ್ವಜನಗ್ರಾಹ್ಯ ಧರ್ಮದ ಹಿಂದೆ ದೀಕ್ಷೆಪಡೆದವರಿಗಾಗಿ ಯೋಗವಿದೆ, ನಂಬಿಕೆ ಮೊದಲ ಹೆಜ್ಜೆಯಾಗಿರುವ ಅಂತರ್ಬೋಧೆಯ ಜ್ಞಾನವಿದೆ, ಅಭಿವ್ಯಕ್ತಪಡಿಸಲಾಗದ ನೈಜತೆಗಳಿವೆ, ಅದರ ಸಂಕೇತಗಳು ಆಕಾರ ಪಡೆದ ಅಭಿವ್ಯಕ್ತಿಯಾಗಿವೆ.

**(20/439–41)** **– ಶ್ರೀ ಅರವಿಂದರು**

*

## ಪ್ರಶ್ನೋತ್ತರಗಳು

**ಪ್ರಶ್ನೆ :** *ಜಪ, ಪವಿತ್ರ ಗ್ರಂಥಗಳ ಪಠಣ, ಪೂಜೆ ಮಾಡುವುದು ಇತ್ಯಾದಿಗಳು ದೈವೀ ಜೀವನಕ್ಕೆ ಅಭೀಪ್ಸೆಪಡುವುದರ ಕುರುಹಾಗಿರುವುದಿಲ್ಲವೆ? ಅತ್ಯುಚ್ಚ ದೈವೀಸತ್ಯವನ್ನು ತಲುಪುವುದಕ್ಕೆ ಸಹಾಯ ನೀಡುವುದಿಲ್ಲವೆ?*

**ಶ್ರೀ ಅ :** ಅವುಗಳನ್ನು ಕೈಕೊಳ್ಳುವವರ ಮನೋಭಾವದ ಮೇಲೆ ಅದು ಅವಲಂಬಿಸಿರುತ್ತದೆ. ಒಬ್ಬ ಮನುಷ್ಯ ಇದೆಲ್ಲವನ್ನೂ ಮಾಡುತ್ತಿರಬಹುದು, ಆದಾಗ್ಯೂ ಅವನು ಆಧ್ಯಾತ್ಮಿಕನಾಗಿಲ್ಲದವನು, ಅಸುರನೂ ಕೂಡ ಆಗಿರಬಹುದು.

**ಪ್ರಶ್ನೆ :** *ಪವಿತ್ರ ಕ್ಷೇತ್ರಗಳಿಗೆ ಯಾತ್ರೆಗಾಗಿ ಹೋಗುವುದರಲ್ಲಿ, ದೇವ, ದೇವಿಯರನ್ನು ಪೂಜಿಸುವುದರಲ್ಲಿ ಆಧ್ಯಾತ್ಮಿಕವಾದ ಯಾವುದೇ ಬಗೆಯ ಮೌಲ್ಯವಿದೆಯೆ?*

**ಶ್ರೀ ಅ :** ದೈವೀಸತ್ಯಕ್ಕೆ ಅದರ ಯಾವ ಸಂಬಂಧವೂ ಇಲ್ಲ. ಸಾಮಾನ್ಯ ಪ್ರಜ್ಞೆಗೆ ಅದೊಂದು ಧಾರ್ಮಿಕ ಆಚರಣೆ.

**ಪ್ರಶ್ನೆ :** *ವೈಷ್ಣವರಲ್ಲಿ ಸಾಮಾನ್ಯವಾಗಿ ಕಂಡುಬರುವ ಸಂಕೀರ್ತನಗಳಿಂದ ಆಧ್ಯಾತ್ಮಿಕ ಪ್ರಯೋಜನವಿದೆಯೆ?*

**ಶ್ರೀ ಅ :** ಅದಕ್ಕೆ, ವಿಶೇಷವಾಗಿ ಪ್ರಾಣಿಕ ಭಾಗದಲ್ಲಿ, ಭಕ್ತಿಯನ್ನು ಹೆಚ್ಚಿಸುವ ಸಾಮರ್ಥ್ಯವಿದೆ.

**ಪ್ರಶ್ನೆ :** *ನಾನು ಓದಿದ ಕೆಲವು ಧಾರ್ಮಿಕ ಗ್ರಂಥಗಳಲ್ಲಿ ಕಂಡುಕೊಂಡದ್ದು ಹೀಗಿದೆ. "ಒಂದು ಕುಟುಂಬದಲ್ಲಿ ಒಬ್ಬ ಸದಸ್ಯ ಆಧ್ಯಾತ್ಮಿಕ ಸಿದ್ಧಿಯನ್ನು ಪಡೆದನಾದರೆ, ಅವನ ಕುಟುಂಬದ ಇನ್ನುಳಿದ ಎಲ್ಲ ಸದಸ್ಯರೂ ಅವನ ಪ್ರಭಾವದಿಂದ ಮುಕ್ತಿ ಕಂಡುಕೊಳ್ಳುತ್ತಾರೆ." ಇದು ಎಷ್ಟರ ಮಟ್ಟಿಗೆ ಸತ್ಯವಾದದ್ದು?*

**ಶ್ರೀ ಅ :** ಅದು ಸತ್ಯವಲ್ಲ. ಪ್ರತಿಯೊಬ್ಬನಿಗೂ ಅವನದೇ ಅದೃಷ್ಟವಿದೆ, ಅವನು ಒಂದು ಜನ್ಮದಲ್ಲಿ ಯಾವುದೋ ಒಂದು ಕುಟುಂಬದಲ್ಲಿ ಪ್ರವೇಶ ಪಡೆದಿದ್ದು ಕೇವಲ ಪ್ರಾಸಂಗಿಕ.

**ಪ್ರಶ್ನೆ :** *ಪ್ರಾಪಂಚಿಕ ಜೀವನದಲ್ಲಿ ಪೂರ್ತಿಯಾಗಿ ಮಗ್ನರಾಗಿದ್ದು ತೊಂದರೆ, ಅನಾಹುತ ಇತ್ಯಾದಿ ಬಂದಾಗ ಭಗವಂತನನ್ನು ನೆನಪಿಗೆ ತಂದುಕೊಳ್ಳುವವರು ಪೂರ್ತಿಯಾಗಿ ಭಗವಂತನತ್ತ ಹೊರಳುವ ಸಾಧ್ಯತೆ ಇದೆಯೆ?*



**ಶ್ರೀ ಅ :** ಪ್ರತಿಯೊಬ್ಬನಿಗೂ ಭವಿಷ್ಯತ್ತಿನಲ್ಲಿ ಅಂತಹ ಸಾಧ್ಯತೆ ಇದೆ, ನಾಸ್ತಿಕ ಇಲ್ಲವೆ ಭಗವಂತನನ್ನು ಕುರಿತು ಎಂದೂ ಯೋಚಿಸದೆ ಇರುವವನಿಗೂ ಕೂಡ ಅಂತಹ ಸಾಧ್ಯತೆ ಇದೆ.

**ಪ್ರಶ್ನೆ :** *ನಾಸ್ತಿಕನಿಗೂ ಕೂಡ ಇಲ್ಲವೆ ಭಗವಂತನನ್ನು ಕುರಿತು ಯೋಚಿಸದೆ ಇರುವವನಿಗೂ ಭವಿಷ್ಯತ್ತಿನಲ್ಲಿ ಭಗವಂತನತ್ತ ಪೂರ್ತಿಯಾಗಿ ಹೊರಳುವ ಸಾಧ್ಯತೆ ಇರುವಾಗ ಯಾರಾದರೂ ಆಧ್ಯಾತ್ಮಿಕ ಜೀವನದಲ್ಲಿ ಏಕೆ ಪ್ರವೇಶಿಸಬೇಕು ಮತ್ತು ಅದರ ತೊಂದರೆಗಳನ್ನು ಏಕೆ ಎದುರಿಸಬೇಕು?*

**ಶ್ರೀ ಅ :** ಭವಿಷ್ಯತ್ತಿನಲ್ಲಿಯ ಸಾಧ್ಯತೆ ಹತ್ತು ಸಾವಿರ ವರ್ಷಗಳ ನಂತರ ಬರಬಹುದು. ಆಗಲೂ ಕೂಡ ಅದು ಯೋಗದ ಆಚರಣೆ ಕೈಕೊಂಡ ನಂತರವೇ ಬರುವುದು.

**ಪ್ರಶ್ನೆ :** *ಸಾಮಾನ್ಯ ಜನರು ಅನಾಹುತದಂತಹ ಸಮಯದಲ್ಲಿ ದೈವೀ ಕೃಪೆಗೆ ಕರೆಕೊಡುತ್ತಾರೆ, ಆದರೆ ನಂತರ ಅವರು ಭಗವಂತನನ್ನು ಮರೆತು ಬಿಡುತ್ತಾರೆ. ದೈವೀಕೃಪೆ ಜನರ ಜೀವನದಲ್ಲಿ ಕಾರ್ಯಮಾಡುವ ರೀತಿ ಹೀಗೆ ಇರುತ್ತದೆಯೆ?*

**ಶ್ರೀ ಅ :** ಅದು ಆ ರೀತಿ ಇರುವುದು ಸಾಮಾನ್ಯರ ಜೀವನದಲ್ಲಿ ಮಾತ್ರ. ಭಗವಂತನನ್ನು ಅನ್ವೇಷಿಸುವವರಿಗೆ ಅದು ಹಾಗಿರುವುದಿಲ್ಲ. ವಿಶೇಷ ದೈವೀಕೃಪೆ ಭಗವಂತನನ್ನು ಅನ್ವೇಷಿಸುವವರಿಗಾಗಿಯೇ ಇದೆ – ಇತರರಿಗೆ ಅವರ ಕರ್ಮದ ಮೂಲಕ ವಿಶ್ವವ್ಯಾಪಿ ದೈವೀ ಸಂಕಲ್ಪ ಕಾರ್ಯಮಾಡುತ್ತದೆ.

**ಪ್ರಶ್ನೆ :** *ದೈವೀ ಸಂಕಲ್ಪ ಮತ್ತು ದೈವೀಕೃಪೆ ಇವೆರಡರ ನಡುವೆ ಭಿನ್ನತೆ ಇದೆಯೆ? ಅವು ಒಂದೇ ಆಗಿರುವುದಿಲ್ಲವೆ?*

**ಶ್ರೀ ಅ :** ದೈವೀ ಸಂಕಲ್ಪ ಎಲ್ಲ ವಸ್ತು–ವಿಷಯಗಳ ಮೇಲೆ ಕಾರ್ಯ ಕೈಕೊಳ್ಳುತ್ತದೆ – ಅದು ಏನನ್ನಾದರೂ ಕೈಕೊಳ್ಳಬಹುದು. ದೈವೀಕೃಪೆ ಸಹಾಯ ನೀಡುವುದಕ್ಕಾಗಿ ಹಾಗೂ ರಕ್ಷಿಸುವುದಕ್ಕಾಗಿ ಬರುತ್ತದೆ.

**ಪ್ರಶ್ನೆ :** *ಸದ್ಯದ ಜೀವನದಲ್ಲಿ ತನ್ನನ್ನು ಪೂರ್ತಿಯಾಗಿ ಭಗವಂತನಿಗೆ ತೆರೆದಿರಿಸಿಕೊಳ್ಳಲು ಸಾಧ್ಯವಾಗದ ಸಾಧಕನೊಬ್ಬನಿಗೆ ಮುಂದಿನ ಜನ್ಮದಲ್ಲಿ ಅವನು ಯೌಗಿಕ ಜೀವನವನ್ನು ಮತ್ತೆ ಕೈಗೆತ್ತಿಕೊಂಡು ಸಾಧನೆಯನ್ನು ಮುಂದುವರಿಸುವುದು ಸಾಧ್ಯವಾಗುವುದೇ?*

**ಶ್ರೀ ಅ :** ಹೌದು, ಅವನು ಅದನ್ನು ಕೈಗೆತ್ತಿಕೊಳ್ಳುವುದು ಹೆಚ್ಚಿನಮಟ್ಟಿಗೆ ನಿಶ್ಚಿತ, ಆದರೆ ಅದನ್ನು ಪ್ರಾರಂಭಿಸುವ ಮೊದಲು ತನ್ನ ಮಾರ್ಗದಲ್ಲಿ ಬರುವ ವಿರೋಧಿ ಅಂಶಗಳು ಇಲ್ಲವಾಗುವಂತೆ ಮಾಡಬೇಕಾಗುತ್ತದೆ.

**ಪ್ರಶ್ನೆ :** *ತನ್ನ ಜೀವನದಲ್ಲಿ ಭಗವಂತನನ್ನು ಎಂದಿಗೂ ನೆನಪಿಗೆ ತಂದುಕೊಂಡಿರದ ಮನುಷ್ಯ ತನ್ನ ಅಂತ್ಯ ಕಾಲದಲ್ಲಿ, ಪ್ರಾಣ ತ್ಯಜಿಸುವುದಕ್ಕಿಂತ ಮುನ್ನ ಭಗವಂತನ ನಾಮವನ್ನು ಒಮ್ಮೆ ನೆನಪಿಗೆ ತಂದುಕೊಂಡರೆ ಅವನು ಮುಂದಿನ ಜನ್ಮದಲ್ಲಿ ಮುಕ್ತಿ ಪಡೆಯುವನೆಂಬ ನಂಬಿಕೆ ಇದೆ, ಇಂತಹ ನಂಬಿಕೆಯಲ್ಲಿ ಸತ್ಯವೇನಾದರೂ ಇದೆಯೆ?*

**ಶ್ರೀ ಅ :** ಇಲ್ಲ – ಅದೆಲ್ಲ ಮೂಢನಂಬಿಕೆ. ಮುಕ್ತಿ ಅಷ್ಟು ಸುಲಭವಾಗಿದ್ದರೆ ಪ್ರತಿಯೊಬ್ಬನೂ ತನ್ನ ಜೀವನದಲ್ಲಿ ಏನು ಬೇಕಾದದ್ದನ್ನು ಕೈಕೊಳ್ಳಬಹುದು ಮತ್ತು ಕೊನೆಯ ಗಳಿಗೆಯಲ್ಲಿ ಭಗವಂತನನ್ನು ನೆನಪಿಗೆ ತಂದುಕೊಳ್ಳುವ ತಂತ್ರದ ಮೂಲಕ ಪರಮೋಚ್ಚ ಸ್ಥಿತಿಯನ್ನು ತಲುಪಬಹುದು. ಅದು ಮೂರ್ಖತನದ ವಿಚಾರ.

**ಪ್ರಶ್ನೆ :** *ಪುರಾಣಗಳೂ ಕೂಡ ಮೃತ್ಯುವಿನ ನಂತರ ಸಾಗಿ ಹೋಗಬೇಕಾದ ಹಲವಾರು ನರಕಗಳಿವೆ, ಈ ಜೀವನದಲ್ಲಿ ದುಷ್ಟವಾದದ್ದನ್ನು ಕೈಕೊಂಡವರು ಮೃತ್ಯುವಿನ ನಂತರ ಅಲ್ಲಿ ಜೀವಿಸಬೇಕಾಗುತ್ತದೆ ಎಂದು ಹೇಳುತ್ತವೆ. ಇದು ಸತ್ಯವಾದದ್ದೇ?*

**ಶ್ರೀ ಅ :** ಅದು ಒಂದು ಮೂಢನಂಬಿಕೆ. ಮೃತ್ಯುವಿನ ನಂತರ ಜನರು ಕೆಲವು ಪ್ರಾಣಿಕ ಹಾಗೂ ಮಾನಸಿಕ ಲೋಕಗಳ ಮೂಲಕ ಮತ್ತು ಕೆಲವು ಮನಶ್ಶಾಸ್ತ್ರೀಯ ಸ್ಥಿತಿಗಳ ಮೂಲಕ ಸಾಗಿ ಹೋಗಬೇಕಾಗುತ್ತದೆ. ಇದು ಅವರ ಸ್ವಭಾವ ಹಾಗೂ ಜೀವನದಲ್ಲಿ ಕೈಕೊಂಡ ಕಾರ್ಯಗಳ ಪರಿಣಾಮ ಸ್ವರೂಪದ್ದಾಗಿರುತ್ತದೆ. ನಂತರ ಅವರು ಚೈತ್ಯ ಲೋಕಗಳಿಗೆ ಹೋಗುತ್ತಾರೆ, ಕೆಲ ಕಾಲದ ನಂತರ ಮರಳಿ ಪೃಥ್ವೀ ಜೀವನಕ್ಕೆ ಬರುತ್ತಾರೆ.

(Elements of Yoga, Ch. XIV) **– ಶ್ರೀ ಅರವಿಂದರು**

*



## ಧಾರ್ಮಿಕ ಮತಾಂಧತೆ

ಅಲ್ಲದೆ ಮತಾಂಧತೆಯಲ್ಲಿ ಉದಾತ್ತವಾದದ್ದು ಯಾವುದೂ ಇರುವುದಿಲ್ಲ. – ಉದ್ದೇಶದ ಉದಾತ್ತತೆ ಇರುವುದಿಲ್ಲ, ಆದಾಗ್ಯೂ ಉದ್ದೇಶಕ್ಕಾಗಿ ಅಲ್ಲಿ ಭೀಕರ ಉತ್ಸಾಹವಿರಬಹುದು. ಧಾರ್ಮಿಕ ಮತಾಂಧತೆ ಮನಶ್ಶಾಸ್ತ್ರೀಯ ರೀತಿಯಲ್ಲಿ ನೀಚ ಜನ್ಮ ತಾಳಿದ್ದು ಮತ್ತು ಅಜ್ಞಾನದ್ದು – ಸಾಮಾನ್ಯವಾಗಿ ಅದರ ಕ್ರಿಯೆಯಲ್ಲಿ ಭೀಕರವಾದದ್ದು, ಕ್ರೂರ ಹಾಗೂ ನೀಚವಾದದ್ದು. ತನ್ನನ್ನು ಮಾತ್ರ ಬಲಿಕೊಡುವ ಹುತಾತ್ಮನ ಧಾರ್ಮಿಕ ಉತ್ಸಾಹ ಬೇರೆ ರೀತಿಯದಾಗಿರುತ್ತದೆ.

*

ಕೇವಲ ದೈವೀಸತ್ಯ ಬೇಕೆಂದು ಹೇಳುತ್ತೀ, ಆದಾಗ್ಯೂ ನೀನು ಸಂಕುಚಿತ, ಅಜ್ಞಾನದ ಮತಾಂಧನ ಹಾಗೆ ಮಾತನಾಡುತ್ತೀ, ಮತಾಂಧ ತಾನು ಜನ್ಮ ತಾಳಿದ ಧರ್ಮವೊಂದನ್ನು ಹೊರತುಪಡಿಸಿ ಬೇರಾವುದರ ಮೇಲೆ ನಂಬಿಕೆ ಇರಿಸುವುದನ್ನು ತಿರಸ್ಕರಿಸುತ್ತಾನೆ. ಎಲ್ಲ ಮತಾಂಧತೆ ಮಿಥ್ಯೆಯದಾಗಿರುತ್ತದೆ, ಏಕೆಂದರೆ ಅದು ಭಗವಂತನ ಸ್ವಭಾವ ಹಾಗೂ ದೈವೀಸತ್ಯದ ವಿರುದ್ಧವಾಗಿರುತ್ತದೆ. ದೈವೀಸತ್ಯವನ್ನು ಬ್ಯಾಬಲ್, ವೇದ ಇಲ್ಲವೆ ಕೊರಾನ್‌ಗಳಂತಹ ಏಕೈಕ ಗ್ರಂಥದಲ್ಲಿ ಇಲ್ಲವೆ ಏಕೈಕ ಧರ್ಮದಲ್ಲಿ ಮುಚ್ಚಿಡಲಾಗುವುದಿಲ್ಲ. ಭಗವಂತ ಸನಾತನ, ವಿಶ್ವಂಭರ ಮತ್ತು ಅನಂತನಾಗಿದ್ದಾನೆ ಮತ್ತು ಅವನು ಕೇವಲ ಮುಸಲ್ಮಾನರ ಇಲ್ಲವೆ ಯಹೂದ್ಯರ ಧರ್ಮದ ಸ್ವತ್ತಾಗಲು ಸಾಧ್ಯವಿಲ್ಲ – ಆ ಧರ್ಮಗಳು ಬ್ಯಾಬಲ್ಲಿನ ಮಾರ್ಗದಲ್ಲಿದ್ದು ಅವುಗಳ ಸ್ಥಾಪಕರು ಯಹೂದ್ಯರು ಇಲ್ಲವೆ ಅರೇಬಿಯನ್ ಪ್ರವಾದಿಗಳಾಗಿದ್ದರು. ಹಿಂದೂಗಳು, ಕನ್ಫೂಸಿಯನ್‌ರು, ತಾವೋಯಿಸ್ಟರು ಮತ್ತು ಉಳಿದವರೆಲ್ಲರು ಇವರಿಗೆ ಭಗವಂತನೊಡನೆ ಸಂಬಂಧ ಹೊಂದಿರುವುದಕ್ಕೆ ಮತ್ತು ತಮ್ಮದೇ ರೀತಿಯಲ್ಲಿ ದೈವೀಸತ್ಯವನ್ನು ಕಂಡುಕೊಳ್ಳುವುದಕ್ಕೆ ಸಮಾನ ಹಕ್ಕಿರುತ್ತದೆ. ಎಲ್ಲ ಧರ್ಮಗಳಲ್ಲಿ ಒಂದಿಷ್ಟು ಸತ್ಯವಿರುತ್ತದೆ, ಆದರೆ ಯಾವ ಧರ್ಮದಲ್ಲಿಯೂ ಇಡಿಯಾದ ಸತ್ಯವಿರುವುದಿಲ್ಲ, ಅವೆಲ್ಲವೂ ಕಾಲಕ್ರಮದಲ್ಲಿ ಸೃಷ್ಟಿಯಾದವುಗಳು ಮತ್ತು ಕೊನೆಗೆ ಕುಂದಿ ಹೋಗುತ್ತವೆ, ನಾಶವಾಗುತ್ತವೆ. ಮಹಮ್ಮದನೇ ಸ್ವತಃ ಕೋರಾನ ಭಗವಂತನ ಕೊನೆಯ ಸಂದೇಶ ಮತ್ತು ಬೇರೆ ಯಾವ ಸತ್ಯವೂ ಇರುವುದಿಲ್ಲ ಎಂಬ ನಟನೆ ಮಾಡಿಲ್ಲ. ಭಗವಂತ ಮತ್ತು ದೈವೀಸತ್ಯ ಈ ಧರ್ಮಗಳನ್ನು ಮೀರಿ ಉಳಿದುಕೊಳ್ಳುತ್ತವೆ ಮತ್ತು ಭಗವಂತನ ವಿವೇಕ ಆಯ್ದುಕೊಂಡ ರೂಪ ಹಾಗೂ ರೀತಿಗಳಲ್ಲಿ ಧರ್ಮಗಳು ತಮ್ಮನ್ನು ಪ್ರಕಟಿಸುತ್ತವೆ.

ಭಗವಂತನನ್ನು ನಿನ್ನ ಸಂಕುಚಿತ ಮಿದುಳಿನ ಸೀಮಿತತೆಯಲ್ಲಿ ಮುಚ್ಚಿಹಾಕಲಾರೆ ಇಲ್ಲವೆ ದೈವೀ ಸಾಮರ್ಥ್ಯಕ್ಕೆ ಮತ್ತು ಪ್ರಜ್ಞೆಗೆ ಅದು ಹೇಗೆ, ಎಲ್ಲಿ ಮತ್ತು ಯಾರ ಮೂಲಕ ಪ್ರಕಟವಾಗಬೇಕು ಎಂಬುದನ್ನು ಕುರಿತು ಆದೇಶ ನೀಡಲಾರೆ. ದೈವೀ ಸರ್ವ ಸಾಮರ್ಥ್ಯದ ವಿರುದ್ಧ ನಿನ್ನ ನಿಶ್ಯಕ್ತ ಅಡೆತಡೆಗಳನ್ನು ಇರಿಸಲಾರೆ. ಇವು ಸರಳ ಸತ್ಯಗಳು, ಇವುಗಳನ್ನು ಈಗ ಜಗತ್ತಿನಾದ್ಯಂತ ಗುರುತಿಸಲಾಗುತ್ತಿದೆ, ಕೇವಲ ಮನಸ್ಸಿನಲ್ಲಿ ಬಾಲಿಶರಾದವರು ಯಾವುದೋ ಒಂದು ಗತಕಾಲದ ಸೂತ್ರದಲ್ಲಿ ಸಸ್ಯಗಳಂತೆ ಬೆಳೆಯುತ್ತ ಅವುಗಳನ್ನು ನಿರಾಕರಿಸುತ್ತಾರೆ.

ನಾನು ಉತ್ತರ ಬರೆಯಬೇಕೆಂದು ಒತ್ತಾಯ ತಂದಿರುವಿ ಮತ್ತು ದೈವೀಸತ್ಯದ ಬಗ್ಗೆ ಪ್ರಶ್ನೆ ಕೇಳಿರುವಿ, ನಾನು ಉತ್ತರ ಕೊಟ್ಟಿದ್ದೇನೆ. ಆದರೆ ನೀನು ಮುಸಲ್ಮಾನ ಆಗಲು ಬಯಸಿದರೆ ಯಾರೂ ನಿನ್ನನ್ನು ತಡೆಯಲಾರರು. ನಾನು ನಿನಗೆ ತೆರೆದು ತೋರಿಸಿದ ಸತ್ಯ ತಿಳಿದುಕೊಳ್ಳಲು, ಸಹಿಸಿಕೊಳ್ಳಲು ಬಹಳ ಭವ್ಯವಾದದ್ದಾಗಿದ್ದರೆ, ನೀನು ಇಲ್ಲಿಂದ ಹೊರಟು ಹೋಗಬಹುದು ಮತ್ತು ನಿನ್ನದೇ ಅಜ್ಞಾನದಲ್ಲಿ ಜೀವಿಸಬಹುದು. ಯಾರನ್ನಾದರೂ ಮತಾಂತರ ಮಾಡುವುದಕ್ಕಾಗಿ ನಾನಿರುವುದಿಲ್ಲ.

ಈಗ ನಿನ್ನನ್ನು ತನ್ನ ಉದ್ದೇಶಕ್ಕಾಗಿ ಬಳಸುತ್ತಿರುವ ಅಂಧಕಾರದ ಹಾಗೂ ಅಜ್ಞಾನದ ಸಾಮರ್ಥ್ಯ ನಿನ್ನೊಳಗೆ ಇರಿಸಿರುವ ವಿಚಾರಗಳಿಗೆ ನಾನು ಉತ್ತರ ನೀಡುತ್ತಿದ್ದೇನೆ. ಈ ಸಾಮರ್ಥ್ಯ ಸ್ಪಷ್ಟವಾಗಿ ದೈವೀ ಸಾಮರ್ಥ್ಯವಲ್ಲ. ಅದು ಮಿಥ್ಯೆಯ ಸಾಮರ್ಥ್ಯವಾಗಿದ್ದು, ಇಸ್ಲಾಮ ಧರ್ಮಕ್ಕೆ ಸೇರಿರದ ಆದರೆ ಇಸ್ಲಾಮ ನಂಬಿಕೆಯ ಹಾಗೂ ಕ್ರಿಯೆಯ ವಿಕಟ ಚಿತ್ರಣ ಮಾಡುವುದನ್ನು, ಹೇಳುವುದನ್ನು ನೀನು ಕೈಕೊಳ್ಳುವಂತೆ ಮಾಡುತ್ತದೆ. ಅದರ ಉದ್ದೇಶ ಇಸ್ಲಾಮ ಧರ್ಮವನ್ನಷ್ಟೇ ಅಲ್ಲ, ಆದರೆ ಎಲ್ಲ ಆಧ್ಯಾತ್ಮಿಕತೆ ಮತ್ತು ಧರ್ಮ ನಿನ್ನ ಮೂಲಕ ಹಾಸ್ಯಾಸ್ಪದವಾಗುವಂತೆ ಮಾಡುತ್ತದೆ. ಸ್ವಲ್ಪಮಟ್ಟಿಗೆ ಮಾತ್ರ ಸಾಧ್ಯವಾಗಬಹುದಾದರೂ ಪೃಥ್ವಿಯ ಮೇಲೆ ದೈವೀ ಕಾರ್ಯವನ್ನು ಕ್ಷೋಭೆಗೊಳಿಸುವ ಭರವಸೆಯನ್ನು ಅದು ತಾಳಿದೆ. ಅದು ನಿನ್ನ ಮಿದುಳನ್ನು ಹಾಳುಮಾಡಲು, ಬುದ್ಧಿಶಕ್ತಿಯನ್ನು ನಾಶಮಾಡಲು ಪ್ರಯತ್ನಿಸುತ್ತದೆ, ಅವಿಚಾರದ ವಿಷಯಗಳನ್ನು ಹೇಳುವಂತೆ, ಮೂರ್ಖತನದ ಕಾರ್ಯಗಳನ್ನು ಮಾಡುವಂತೆ ನಿನ್ನನ್ನು ಪ್ರೇರೇಪಿಸುತ್ತದೆ, ನಿನ್ನ ಮಿತ್ರರಿಗೆ ಹಾಗೂ ಹಿತಚಿಂತಕರಿಗೆ ನೀನು ವೇದನೆ ಹಾಗೂ ಕರುಣೆಗಳಿಗೆ ಪಾತ್ರನಾಗುವ ಒಬ್ಬನಾಗಿರುವಂತೆ ಕಂಡುಬರುವೆ, ಉಳಿದವರ ನಗೆಪಾಟಲಿಗೆ ಈಡಾಗುವೆ. ನಿನಗಾಗಿ ಇಲ್ಲವೆ ಭಗವಂತನಿಗಾಗಿ, ಧರ್ಮಕ್ಕಾಗಿ ನಿನ್ನಲ್ಲಿ ಗೌರವವೇನಾದರೂ



ಇದ್ದರೆ, ನೀನು ನಿಜವಾಗಿ ದೈವೀಸತ್ಯವನ್ನು, ದೈವೀ ಪ್ರಕಾಶವನ್ನು ಬಯಸುತ್ತಿದ್ದರೆ, ನಿನ್ನ ಆತ್ಮ ಎಚ್ಚರಗೊಳ್ಳುವುದನ್ನು, ಅದು ಮುಕ್ತಿಯನ್ನು ಕಾಣುವುದನ್ನು ಇಷ್ಟಪಡುತ್ತಿದ್ದರೆ, ನೀನು ಮಾತನಾಡುವುದನ್ನು, ಇಂತಹ ಅವಿಚಾರದ ಕಾರ್ಯಗಳನ್ನು ಮಾಡುವುದನ್ನು ನಿಲ್ಲಿಸಬೇಕು, ಈಗ ನಿನ್ನನ್ನು ಬೆಂಬತ್ತಿರುವ ಪ್ರಭಾವವನ್ನು ದೂರ ಚೆಲ್ಲಿಬಿಡಬೇಕು.

**(22/490, 32/109–10)** **– ಶ್ರೀ ಅರವಿಂದರು**

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 11ನೇ ಜೂನ್ 2013 ರ ಮಂಗಳವಾರದಂದು ಶ್ರೀ ಅರವಿಂದರ 13 ನೇ ವರ್ಷದ ಪುಣ್ಯಾವಶೇಷದ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7 ರಿಂದ 7.30 ರ ವರೆಗೆ ಸಾಮೂಹಿಕ ಧ್ಯಾನವನ್ನು ಮಾಡಲಾಯಿತು. ತತ್ಸಂಬಂಧ ಅದೇ ದಿನ ಸಾಯಂಕಾಲ 5 ರಿಂದ 6.30 ರ ವರೆಗೆ ಶ್ರೀಯುತ ಲಹರಿಯವರಿಂದ "On Ashram Samadhi and Significance of Sri Aurobindo leaving his body" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರುಬಂಧುಗಳು ಹಾಗೂ ಇತರರು ಹಾಜರಿದ್ದರು.



*"Be sincere and absolute in your consecration to the Divine and your life will become harmonious and beautiful."*

**- The Mother**

**RNI No. 22511/1971**
No. of Pages **52 + 4 (Cov. Page)**
KAR Reg No : CPMG/KA/BGS/368/2012-2014
Permitted to Post 10th of Every Month. Reg. Valid till : 31-12-2014
Licensed to Post at MBC, Bangalore GPO, Bangalore - 560 001

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು- ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಅ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459268

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bangalore - 560 078. Phone : 080 - 2244 9882.